ಕೊಡಗಿನ ಗೌರಮ್ಮನ ಕಥಾಸಾಹಿತ್ಯದಲ್ಲಿ ಕಥನ ಪ್ರಪಂಚ : ಒಂದು ಪರಿಕಲ್ಪನಾತ್ಮಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ನಿಬಂಧ)

ಸಂಶೋಧಕರು
ಫೈರೋಜ

ಮಾರ್ಗದರ್ಶಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೮

ಶಂ.ಶಂ.ತ. ಬಿಸ್ಲ.

ಕೊಡಗಿನ ಗೌರಮ್ಮನ ಕಥಾಸಾಹಿತ್ಯದಲ್ಲಿ ಕಥನ ಪ್ರಪಂಚ : ಒಂದು ಪರಿಕಲ್ಪನಾತ್ಮಕ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ನಿಬಂಧ)

ಸಂಶೋಧಕರು

ಫೈರೋಜ

ಮಾರ್ಗದರ್ಶಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೮

ಪ್ರಮಾಣ ಪತ್ರ

ಕೊಡಗಿನ ಗೌರಮ್ಮನ ಕಥಾಸಾಹಿತ್ಯದಲ್ಲಿ ಕಥನ ಪ್ರಪಂಚ : ಒಂದು ಪರಿಕಲ್ಪನಾತ್ಮಕ ಅಧ್ಯಯನ ಎಂಬ ನಿಬಂಧವನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಫೈರೋಜ

ದಿನಾಂಕ : 15.10.08

ಸ್ಥಳ : ವಿದ್ಯಾರಣ್ಯ

ಫೈರೋಜ
ಸಂಶೋಧಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ದೃಢೀಕರಣ ಪತ್ರ

ಕೊಡಗಿನ ಗೌರಮ್ಮನ ಕಥಾಸಾಹಿತ್ಯದಲ್ಲಿ ಕಥನ ಪ್ರಪಂಚ : ಒಂದು ಪರಿಕಲ್ಪನಾತ್ಮಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಫೈರೋಜ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 15.10.08

ಸ್ಥಳ : ವಿದ್ಯಾರಣ್ಯ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಮಾರ್ಗದರ್ಶಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಭಾವ ಚಿತ್ರ

ಕೊಡಗಿನ ಗೌರಮ್ಮ



ಕೊಡಗಿನ ಗೌರಮ್ಮ
(೧೯೧೨ ರಿಂದ ೧೯೩೯)

ಮೂಲ : ಕಾಳೇಗೌಡ ನಾಗವಾರ, ಜೀವನ ಪ್ರೀತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕೊಡಗಿನ ಗೌರಮ್ಮ ಕನ್ನಡ ನವೋದಯ ಕಾಲದ ಸೃಜನಶೀಲ ಸಾಹಿತಿಯಾಗಿ, ಅದರಲ್ಲೂ ಮುಖ್ಯವಾಗಿ ಮಹಿಳಾ ಸಾಹಿತಿಯಾಗಿ ತುಂಬಾ ಹೆಸರಾದವರು. ತಮ್ಮ ಸೂಕ್ಷ್ಮಸಂವೇದನೆಗಳಿಂದ ಕನ್ನಡ ಕಥಾ ಪ್ರಪಂಚಕ್ಕೆ ಅಡಿಯಿಟ್ಟ ವಿಶಿಷ್ಟ ಕಥಾಗಾರ್ತಿ ಇವರು. ಇವರ ಕಥೆಗಳಲ್ಲಿ "ಹೆಣ್ಣಿನ ಮನಸ್ಸಿನ ಒಳತೋಟಿಗಳು, ಭಾವುಕ ಸಂಘರ್ಷಗಳು, ಅಸಹಾಯಕತೆಗಳು ಹಾಗೂ ಸ್ತ್ರೀ ಮನಸ್ಸಿನ ಭಾವುಕ ಪ್ರಪಂಚದ ಸೂಕ್ಷ್ಮತೆಗಳು ಪ್ರತಿಬಿಂಬಿತವಾಗಿದೆ" ಎಂಬ ಪ್ರೊ. ಜಿ.ಎಸ್. ಆಮೂರರ ಮಾತುಗಳನ್ನು ನೆನೆಯುವುದು ಅವಶ್ಯ. ಕೊಡಗಿನ ಗೌರಮ್ಮ ಬರೆದಿರುವುದು ಕಡಿಮೆಯಾದರೂ ಸತ್ವದಲ್ಲಿ ಉತ್ತಮವಾಗಿದೆ. 'ಕಂಬನಿ ಮತ್ತು ಚಿಗುರು' ಗೌರಮ್ಮನವರ ಪ್ರಕಟಿತ ಕಥಾಸಂಕಲನವಾಗಿದೆ. 'ಕಂಬನಿ ಮತ್ತು ಚಿಗುರು' ಕನ್ನಡ ಕಥಾಸಾಹಿತ್ಯಕ್ಕೆ ಗೌರಮ್ಮ ನೀಡಿದ ಅಮೂಲ್ಯವಾದ ಕೊಡುಗೆ. ಸಂಪ್ರದಾಯಸ್ಥ ಸಮಾಜವೊಂದರಲ್ಲಿರುವ ವಿಧವಾ ಸಮಸ್ಯೆ. ಪ್ರೇಮ, ಕೌಟುಂಬಿಕ ಪ್ರೀತಿ, ಅಲ್ಲಿಯ ಮಾನವೀಯ ಸಂಬಂಧಗಳು, ಶಿಕ್ಷಣ, ವರದಕ್ಷಿಣೆ, ಸೌಂದರ್ಯಪ್ರಜ್ಞೆ, ಜೀವನಪ್ರೀತಿ ಮತ್ತು ಜಾತಿ ಸಂಘರ್ಷ ಮುಂತಾದ ಹಲವು ಬಗೆಯ ಕಹಿಯಾದ ವಾಸ್ತವ ಸಂಗತಿಗಳು ಗೌರಮ್ಮನವರ ಕಥೆಗಳಲ್ಲಿ ಕಂಡು ಬರುತ್ತವೆ. ಈ ಮೂಲಕ ಕಥನದ ಪರಿಕಲ್ಪನೆ, ಕಥೆ ಮತ್ತು ಕಥನದ ನೆಲೆಗಳು ಹಾಗೂ ಕೊಡಗಿನ ಗೌರಮ್ಮನ ಕಥೆಗಳಲ್ಲಿ ಬಳಸಿದಂತಹ ಕಥನ ಕ್ರಮವನ್ನು ಕುರಿತು ವಿಶೇಷವಾದ ಅಧ್ಯಯನ ಮಾಡಿರುವುದು ಈ ನಿಬಂಧದ ಮುಖ್ಯ ಉದ್ದೇಶವಾಗಿದೆ.

ಕೊಡಗಿನ ಗೌರಮ್ಮನ ಕಥೆಗಳ ಒಳಗೆ ನಿಕ್ಷಿಪ್ತವಾಗಿರುವ ಕಥನ ಕ್ರಮವನ್ನು ಪಾಶ್ಚಾತ್ಯ ಮತ್ತು ಪೌರ್ವಾತ್ಯ ತಾತ್ವಿಕ ನೆಲೆಗಳ ಮೂಲಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಮೂಲಕ 'ಕಥನ ಕ್ರಮ' ಎನ್ನುವುದು ಕೇವಲ ತಾಂತ್ರಿಕ ವಿನ್ಯಾಸವಾಗದೆ, ಜೀವನವನ್ನು ನೋಡುವ, ತಿಳಿಯುವ ಬಗೆಯನ್ನು ಪರ್ಯಾಯವಾಗಿ ಶೋಧನೆಗೆ ಒಳಪಡಿಸುವ, ತುರ್ತನ್ನು ಈ ನಿಬಂಧವು ಹೊಂದಿದೆ. ಈ ಬಗೆಯ ಅಧ್ಯಯನ ಈವರೆಗೂ ಕೊಡಗಿನ ಗೌರಮ್ಮನ ಕಥೆಗಳನ್ನು ಕುರಿತು ನಡೆದಿಲ್ಲ. ಆ ಬಗೆಯ ಅಧ್ಯಯನಕ್ಕೆ ತಾತ್ವಿಕ ಪರಿವಿನ್ಯಾಸ ನಿರ್ಮಿಸುವುದು ಅಗತ್ಯವಾಗಿದ್ದು, ಆ ನಿಟ್ಟಿನಲ್ಲಿ ಕ್ರಮಿಸಲಾಗಿದೆ. ಕೊಡಗಿನ ಗೌರಮ್ಮನ ಕಥೆಗಳನ್ನು ಇಟ್ಟುಕೊಂಡು ತಾತ್ವಿಕ ವಿಶ್ಲೇಷಣೆಯ ಹಾಗೂ ಪರಿಕಲ್ಪನಾತ್ಮಕ ಅಧ್ಯಯನದ ಮೂಲಕ ಒಮ್ಮೆ ನಿಬಂಧದ ಅಧ್ಯಾಯಗಳನ್ನು ಹೀಗೆ ವಿಂಗಡಿಸಿಕೊಳ್ಳಲಾಗಿದೆ.

ಪ್ರಸ್ತುತ ನಿಬಂಧದ ಸ್ವರೂಪ

ಪ್ರಸ್ತುತ ನಿಬಂಧವು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಅಧ್ಯಾಯಗಳು ಈ ರೀತಿಯಾಗಿ ಇವೆ.

ಅಧ್ಯಾಯ ೧. ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ ೨. ಕಥನ ಪರಿಕಲ್ಪನೆಯ ವ್ಯಾಪ್ತಿ ಮತ್ತು ವಿಶ್ಲೇಷಣೆ

ಅಧ್ಯಾಯ ೩. ಕಥೆ ಮತ್ತು ಕಥನದ ನೆಲೆಗಳು

ಅಧ್ಯಾಯ ೪. ಕೊಡಗಿನ ಗೌರಮ್ಮನ ಕಥೆಗಳು ಮತ್ತು ಕಥನ ಕಲೆಯ ವಿನ್ಯಾಸ

ಅಧ್ಯಾಯ ೫. ಕೊಡಗಿನ ಗೌರಮ್ಮನ ಕಥೆಗಳ ಆಶಯ ಮತ್ತು ಕಥನ ಕ್ರಮದ ನೆಲೆಗಳು

ಅಧ್ಯಾಯ ೬. ಕೊಡಗಿನ ಗೌರಮ್ಮನವರ ಆಯ್ದಕಥೆಗಳ ಮುಖಾಂತರ ಕಥಾ-ಕಥನದ ವಿಶ್ಲೇಷಣೆ

೧. ಪುನರ್ವಿವಾಹ

೨. ಆಹುತಿ

೩. ನನ್ನ ಮದುವೆ

೪. ಒಂದು ಪುಟ್ಟ ಚಿತ್ರ

೫. ಮನುವಿನ ರಾಣಿ

ಅಧ್ಯಾಯ ೭. ಉಪಸಂಹಾರ

ಅಧ್ಯಾಯ ಎರಡು - ಕಥನ ಪರಿಕಲ್ಪನೆಯ ವ್ಯಾಪ್ತಿ ಮತ್ತು ವಿಶ್ಲೇಷಣೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ತುಂಬಾ ಹಿಂದಿನಿಂದಲೂ 'ಕಥನ' (Narration) ಪ್ರಕ್ರಿಯೆಯು ಒಂದು ಬಹುಮುಖ್ಯ ತಂತ್ರವಾಗಿ ಮತ್ತು ಜ್ಞಾನದ ಉತ್ಪಾದನೆಯ ಮುಂದುವರಿಕೆಯಾಗಿ ಕಾರ್ಯನಿರ್ವಹಿಸಿದೆ. ಭಾರತೀಯರಲ್ಲಿ ಕಥೆ ಕಟ್ಟುವ ಕ್ರಮ ಅನೇಕ. ಆದರೆ ಆಧುನಿಕ ಕಥನಕ್ರಮವು ಪ್ರಾಚೀನ ಕಥನಕ್ರಮಕ್ಕಿಂತ ಭಿನ್ನವಾಗಿದೆ. ಹಾಗಾಗಿ ಕಥನದ ಪರಿಕಲ್ಪನೆಯನ್ನು ಈ ಕೆಳಕಂಡಂತೆ ಮೂರು ಬಗೆಯಾಗಿ ನೋಡಲಾಗುವುದು.

೧. ಜನಪದ ಕೃತಿಗಳ ಕಥನಕ್ರಮ

೨. ಶಿಷ್ಟ ಕೃತಿಗಳ ಕಥನಕ್ರಮ

೩. ಆಧುನಿಕ ಕೃತಿಗಳ ಕಥನ ಕ್ರಮ

ಅಧ್ಯಾಯ ಮೂರು - ಕಥೆ ಮತ್ತು ಕಥನದ ನೆಲೆಗಳು ಎಂದು. ಅದರಲ್ಲಿ 'ಕಥೆ' ಎನ್ನುವುದು 'ಕಥ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಅದರ ಅರ್ಥ 'ಹೇಳು' ಎಂದು. 'ಕಥನ' ಎಂದರೆ ನಿರೂಪಣೆ, ವಿವರಣೆ, ಹೇಳುವಿಕೆ, ಕಥಿಸುವಿಕೆ ಎಂದು ಹೀಗೆ ಹಲವು ಅರ್ಥಗಳಿವೆ. ಕಥೆ ಹುಟ್ಟಿದ ನೆಲೆ, ಅದು ವ್ಯಾಪಿಸಿರುವ ಬಗೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಈ ಎರಡು ನೆಲೆಗಟ್ಟಿನ

ಆಂತರ್ಯದ ಒಳಗೆ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ, ರಾಜಕೀಯ - ಹೀಗೆ ವಿವಿಧ ಬಗೆಯ ಆಯಾಮಗಳು ಕಂಡುಬರುತ್ತವೆ. ಇವನ್ನು ಕಥನಕ್ರಮದ ನೆಲೆಗಳು ಎಂದು ಗುರುತಿಸಿಕೊಂಡು ಈ ಅಧ್ಯಯನದಲ್ಲಿ ಮುಂದುವರೆಯಲಾಗಿದೆ. ಕಥನಕ್ರಮದ ನೆಲೆಗಳನ್ನು,

- ವ್ಯಷ್ಟಿ-ಸಮಷ್ಟಿ ಕೇಂದ್ರಿತ ನೆಲೆ
- ಭಾಷಿಕ ನೆಲೆ
- ವೈಚಾರಿಕ ನೆಲೆ

ಎಂದು ಮೂರು ಬಗೆಯಲ್ಲಿ ವಿಂಗಡಣೆ ಮಾಡಿ ಅಧ್ಯಯನ ಮಾಡಲಾಗುವುದು.

ಅಧ್ಯಾಯ ನಾಲ್ಕರಲ್ಲಿ - ಕೊಡಗಿನ ಗೌರಮ್ಮನ ಕಥೆಗಳನ್ನು ಹಾಗೂ ಆ ಕಥೆಗಳಲ್ಲಿ ವ್ಯಕ್ತವಾಗಿರುವಂತಹ ಕಥನ ಕಲೆಯನ್ನು ಅಧ್ಯಯನ ಮಾಡಲಾಗುವುದು. ಅದನ್ನು

- ಸಾಮಾಜಿಕ ವಿನ್ಯಾಸ
- ಭಾಷಿಕ ವಿನ್ಯಾಸ
- ಸೌಂದರ್ಯಾತ್ಮಕ ವಿನ್ಯಾಸ

ಎಂದೂ ಮೂರು ಬಗೆಯಲ್ಲಿ ನೋಡಲಾಗುವುದು.

ಅಧ್ಯಾಯ ಐದರಲ್ಲಿ - ಕೊಡಗಿನ ಗೌರಮ್ಮನವರ ಕಥೆಗಳ ಪ್ರಮುಖ ಆಶಯವೇನು ಎಂದು ನೋಡುವುದರ ಮೂಲಕ ಕಥನಕ್ರಮದ ನೆಲೆಗಳ ಗುರುತಿಸುವಿಕೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗುವುದು. 'ಯಾರು?' ಕಥೆಯಲ್ಲಿ ತನ್ನ ಗಂಡನ ತಿರಸ್ಕಾರದಿಂದಲೂ ಜೀವನದಲ್ಲಿ ಹತಾಶ ಮನೋಭಾವ ಹೊಂದದೆ, ಜೀವನವನ್ನು ದಿಟ್ಟತನದಿಂದ ಎದುರಿಸುವ ಒಂದು ಸನ್ನಿವೇಶವನ್ನು ಕಥೆಯ ಪ್ರಮುಖ ಆಶಯವನ್ನಾಗಿಸಿಕೊಂಡು ಬರೆದಿರುವುದನ್ನು ನೋಡಲಾಗುವುದು. ಅದೇ ರೀತಿ ಗೌರಮ್ಮನವರ ಕೆಲವು ಕಥೆಗಳ ಪ್ರಮುಖ ಆಶಯವೇನು ಎನ್ನುವುದನ್ನು ಈ ಭಾಗದಲ್ಲಿ ನೋಡ ಲಾಗುವುದು.

ಅಧ್ಯಾಯ ಆರರಲ್ಲಿ - ಕೊಡಗಿನ ಗೌರಮ್ಮನವರ ಕೆಲವು ಕಥೆಯನ್ನು ಆಯ್ದುಕೊಂಡು ಅವುಗಳಲ್ಲಿ ವ್ಯಕ್ತವಾಗಿರುವಂಥ ಕಥಾ-ಕಥನದ ವಿಶ್ಲೇಷಣೆಯನ್ನು ಮಾಡಲಾಗುವುದು. ಆ ಆಯ್ದ ಕಥೆಗಳಲ್ಲಿ ಯಾವ ಬಗೆಯ ಆಕೃತಿಗಳು ನಿರ್ಮಾಣಗೊಂಡಿವೆ ಎನ್ನುವುದನ್ನು ಈ ಭಾಗದಲ್ಲಿ ನೋಡ ಲಾಗುವುದು. ಉದಾಹರಣೆಗೆ ನೋಡುವುದಾದರೆ, 'ಮನುವಿನ ರಾಣಿ' ಎಂಬ ಕಥೆಯಲ್ಲಿ ವೇಶ್ಯೆಯೊಬ್ಬಳ ಪ್ರೇಮದ ವಿಷಯಕ್ಕೆ ಸಂಬಂಧಿಸಿದಂತಹ ಆಕೃತಿ ಹಾಗೂ 'ಆಹುತಿ' ಕಥೆಯಲ್ಲಿ ವರದಕ್ಷಿಣೆ ಕುರಿತು ಅಧ್ಯಯನದ ವೇಳೆಯಲ್ಲಿ ಗಮನಿಸಲಾಗುವುದು.

ಅಧ್ಯಾಯ ಏಳರಲ್ಲಿ - ಕಥನಕಲೆಯ ಒಟ್ಟು ಗ್ರಹಿಕೆಯ ಜೊತೆಗೆ ಒಟ್ಟು ನಿಬಂಧದ ಆಶಯವನ್ನು ಕ್ರೋಢೀಕರಿಸಲಾಗುವುದು.

• • •

ಅಧ್ಯಾಯ ೨

ಕಥನ ಪರಿಕಲ್ಪನೆಯ ವ್ಯಾಪ್ತಿ ಮತ್ತು ವಿಶ್ಲೇಷಣೆ

ಅಧ್ಯಾಯ ೨

ಕಥನ ಪರಿಕಲ್ಪನೆಯ ವ್ಯಾಪ್ತಿ ಮತ್ತು ವಿಶ್ಲೇಷಣೆ

ಭಾರತೀಯ ಸಾಹಿತ್ಯವು ಕಥಾ ಮೂಲವಾದುದು. ಕನ್ನಡ ಸಾಹಿತ್ಯವು ಇದರಿಂದ ಹೊರತಾದುದಲ್ಲ. ಜನಪದ ಸಾಹಿತ್ಯ, ಶಿಷ್ಟ ಸಾಹಿತ್ಯ, ಆಧುನಿಕ ಸಾಹಿತ್ಯ ಇಲ್ಲೆಲ್ಲಾ ಕಥನವು ಜೀವನದಿಯಂತೆ ಹರಿಯುತ್ತದೆ. ಆಧುನಿಕ ಕಥನಕ್ರಮವು ಪ್ರಾಚೀನ ಕಥನಕ್ರಮಕ್ಕಿಂತ ತೀರ ಭಿನ್ನ. ಕಥನವು ಹುಟ್ಟಬೇಕಾದರೆ ಅಥವಾ ಕಥನದ ಸಂವಹನ ಕ್ರಿಯೆಯು ಸಾಗಬೇಕಾದರೆ ಕನಿಷ್ಠಪಕ್ಷ ಒಬ್ಬ ಕಥೆಯನ್ನು ಹೇಳುವವನು ಮತ್ತು ಕಥೆಯನ್ನು ಕೇಳುವವನು ಒಬ್ಬ ಇರಲೇಬೇಕು. ಇದರ ಜೊತೆಗೆ ಕಥೆ ಹೇಳುವವನಿಗೆ ಉತ್ಸಾಹ ಮತ್ತು ಕಥೆ ಕೇಳುಗನಿಗೆ ಕುತೂಹಲವೂ ಇದ್ದಾಗ ಮಾತ್ರ ಆ ಕ್ರಿಯೆ ಪೂರ್ಣಗೊಳ್ಳುತ್ತದೆ. 'ಕಥನ' (Narration) ಪ್ರಕ್ರಿಯೆಯು ಒಂದು ಬಹುಮುಖ್ಯ ತಂತ್ರವಾಗಿ ಮತ್ತು ಜ್ಞಾನದ ಉತ್ಪಾದನೆಯ ಮುಂದುವರಿಕೆಯಾಗಿ ಕಾರ್ಯನಿರ್ವಹಿಸಿದೆ. 'ಕಥನ'ದ ಪರಿಕಲ್ಪನೆಯನ್ನು ಮೂರು ಬಗೆಯಲ್ಲಿ ನೋಡಬಹುದು.

೧. ಜನಪದ ಕೃತಿಗಳ ಕಥನಕ್ರಮ.

೨. ಶಿಷ್ಟ ಕೃತಿಗಳ ಕಥನಕ್ರಮ.

೩. ಆಧುನಿಕ ಕೃತಿಗಳ ಕಥನಕ್ರಮ.

೧. ಜನಪದ ಕೃತಿಗಳ ಕಥನಕ್ರಮ.

ಸಂಸ್ಕೃತಿಯ ಬೆಳವಣಿಗೆ ಆದಂತೆಲ್ಲಾ ಅದರ ಪ್ರಾಚೀನತೆಯೂ ಹಿಂದಕ್ಕೆ ಹೋಗುವುದು. ಆದಿ ಅಥವಾ ಪ್ರಾರಂಭ ಕಾಲದಿಂದ ಹಿಡಿದು ಇಂದಿನವರೆಗೂ ಸಂಸ್ಕೃತಿಯನ್ನು ಪುನರಾವಲೋಕನ ಮಾಡಿದರೆ ಬದಲಾವಣೆಯಾಗಿರುವ ಎಷ್ಟೋ ಅಂಶಗಳು ಕಂಡುಬರುತ್ತವೆ. ಸಂಸ್ಕೃತಿಯ ಮೂಲಭೂತ ಅಂಶಗಳಲ್ಲಿ ಸಾರ್ವತ್ರಿಕತೆಯೂ ಬಹುಮುಖ್ಯವಾಗುತ್ತದೆ. ಈ ಸಾರ್ವತ್ರಿಕತೆಯೂ ಜನಪದರ ಪರ್ಯಾಯ ರೂಪವಾಗಿ ರುವುದಾಗಿ, ಅದು ಆದಿಮ, ಅನಾಗರಿಕ ಹಾಗೂ ನಾಗರಿಕಗಳೆಂಬ ಮೂರು ಘಟ್ಟಗಳಲ್ಲಿ ವಿಕಾಸ ಹೊಂದುತ್ತದೆ ಎಂದು ಮಾನವಶಾಸ್ತ್ರದ ಪಿತಾಮಹ ಇ.ಬಿ. ಟೈಲರ್ ಹೇಳುತ್ತಾರೆ. ಮೊದಲನೆಯದಾಗಿ

ಗೋಚರಿಸುವ ಆದಿಮ ಘಟ್ಟದಲ್ಲಿಯೇ ಜನಪದದ ಸೃಷ್ಟಿ ಅಡಗಿದೆ. ಸಂಸ್ಕೃತಿ ರೂಪುಗೊಂಡಂತೆಲ್ಲಾ ಅದಕ್ಕೆ ತಕ್ಕಂತೆ ಕಥೆಗಳು ಹುಟ್ಟಿಕೊಂಡವು. ಸಂಸ್ಕೃತಿಗೆ, ಸಂಪ್ರದಾಯಗಳಿಗೆ ಅರ್ಥ ವಿವರಣೆ ಕೊಡುವ ಪ್ರಯತ್ನ ಈ ಕಥೆಗಳಲ್ಲಿ ವ್ಯಕ್ತವಾಯಿತು.

ಜನಪದ ಕಥೆಗಳ ಉಗಮದ ಬಗೆಗೆ ಗ್ರಿಮ್ ಸೋದರರು ತಮ್ಮ Kinder und Haus Marchen ಗ್ರಂಥದಲ್ಲಿ ಎತ್ತಿದ ಪ್ರಶ್ನೆ ಅನೇಕ ಸಿದ್ಧಾಂತಗಳ ಉಗಮಕ್ಕೆ ಕಾರಣವಾಯಿತು. ಕಥನದ ವೈವಿಧ್ಯಮಯವಾದ ಮಾದರಿಗೆ ಜನಪದ ಕಾವ್ಯಗಳು, ಲಾವಣಿಗಳು, ಕಥೆಗಳು ಸಹಜವಾದ ದಾಖಲೆಗಳಾಗಿವೆ. ಮಲೆಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಮುಂತಾದ ಜನಪದ ಕಾವ್ಯಗಳಲ್ಲಿ ಹರಿಯುತ್ತಿರುವ ಕಥನವು ವಿಭಿನ್ನ ಮಾದರಿಗಳ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ. ಈ ಕಾವ್ಯಗಳಲ್ಲಿ ಬರುವ ವ್ಯಕ್ತಿಗಳ ಸಾಂಸ್ಕೃತಿಕ ವ್ಯಕ್ತಿತ್ವ ಹಾಗೂ ಅವರ ಶೌರ್ಯ, ಸಾಧನೆಗಳನ್ನು ವಿವಿಧ ಬಗೆಯ ಲಯಗಾರಿಕೆಯಿಂದ ಕಥನದ ರೂಪದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಈ ಕಾವ್ಯಗಳು ಮೌಖಿಕ ಪರಂಪರೆಯಲ್ಲಿ ಬಾಯಿಂದ ಬಾಯಿಗೆ ಅನಕ್ಷರಸ್ಥ ಸಮುದಾಯದಲ್ಲಿ ಉಳಿಗುಕೊಂಡು ಬರುವುದಕ್ಕೆ ಕಾರಣ ಇದರಲ್ಲಿ ನಿರಂತರವಾಗಿ ಪ್ರವಹಿಸುತ್ತಿರುವಂಥ ಕಥನ ಅಂಶವೇ ಮುಖ್ಯ ಎನ್ನಬಹುದು. ಜನಪದ ಕಥೆಗಳು : "ಒಂದೂರಿನಲ್ಲಿ ಒಬ್ಬ ರಾಜನಿದ್ದ......" ಎಂದೇ ಆರಂಭಗೊಳ್ಳುತ್ತವೆ. 'ಲಾವಣಿಗಳು' ಒಬ್ಬ ವ್ಯಕ್ತಿಯ ಶೌರ್ಯ, ಸಾಧನೆಯನ್ನು ಕಥನ ರೂಪದಲ್ಲಿ ಬಣ್ಣಿಸುತ್ತಾ ಹೋಗುತ್ತವೆ. ಜನಪದ ಸಾಹಿತ್ಯದಲ್ಲಿ ಕಥೆಯೇ ಸ್ಥಾಯಿಭಾವವಾಗಿದೆ.

ಜನಪದ ಕಥೆಗಳ ಹುಟ್ಟಿಗೆ ಈ ಕೆಳಗಿನ ಅಂಶಗಳು ಕಾರಣಗಳೆಂದು ಹೇಳುವರು. ೧. ಪುರಾಣ ಮೂಲ, ೨. ಭಾರತೀಯ ಮೂಲ, ೩. ಸಂಸ್ಕೃತಿ ಮೂಲ, ೪. ಚಾರಿತ್ರಿಕ-ಭೌಗೋಳಿಕ ವಿಧಾನ, ೫. ಸ್ವಪ್ನಮೂಲ, ೬. ಮತ ಪ್ರಕ್ರಿಯಾ ಮೂಲ, ೭. ಮನೋವಿಶ್ಲೇಷಣಾ ಮೂಲ. ಈ ಎಲ್ಲಾ ಅಂಶಗಳಲ್ಲಿ ಪುರಾಣ ಮೂಲವೇ ಜನಪದ ಕಥೆಗಳ ಹುಟ್ಟಿಗೆ ಕಾರಣವೆಂದೂ ಬಹುತೇಕ ವಿದ್ವಾಂಸರ ಅಭಿಪ್ರಾಯವಾಗಿದೆ.

ಪುರಾಣ ಮೂಲ

ವಿಲ್‌ಹೆಲ್ಮ್ ಗ್ರಿಮ್ ಅವರು ಜನಪದ ಕಥೆಗಳನ್ನು ಆರ್ಯನ್ ಮೂಲಕ್ಕೆ ಕೊಂಡು ಒಯ್ದರು. ಕಥೆಗಳ ಮೂಲವನ್ನು ಶೋಧಿಸಹೊರಟ ಅವರು ಈ ಕೆಳಗಿನಂತೆ ಅಭಿಪ್ರಾಯಪಟ್ಟರು. 'ಪರಸ್ಪರ ಹೋಲಿಕೆ ತೋರಿ ಬರುವ ಎಲ್ಲಾ ಕಥೆಗಳೂ ಒಂದೇ ಇಂಡೋ-ಯುರೋಪಿಯನ್ ಭಾಷಾ ಮೂಲದಿಂದ ಹರಡಿಕೊಂಡವು' ಹಾಗೂ 'ಎಲ್ಲಾ ಕಥೆಗಳು ಪುರಾಣಗಳ ಒಡೆದ ಚೂರುಗಳು. ಅವುಗಳು ಬಂದ ಮೂಲ ಪುರಾಣಗಳನ್ನು ಅರ್ಥಮಾಡಿಕೊಳ್ಳದ ಹೊರತು ಕಥೆಗಳನ್ನು ಅರ್ಥೈಸುವುದು ಕಷ್ಟ'[೧] ಎಂದು ಹೇಳಿದ್ದಾರೆ. ಇದರ ಜೊತೆಗೆ ಕಥಾ ಸನ್ನಿವೇಶಗಳು ಸರಳ ಮತ್ತು ಸಹಜವಾದವಾಗಿದ್ದು ಈ ಗುಣದಿಂದ ಅವು ಮತ್ತೆ ಮತ್ತೆ ಬೇರೆಡೆಗಳಲ್ಲಿಯೂ ಕಾಣಿಸಿಕೊಳ್ಳಬಲ್ಲವು ಎಂಬ ವಿಚಾರವನ್ನು ಮುಂದಿಟ್ಟರು.

ಇಂಡೋ-ಯುರೋಪಿಯನ್ ಕಥೆಗಳನ್ನು ಆರ್ಯೇತರ ಜನಾಂಗಗಳಲ್ಲೂ ಗುರುತಿಸಿದ್ದರಿಂದ ಅನೇಕ ವಿದ್ವಾಂಸರ ವಿರೋಧದಿಂದ ಈ ವಾದವು ಬಿದ್ದು ಹೋಯಿತು.

ಜನಪದ ಕಥೆಗಳನ್ನು ಹಲವು ಬಗೆಯ ಮಾನದಂಡಗಳಿಂದ ಅನೇಕ ಜನಪದ ವಿದ್ವಾಂಸರು ವಿಭಜಿಸಿದ್ದಾರೆ. ಪ್ರಸಿದ್ಧ ಜಾನಪದ ವಿದ್ವಾಂಸರಾದ 'ಸ್ಟಿಥ್‌ಥಾಂಸನ್' ಅವರು

೧. ಐತಿಹ್ಯ ಮತ್ತು ಸಂಪ್ರದಾಯಗಳು

೨. ಅದ್ಭುತ ಕಥೆಗಳು

೩. ಪ್ರಾಣಿ ಕಥೆಗಳು

೪. ನೀತಿ ಕಥೆಗಳು

೫. ಪುರಾಣ ಕಥೆಗಳು

ಎಂದು ವರ್ಗೀಕರಿಸಿದ್ದಾರೆ. ಇದಲ್ಲದೆ ಸರಳ ಕಥೆಗಳು ಮತ್ತು ಸಂಕೀರ್ಣ ಕಥೆಗಳು ಎಂದೂ ರಮ್ಯ, ಅದ್ಭುತ, ಅತಿಮಾನುಷ ಕಥೆಗಳು ಎಂದೂ ವಿಭಜಿಸಿ ಹೇಳಲಾಗಿದೆ.[೨] ಕಥೆಗಳು ಪ್ರಾಚೀನವೂ ಹೌದು, ಅರ್ವಾಚೀನವೂ ಹೌದು. ಅಜ್ಜಿ ಹೇಳುವ ಕಾಲಕ್ಕೆ 'ಅಡುಗೂಲಜ್ಜಿ ಕಥೆ'ಗಳಾದವು. ಕಥೆಗಳು ಅಜ್ಜಿಯ ಆಸ್ತಿಯೇ ಆಗಿ ಮಕ್ಕಳಿಗೆ, ಶ್ರಮಿಕರಿಗೆ ಆಸರೆ ಬೇಸರವನ್ನು ನೀಗಿಸಿಕೊಳ್ಳುವ ಒಂದು ಸಾಧನವಾದವು.

ಜನಪದ ಕಥೆಗಳು ಮೌಖಿಕ ಪರಂಪರೆಯಲ್ಲಿ ಕಾಲದಿಂದ ಕಾಲಕ್ಕೆ, ತಲೆಮಾರಿನಿಂದ ತಲೆಮಾರಿಗೆ, ಭಾಷೆಯಿಂದ ಭಾಷೆಗೆ, ವ್ಯಕ್ತಿಯಿಂದ ವ್ಯಕ್ತಿಗೆ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಬದಲಾಗುತ್ತಿರುವುದು. ಆದ್ದರಿಂದ ಒಂದು ನಾಡಿನ ಕಥೆಗಳು ಭೌಗೋಳಿಕವಾಗಿ ಮತ್ತು ಚಾರಿತ್ರಿಕವಾಗಿ ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತವೆ. ಮಾನವ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಈ ಜನಪದ ಕಥೆಗಳು ಆಚರಣೆ, ಸಂಪ್ರದಾಯ, ಉಡುಗೆ-ತೊಡುಗೆಗಳು, ನುಡಿಕಟ್ಟುಗಳ ವೈವಿಧ್ಯತೆಯಿಂದಾಗಿ ಉತ್ತಮ ಆಕರಗಳಾಗಿ ಪರಿಣಮಿಸುತ್ತವೆ.

ಜನಪದ ಕಥೆಗಳಲ್ಲಿ ಸಾಮಾನ್ಯವಾಗಿ ಸಾಂಕೇತಿಕಕತೆ, ನ್ಯಾಯಶೀಲತೆ-ಸಂಪ್ರದಾಯ, ಜೀವನಾನುಭವ ವನ್ನು ಕಾಣಲು ಸಾಧ್ಯ. ಜನಪದ ಕಥೆಗಳಲ್ಲಿ ಕಾಲ, ಸ್ಥಳದ ಸಾಂಕೇತಿಕತೆಯನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತವೆ. ಇದೊಂದು ಪ್ರಮುಖ ಲಕ್ಷಣವಾಗಿ ಜನಪದ ಕಥೆಗಳಲ್ಲಿ ನೆಲೆಗೊಂಡಿದೆ. ವೃತ್ತಿ ಮತ್ತು ಸಂಸ್ಕೃತಿಗೆ ಪೂರಕವಾದಂತಹ ಎಷ್ಟೋ ಜನಪದ ಕಥೆಗಳು ನಮ್ಮ ಜನಪದದಲ್ಲಿ ಅಡಗಿವೆ. ಶೆಟ್ಟಿಯನ್ನು, ಬ್ರಾಹ್ಮಣನನ್ನು, ಬೇಡನನ್ನು ಮತ್ತು ಅವನ ವೃತ್ತಿಯನ್ನು ಚಿತ್ರಿಸುವಂತಹ ಕಥೆಗಳು ನಮ್ಮಲ್ಲಿವೆ. ಜನರು ಎಲ್ಲೆಲ್ಲಿ ಗುಂಪುಗಳಾಗಿ ಒಂದು ಸಮುದಾಯವಾಗಿ ಜೀವಿಸುತ್ತಾರೋ, ಅಲ್ಲಲ್ಲಿ ಇಂಥ ಕಥೆಗಳಿರುತ್ತವೆ. ಈ ಎಲ್ಲಾ ಕಾರಣದಿಂದಾಗಿ ಜನಪದತ್ವವನ್ನು ನಮ್ಮ ಕಥಾ ಪರಂಪರೆಯು ಇನ್ನೂ ಬಿಟ್ಟುಕೊಟ್ಟಿಲ್ಲ. ಬಹುಶಃ ನಮ್ಮ ಎಲ್ಲಾ ಕಥನ ಸಾಹಿತ್ಯವು ಒಂದಲ್ಲಾ ಒಂದು ರೀತಿಯಿಂದ

ನಾಯಕನ ಗುಣ, ಪರಿಚಯದ ಸಂದರ್ಭದಲ್ಲಿ ಪುನರಾವರ್ತನೆಗೊಳ್ಳುತ್ತವೆ. 'ಹಾದಿಗೆ ಹಂದ್ರ ಹಾಕಿ, ಬೀದಿಗೆ ಛಳಿಕೊಟ್ಟು, ಒಂದಾನೊಂದು ಕಾಲದಲ್ಲಿ, ಹೀಂಗೊಂದೂರಾಗ, ಒಂದೂರಾಗ ಒಬ್ಬ ರಾಜಾ ಇದ್ದ'.[೬] ಇಂತಹ ಹಲವಾರು ವಾಕ್ಯಗಳು ಶುಭ ಸಮಾರಂಭಗಳ ಸಂದರ್ಭದಲ್ಲಿ ಪುನರಾವರ್ತನೆಗೊಳ್ಳುತ್ತಲೇ ಇರುತ್ತವೆ. ಅದೇ ರೀತಿಯಾಗಿ ವಡ್ಡಾರಾಧನೆಯಲ್ಲಿ ಇಂತಹ ಪುನರಾವರ್ತನೆಯ ಅಂಶ ಕಾಣಲು ಸಾಧ್ಯ. 'ಕೌಸಂಬಿ ಎಂಬ ಪೊಳಲ್', ಗ್ರಾಮ ನಗರ ಖೇಡ, ಖರ್ವಡ, ಮಡಂಬ, ಹಲವು ವಾಕ್ಯಗಳು ಪುನರಾವರ್ತನೆಯಾಗುತ್ತದೆ. ಕಥನವಸ್ತು ಸರಳತೆಯಿಂದ ಕೂಡಿರುತ್ತದೆ. ಕಥಾ ನಾಯಕ ಒಳ್ಳೆಯವನಾಗಿದ್ದು ಜನರ ಮನೋಭಾವಕ್ಕೆ ಸ್ಪಂದಿಸುವಂಥ ಗುಣವುಳ್ಳವನು. ಪ್ರತಿ ನಾಯಕ ಸಹಜವಾಗಿಯೇ ದುಷ್ಟ ನಾಗಿರುತ್ತಾನೆ. ಕಿರಿಯರಿಗೆ ಕಥೆಗಳಲ್ಲಿ ನಾಯಕನ ಜಯವೇ ಮುಖ್ಯವಾಗಿರುತ್ತದೆ. ಒಂದು ಕ್ರಮದಲ್ಲಿ ಅಂದರೆ ಚಿಕ್ಕವ-ದೊಡ್ಡ, ಮನುಷ್ಯ-ರಾಕ್ಷಸ, ಒಳ್ಳೆಯ-ಕೆಟ್ಟವ, ನಾಯಕ-ಪ್ರತಿನಾಯಕ, ಸ್ವರ್ಗ, ನರಕ ಮರ್ತ್ಯ, ಪಾತಾಳ ಲೋಕಕ್ಕೂ ಸಂಬಂಧವಿಟ್ಟುಕೊಂಡು ಅಂತ್ಯಗೊಳ್ಳುತ್ತವೆ. ಆದ್ದರಿಂದ ನೀತಿ ಹೇಳುವಲ್ಲಿ, ಧರ್ಮದ ಕರ್ತವ್ಯವನ್ನು ಪ್ರತಿಪಾದಿಸುವಲ್ಲಿ ಯಶಸ್ಸನ್ನು ಸಾಧಿಸುತ್ತವೆ. ಅದೃಷ್ಟದ ಆಟ ಎನ್ನುವುದು ಕಥೆಗಳಲ್ಲಿ ಸಾಮಾನ್ಯವಾಗಿದೆ. 'ಬೇಡಿದ್ದು ಕೊಡುವ ಉಂಗುರ' ಕಥೆಯಲ್ಲಿನ ಉಂಗುರವು ಅದ್ಭುತವನ್ನು ಪ್ರತಿನಿಧಿಸುತ್ತದೆ. ಇದೇ ರೀತಿ ಮಂತ್ರದ ಬಡಿಗೆ, ಮಂತ್ರಿಸಿದ ಮೂರು ಹರಳುಗಳು, ಮಣ್ಣಿನಪಾತ್ರೆ, ಚಾಪೆಗಳು ಮುಂತಾದ ವಸ್ತುಗಳು ಕಥಾ ನಾಯಕನ ಕಷ್ಟ ಕಾಲದಲ್ಲಿ ಸಹಾಯಕ್ಕೆ ಬರುತ್ತವೆ. ಅಲ್ಲದೇ ಕತೆಯನ್ನು ಕೇಳುಗರಿಗೆ ಮಂತ್ರ ಮುಗ್ಧರನ್ನಾಗಿ ಮಾಡಿ ಅಂತಹ ವಸ್ತು ನನ್ನ ಬಳಿ ಇದ್ದರೆ ಎಷ್ಟೊಂದು ಚೆನ್ನಾಗಿರುತ್ತಿತ್ತು ಎಂಬ ಭಾವನೆ ಮೂಡಿಸುತ್ತದೆ.

ಕಥಾವಸ್ತುವಿಗೆ ಅಸಮಾನ್ಯ ವಸ್ತುಗಳು ದೊರಕಿಸುವಲ್ಲಿ ದೇವತೆಗಳು, ಪಿಶಾಚಿ, ಮಲತಾಯಿ, ಸುಂದರ ಕನ್ಯೆ, ಪ್ರಾಣಿ-ಪಕ್ಷಿ ಮೊದಲಾದವುಗಳು ಪ್ರೇರಣೆಯಾಗುತ್ತವೆ. ಕಥೆಗಳಲ್ಲಿ ಪ್ರಾಣಿಗಳ ಸ್ವಭಾವ ಚಿತ್ರಣದಲ್ಲಿ ಮನುಷ್ಯನ ಗುಣಸ್ವಭಾವಗಳನ್ನು ಕಲ್ಪಿಸಿ ಹೇಳುವ ಕಥನ ಕ್ರಮವು ಕೇಳುಗನ ಮೇಲೆ ಅರ್ಥವತ್ತಾದ ಪರಿಣಾಮವನ್ನುಂಟು ಮಾಡುತ್ತದೆ.

ಮನುಷ್ಯನ ಜೀವನಾನುಭವಕ್ಕೆ ಅನುಭೂತಿಯನ್ನು, ಸಾಮೀಪ್ಯವನ್ನು ವಹಿಸಿಕೊಡುವಲ್ಲಿ ಜನಪದ ಪ್ರಾಣಿ ಕಥೆಗಳು ಯಶಸ್ವಿಯಾಗಿವೆ. 'ನರಿ ಮಾಡಿದ ಮೋಸ', 'ಮಂಗ', 'ಆಕಳ ಜಾಣತನ', 'ಏಳುಹೆಡೆ ಸರ್ಪ', 'ಹುಲಿಯಂತಾ ನರಿ', ಮೊದಲಾದ ಕಥೆಗಳಲ್ಲಿರುವ ಪ್ರಾಣಿಗಳನ್ನು ನೋಡಿದಾಗ ಅವುಗಳು ಮನುಷ್ಯನಷ್ಟೇ ತಾರ್ಕಿಕತೆ ಮತ್ತು ಬುದ್ಧಿಯನ್ನು ಬಳಸಬಲ್ಲವಂತಹವು. ಪ್ರಾಣಿಗಳ ಕಥೆಗಳಲ್ಲಿ ಪ್ರಾಣಿಗಳ ಅನುಭವ ಇರುವುದು ಸಹಜ. ಆದರೆ ಅವುಗಳ ಪ್ರಭಾವ ಮನುಷ್ಯನ ಮೇಲಾಗುವುದನ್ನು ಗಮನಿಸಬಹುದು. 'ಮಂಗ' (ನೂರೆಂಟು ಜನಪದ ಕಥೆಗಳು, ಪುಟ ೧೯೮) ಕಥೆಯಲ್ಲಿ ನೇರಳೆ ಹಣ್ಣಿನ ಮರದ ಕೆಳಗೆ ಮಂಗ ಮತ್ತು ಮೊಸಳೆಯ ಸ್ನೇಹವಾಗುವುದು. ಹೆಣ್ಣು ಮೊಸಳೆಗೆ ಮಂಗನ ಹೃದಯ ತಿನ್ನುವ ಆಸೆ ಆಯಿತು. ಅದಕ್ಕಾಗಿ ಗಂಡು ಮೊಸಳೆ ಮಂಗಕ್ಕೆ "ನಿನ್ನ ಅತ್ತಿಗೆ ನಿನ್ನನ್ನು ನೋಡುತ್ತಾಳಂತೆ ಬಾ ಇಂದು ಕರಕೊಂಡೇ ಬಾ ಎಂದು ಹೇಳಿ ಕಳುಹಿಸಿದ್ದಾಳೆ. ಬಾ ನನ್ನ ಬೆನ್ನ ಮೇಲೆ ಕೂತುಕೊ ನದಿ ದಾಟಲು

ಸಹಾಯ ಮಾಡುತ್ತೇನೆ" ಎಂದು ಹೇಳಿ ಬೆನ್ನ ಮೇಲೆ ಕೂಡಿಸಿಕೊಂಡು ಹೋಗುತ್ತದೆ. ಮಂಗಕ್ಕೆ ನದಿಯಲ್ಲಿ ಹೋಗುತ್ತಿರುವಾಗ ತನ್ನನ್ನು ತಿನ್ನುವ ಸಂಚು ನಡೆದಿದೆ ಎನ್ನುವ ವಿಷಯ ಗೊತ್ತಾದ ತಕ್ಷಣ "ಹೃದಯವನ್ನು ಗವಿಯಲ್ಲಿ ಇಟ್ಟು ಬಂದೆ" ಎಂದು ಹೇಳಿ ಮತ್ತೆ ಆಚೆ ದಂಡೆಯ ಕಡೆಗೆ ಕರೆದುಕೊಂಡು ಹೋಗಲು ಮೊಸಳೆಗೆ ಹೇಳುತ್ತದೆ. ಈ ಕಥೆಯಲ್ಲಿ ಬುದ್ಧಿವಂತಿಕೆ ಮತ್ತು ಭಾವನಾತ್ಮಕತೆಯು ಮುಖ್ಯವಾಗುತ್ತದೆ. ಮೋಸಕ್ಕೆ ಎಂದೂ ಜಯ ಸಾಧ್ಯವಿಲ್ಲವೆಂಬ ವಿಷಯವನ್ನು ಈ ಕಥೆ ಹೇಳುತ್ತದೆ.

೨. ಶಿಷ್ಟ ಕೃತಿಗಳ ಕಥನ ಕ್ರಮ

ಸಂಸ್ಕೃತ ಸಾಹಿತ್ಯದ ಶಿಷ್ಟ ಪರಂಪರೆಯಿಂದ ಹರಿದು ಬಂದ ಈ ಕಥನ ಕನ್ನಡ ಕಾವ್ಯ ಪರಂಪರೆಯಲ್ಲಿ ಹಾಸುಹೊಕ್ಕಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗದ್ಯ ಕಥೆಗಳನ್ನೊಳಗೊಂಡ ವಡ್ಡಾರಾಧನೆಗೆ ವಿಶಿಷ್ಟ ಸ್ಥಾನವುಂಟು. ಕ್ರಿ.ಶ. ೯೨೦ರಲ್ಲಿ ರಚಿತವಾದ 'ವಡ್ಡಾರಾಧನೆ' ಕೃತಿಯಲ್ಲಿ ಕಥನ ಪರಂಪರೆಯ ಬೆಳವಣಿಗೆಯನ್ನು ಸ್ಪಷ್ಟವಾಗಿ ಕಾಣಬಹುದು. ಈ ಕೃತಿಯೂ ಪಂಪಪೂರ್ವಯುಗದ ಅಪೂರ್ವ ಗ್ರಂಥ. ಜೈನ ಸಾಹಿತ್ಯದಲ್ಲಿ ಆರಾಧನೆಯ ಸ್ವರೂಪ, ಮಹತ್ವವನ್ನು ಕುರಿತು ತಿಳಿಸುವ ಕಥೆಗಳನ್ನು 'ಆರಾಧನಾಶಾಸ್ತ್ರ' ಎನ್ನುವರು. ಆರಾಧನೆಯನ್ನು ತಿಳಿಸುವುದಕ್ಕಾಗಿ ದೃಷ್ಟಾಂತಗಳ ಕಥೆಗಳನ್ನು ಬಳಸುತ್ತಿದ್ದರು. ಆರಾಧನಾ ಕಥಾಕೋಶಗಳು ಜೈನ ಸಾಹಿತ್ಯದಲ್ಲಿ ಅಧಿಕ. ಅವುಗಳಲ್ಲಿ ವಡ್ಡಾರಾಧನೆಯೂ ಒಂದು.

ಧರ್ಮದ ತತ್ವಗಳನ್ನೆಲ್ಲಾ ಜನಸಾಮಾನ್ಯರಿಗೆ ಜಟಿಲ ಮತ್ತು ನೀರಸವೆನಿಸುವುವು. ಸುಲಭವಾಗಿ ತಿಳಿಯುವಂತೆ ಮಾಡುವುದು ಧರ್ಮ ಪ್ರಚಾರಕರ ಹೊಣೆಯಾಗಿದೆ. ಆದ್ದರಿಂದ ಜನಭಾಷೆಗೆ ಜನಪ್ರಿಯತೆಗೆ ಹಾಗೂ ಪ್ರಚಲಿತವಿದ್ದಂತಹ ಸಂಗತಿ-ಸಂಸ್ಕೃತಿಗಳಿಗೆ ಮೊರೆ ಹೋಗಬೇಕಾಗುವುದು. ಸಾಮಾನ್ಯವಾಗಿ ಜೈನ ಕಥೆಗಳನ್ನು 'ಕಥಾ', 'ಅಕಥಾ', ಹಾಗೂ 'ವಿಕಥಾ'[೪] ಎಂದು ವಿಭಾಗಿಸಲಾಗಿದೆ. 'ಕಥಾ' ಎಂದರೆ ಮೋಕ್ಷ ಹೊಂದಲು ಆತ್ಮವನ್ನು ಉದ್ದೀಪಿಸಿ ಹುರಿಗೊಳಿಸುವಂತೆ ಮಾಡುವುದು. ಇದನ್ನೇ ಜಿನಾಸೇನಾಚಾರ್ಯರು 'ಸತ್ಕಥಾ', 'ಸದ್ಧರ್ಮ ಕಥಾ' ಎಂದಿದ್ದಾರೆ. 'ಅಕಥಾ' ಎಂದರೆ ಸಂಸಾರದ ಪರಿಭ್ರಮಣಕ್ಕೆ ಕಾರಣವಾದುದು ಮತ್ತು 'ವಿಕಥಾ' ಎಂದರೆ ರಾಗ-ದ್ವೇಷ, ಸ್ತ್ರೀ-ಭೋಜನ, ರಾಷ್ಟ್ರ-ಸಮಾಜವನ್ನು ವಿಕೃತಗೊಳಿಸಲು ಕಾರಣವಾದ ಕಥೆ. ಇದಲ್ಲದೆ 'ಅರ್ಥಕಥೆ, ಕಾಮಕಥೆ, ಧರ್ಮಕಥೆ, ಮಿಶ್ರಕಥೆ, ಸಂಕೀರ್ಣಕಥೆ"[೫] ಎಂದು ವಿಷಯ, ಪಾತ್ರ, ಶೈಲಿ ಭಾಷೆಗಳಿಗನುಗುಣವಾಗಿ ವಿಭಾಗಿಸಿಕೊಂಡಿರುವರು. ಕಥಾವಸ್ತುವಿನ ಸಂಬಂಧ ಹಣದ ಸಂಪಾದನೆ, ಆಯವ್ಯಯಕ್ಕೆ ಸಂಬಂಧಿಸಿದ್ದರೆ ಅದು ಅರ್ಥ ಕಥೆ, ಕಾಮಕಥೆಯ ಕಥಾವಸ್ತು ಕಾಮಕ್ರೀಡೆಗೆ, ಸೌಂದರ್ಯಕ್ಕೆ ಸೇರಿದ್ದಾಗಿರುತ್ತದೆ. ರೂಪ ಸೌಂದರ್ಯವಷ್ಟೇ ಅಲ್ಲದೆ ಕಾಮದ ಸಮಸ್ಯೆಗಳು ಕಲಾತ್ಮಕ ರೀತಿಯಲ್ಲಿರುವಂತಹ ಕಥೆಗಳು ಜೈನ ಕಥಾ ಸಾಹಿತ್ಯ ಪರಂಪರೆಯಲ್ಲಿ ಇವೆ. ಇವುಗಳು ಪ್ರೇಮದ ಕಥೆಗಳು ಸಹಾ ಆಗಿವೆ. ಧರ್ಮ, ಶೀಲ, ಸಂಯಮ, ತಪ, ಪಾಪ-ಪುಣ್ಯದ ವಿವೇಚನೆಯನ್ನು ಒಳಗೊಂಡ ಕಥೆಗಳು, ಧರ್ಮ ಕಥೆಗಳು, ಧರ್ಮ, ಅರ್ಥ, ಕಾಮ ಇವುಗಳ ವಿಚಾರವಾಗಿ ಸಂಸಾರದಲ್ಲಿರುವವರಿಗೆ ಉಪದೇಶಿಸುವಂಥ ಕಥೆಗಳು ಮಿಶ್ರಕಥೆಗಳು. ಸಂಕೀರ್ಣ ಕಥೆಗಳು ಪುರುಷಾರ್ಥಗಳನ್ನು

ಹೊಂದಲು ಕಾರಣವಾಗುವಂಥಹ ಕಥೆಗಳು. ಜೈನ ಕಥಾ ಸಾಹಿತ್ಯದಲ್ಲಿ ವೈರಾಗ್ಯದ ನೆಲೆ, ಜಾತಿಸ್ಮರಣೆ, ದಿವ್ಯಜ್ಞಾನ, ಸಂಕಲ್ಪ, ಹಿಂಸೆ ಪ್ರಮುಖವಾಗಿ ಕಂಡು ಬರುವಂಥ ಅಂಶಗಳು.

ವೈರಾಗ್ಯದ ನೆಲೆ

ಜೈನ ಕಥೆಗಳಲ್ಲಿ ಮುಖ್ಯವಾಗಿ ಕಂಡು ಬರುವಂಥದ್ದು. ವ್ಯಕ್ತಿಗಳ ಜೀವನದಲ್ಲಿ ವೈರಾಗ್ಯವು ಯಾವ ಸಂದರ್ಭದಲ್ಲಿ ಬರುವುದೋ ಹೇಳಲು ಸಾಧ್ಯವಿಲ್ಲ. ಜೈನ ಕಥೆಯು ಮೂಲದಲ್ಲಿ ಮುಗ್ಧತೆಯನ್ನು ಆಶ್ರಯಿಸಿ, ತಾತ್ವಿಕ ಪ್ರಭಾವಳಿಯತ್ತ ಭವಾವಳಿಯನ್ನು ಪ್ರತಿಬಿಂಬಿಸುವ 'ಕೇವಲ'ದ ಕಡೆಗೆ, ಸಂಕೀರ್ಣತೆಯ ಕಡೆಗೆ ಸಾಗುತ್ತದೆ. ವ್ಯವಹಾರಿಕ ಸತ್ಯದ ತಹಳದಿ ಈ ಸಾಹಿತ್ಯಕ್ಕೆ ಎಷ್ಟು ಸ್ಪಷ್ಟವೋ, ಪ್ರಭಾವವೋ ಅಷ್ಟೇ ಸ್ಪಷ್ಟವೂ ಪ್ರಭಾವವೂ ಆದದ್ದು ಪಾರಮಾರ್ಥಿಕ ಸತ್ಯ. ಈ ಎರಡೂ ಬಗೆಯ ವೈರುಧ್ಯಪೂರಿತ ತತ್ವವನ್ನು ಗ್ರಹಿಸಿದ ಮತ್ತು ಪ್ರತಿಫಲಿಸಿದ ಕಥನಕಾರರೆಂದರೆ ಜೈನರು. ಜೈನ ಸಂವೇದನೆಯ ಮಹತ್ವ ವಿರುವುದೇ ಮಾನವ ಬದುಕಿನ ವಾಸ್ತವಗಳನ್ನು ಹೇಳುವಲ್ಲಿ. ಕೆಲವೊಂದು ಅಂಶಗಳು, ಕಥಾ ಪ್ರಸಂಗಗಳು ಅಪಾಯಕರ ಎಂದು ತಿಳಿದಿದ್ದರೂ ಮನುಷ್ಯರು ಪ್ರೀತಿಸುತ್ತಾರೆಂಬುದರಿಂದ ಅನೈತಿಕ ಸಂಬಂಧಗಳ ನಿರೂಪಣೆಯನ್ನು ಕೊಡುತ್ತಾರೆ. ಅದು ಸಲ್ಲದು, ಧರ್ಮಬಾಹಿರ ಎಂದು ಕಡೆಗೆ ಹೇಳಿದರೂ ಆರಂಭದಲ್ಲಿನ ಪ್ರಚೋದನೆ ಮತ್ತು ಪ್ರಚಾರವು ಅಂತ್ಯದ ನೀತಿಯಲ್ಲಿ ಇರಲಾರದು. ಪ್ರೇಮ, ಅಧಿಕಾರ, ಸಾಹಸ, ಗರ್ವ, ಅಹಂಗಳು ಮನುಷ್ಯರನ್ನು ಸಹಜವಾಗಿ ರೂಪಿಸುವಂತಹ ಶಕ್ತಿಗಳು. ಇವು ಜೈನಕಥೆಗಳ ಅಂತರಂಗದಲ್ಲಿ ಅಡಗಿಕೊಂಡು ಪ್ರೇರೇಪಿಸುವಂತಹ ಸಂವೇದನೆಗಳಾಗಿವೆ. "ಜೈನಕಥೆಗಳಲ್ಲಿ ಮನುಷ್ಯರು ಬದಲಾಗವುದು ತತ್ವಗಳಿಂದಲ್ಲ. ದಿಗ್ಭ್ರಮೆಗಳಿಂದ, ತಲ್ಲಣಗಳಿಂದ, ಜೀವನದ ಕೋಲಾಹಲಗಳು ಮನುಷ್ಯರನ್ನು ಪರಿವರ್ತಿಸುತ್ತವೆ"[೬] ಎಂಬ ಡಿ.ಆರ್. ನಾಗರಾಜ ಅವರ ಮಾತು ಇಲ್ಲಿ ಮುಖ್ಯವೆನಿಸುತ್ತದೆ. ಅದೇ ಬಗೆಯಲ್ಲಿ 'ಕಾರ್ತೀಕ ಸ್ವಾಮಿಯ ಕಥೆ'ಯಲ್ಲಿ ಇರುವುದು ಒಂದೇ ಮುಖ್ಯ ಕಥೆಯಾಗಿರುವುದರಿಂದ ಈ ಕಥೆಯ ಸ್ವರೂಪವೇನೆಂಬುದನ್ನು ತಿಳಿಯಬಹುದು. ಕಾರ್ತೀಕ ಸ್ವಾಮಿಯ ತಂದೆ ತನ್ನ ಮಗಳನ್ನೇ ಮದುವೆಯಾಗಿದ್ದರಿಂದ ಸಂಬಂಧಗಳಲ್ಲಿ ಗೊಂದಲ ಉಂಟಾಗಿ ಕಾರ್ತೀಕ ಸ್ವಾಮಿಗೆ ವೈರಾಗ್ಯ ಬಂದು ಅವನು ದೀಕ್ಷೆ ಪಡೆದು ಹೊರಟು ಹೋಗುತ್ತಾನೆ. ಹಾಗೆಯೇ ಅಮರದತ್ತ, ಮಿತ್ರಾನಂದರ ಕತೆಯಲ್ಲಿ ಬರುವ "ಮದನಸೇನೆ ಗಂಡನ ತಲೆಯ ಕೂದಲನ್ನು ಬಾಚುತ್ತಿದ್ದಾಗ ಒಂದು ಬಿಳಿಯ ಕೂದಲನ್ನು ಕಂಡು, ವಿನೋದಕ್ಕೆ "ಪ್ರಭೂ, ಧರ್ಮದ ದೂತ ಬಂದಿದ್ದಾನೆ" ಎಂದಳು. ಆ ಬಿಳಿಯ ಕೂದಲನ್ನು ಕಂಡು ದೊರೆ ವೈರಾಗ್ಯ ತಾಳಿ, ಮಗ ಪದ್ಮಕೇಶನಿಗೆ ಪಟ್ಟಗಟ್ಟಿ, ಮದನಸೇನೆಯೊಂದಿಗೆ ತಪಸ್ಸಿಗೆ ಹೊರಟು ಹೋದ"[೭]. ವೈರಾಗ್ಯ ಪ್ರಾಪ್ತಿ, ಪರೀಷಹಗಳನ್ನು ಗೆಲ್ಲುವುದು, ಕೇವಲ ಜ್ಞಾನವನ್ನು ಪಡೆದು ಮೋಕ್ಷವನ್ನು ಪಡೆಯುವುದು ಈ ಕಥೆಗಳಲ್ಲಿಯ ತಂತ್ರ ವಿಶೇಷಗಳು.

ಭವಾವಳಿ

ನಾನಾ ಜನ್ಮಗಳಲ್ಲಿ ಹುಟ್ಟಿ ಪಡಬಾರದ ಕಷ್ಟಪಟ್ಟು ಕಾಲಲಬ್ಧಿ ಕೂಡಿ ಬಂದಾಗ ಆ ಜೀವಿಗೆ ಹಿಂದಿನ ಜನ್ಮದ ಅಥವಾ ಜಾತಿ ಸ್ಮರಣೆ ಉಂಟಾಗಿ ಆ ಜೀವಿ ಮೋಕ್ಷ ಮಾರ್ಗದತ್ತ ಚಲಿಸುತ್ತದೆ.

ಹೀಗೆ ಜಾತಿ ಸ್ಮರಣೆ ಉಂಟಾಗಲು ದೊಡ್ಡ ಸಂಗತಿಯೇನು ಘಟಿಸಬೇಕಾಗಿಲ್ಲ. ಒಂದು ಚಿಕ್ಕ ಅಂಶವೂ ಕೂಡ ನೆಪವಾಗಿ ಅಲ್ಲಿ ಆ ಜೀವಿಗೆ ತನ್ನ ಜನ್ಮಾಂತರದ ಸ್ಮರಣೆ ಉಂಟಾಗಬಹುದು.

* ಸುಕೇಶಿನಿಗೆ ಆನೆಯ ದಂತವನ್ನು ನೋಡಿ ಜಾತಿ ಸ್ಮರಣೆ ಉಂಟಾಗುವುದು.
* ಮನೋಹರಿಗೆ ಅವಳ ಗೆಳತಿ ವಿದ್ಯೆಯು 'ಎಲೆ ಮನೋಹರಿ ನೀ ಮುನ್ನಿನ್ ಭವದೊಳ್ ಕುಬೇರ ಕಾಂತನೊಳ ಕ್ರೀಡಿಸಿದ ಕ್ರೀಡೆಗಳಂ ನೆನೆದಾ' ಎಂದು ಹೇಳಿದಾಗ ಜಾತಿಸ್ಮರಣೆ ಉಂಟಾಗುವುದು.
* ಸುಕೇಶಿನಿ ಸ್ವಾಮಿಗೆ ಅಡವಿಗಳಲ್ಲಿ ಸಿದ್ಧಾರ್ಥರಿಸಿಯು ಶಿಲಾತಳದಲ್ಲಿ ಯೋಗಸ್ಥಿತನಾಗಿರುವುದನ್ನು ನೋಡಿದೊಡನೆ ಜಾತಿ ಸ್ಮರಣೆಯಾಗುತ್ತದೆ.

ಕೈವಲ್ಯ ಜ್ಞಾನ ಅಥವಾ ದಿವ್ಯಜ್ಞಾನ

ಜೈನಕಥೆಗಳ ಮತ್ತೊಂದು ಪ್ರಮುಖ ಅಂಶವೆಂದರೆ 'ಕೈವಲ್ಯ ಜ್ಞಾನ-ದಿವ್ಯದೃಷ್ಟಿ ಅಥವಾ ದಿವ್ಯಜ್ಞಾನ'. ಪ್ರತಿಯೊಂದು ಜೈನಕಥೆಗಳಲ್ಲಿಯ ಪಾತ್ರಗಳು ತಮ್ಮ ಪಾಪದ ಕ್ಷಯಕ್ಕಾಗಿ ನಡೆಸುವ ಪ್ರಯತ್ನ, ತಿರ್ಯಗ್ ಜಾತಿಯಲ್ಲಿ ಹುಟ್ಟಿ ಬಂದು ನಂತರ ಕಠೋರ ತಪಸ್ಸಿನಿಂದ ಮೋಕ್ಷ ಹೊಂದುವುದು. ತಪಸ್ಸು ಆಚರಿಸಿ ಪುಣ್ಯ, ಪಾಪಿರೂಪಗಳ ಕಾರ್ಯವನ್ನು ಕ್ಷಯಿಸಿ, ದಿವ್ಯಜ್ಞಾನ ಹೊಂದಿ ಕೊನೆಗೆ ಮೋಕ್ಷ ಸಂಪಾದಿಸುವುದೇ ಜೈನ ಕಥೆಗಳ ಮುಖ್ಯ ತಿರುಳು. ಮನುಷ್ಯನ ಬಗೆಗೆ ಕಠೋರ ದೃಷ್ಟಿಕೋನ ವಹಿಸುವುದು ಜೈನಕಥೆಗಳ ಮತ್ತೊಂದು ಪ್ರಮುಖ ಅಂಶ. ಜೈನಧರ್ಮದಲ್ಲಿ ಹೆಣ್ಣುಮಕ್ಕಳಿಗೆ ಮೋಕ್ಷವಿಲ್ಲ. ಹೆಣ್ಣು ಹೆಚ್ಚು ಪಾಪ ಮಾಡುವವಳೆಂಬುದು ಇವರ ಅಭಿಪ್ರಾಯ. ಸುಕುಮಾರ ಸ್ವಾಮಿಯ ಕಥೆಯಲ್ಲಿ ವಾಯುಭೂತಿ ಜೈನಯತಿಯನ್ನು ಅವಮಾನ ಮಾಡಿದ್ದರಿಂದ ಆತ ಏಳು ದಿನಗಳಲ್ಲಿ ಸತ್ತು ನಂತರ ಹೆಣ್ಣುಕತ್ತೆ, ಹೆಣ್ಣು ಹಂದಿ, ಹೆಣ್‌ನಾಯಿಯಾಗಿ ಹುಟ್ಟುವನು. ಕೊನೆಗೆ ಜೈನ ಕೇವಲಿಗಳ ಬಳಿ ಜೈನಧರ್ಮ ಸ್ವೀಕರಿಸಿ ಮೋಕ್ಷ ಹೊಂದುವಲ್ಲಿ ಸಫಲನಾಗುತ್ತಾನೆ.

ಸಂಕಲ್ಪ ಹಿಂಸೆ

ಸಂಕಲ್ಪ ಹಿಂಸೆ ಎನ್ನುವುದು ವಡ್ಡಾರಾಧನೆಯಲ್ಲಿ ಆಂಶಿಕವಾಗಿ ಮೂಡಿಬಂದಿದೆ. ಆದರೆ ಜನ್ನನ 'ಯಶೋಧರ ಚರಿತ್ರೆ'ಯಲ್ಲಿ ಈ ಸಂಕಲ್ಪ ಹಿಂಸೆ ಎನ್ನುವುದು ಒಂದು ಮಹತ್ವದ ಅಂಶವಾಗಿ ಮೂಡಿ ಬಂದಿದೆ. ಜೈನಧರ್ಮ ದ್ವೈತ ಸ್ವಭಾವದ್ದು. ಸರ್ವವನ್ನೂ ಜೈನರು ಜೀವಿ-ಅಜೀವಿಗಳೆಂದು ವಿಂಗಡಿಸಿಕೊಂಡಿದ್ದಾರೆ. ಜೈನ ಧರ್ಮೀಯರು ಪುನರ್ಜನ್ಮದಲ್ಲಿ ನಂಬಿಕೆಯುಳ್ಳವರು. ಇವರು ಅಹಿಂಸಾ ತತ್ವವನ್ನು ನಂಬುವವರು. ಜನ್ನನ 'ಯಶೋಧರ ಚರಿತ್ರೆ'ಯಲ್ಲಿ ಯಶೋಧರನು ತಾನು ಕಂಡ ಕನಸಿನ ಪ್ರತಿಫಲವಾಗಿ ಬಲಿ ಕೊಡಬೇಕಾದ ಸಂದರ್ಭ ಬರುತ್ತೆ. ಯಶೋಧರ ಅದು ಹಿಂಸೆಯಾಗುವುದೆಂದು ಅದಕ್ಕೊಪ್ಪುವುದಿಲ್ಲ. ಕೊನೆಗೆ ಹಿಟ್ಟಿನ ಹುಂಜವನ್ನು ಬಲಿಕೊಡಲು ಒಪ್ಪುತ್ತಾನೆ. ಆದರೆ ಆ ಹಿಟ್ಟಿನ

ಹುಂಜದಲ್ಲಿ ಬೆಂತರ ಬಂದು ಸೇರಿಕೊಂಡಿರುತ್ತದೆ. ಯಶೋಧರನ ಸಂಕಲ್ಪ ಈಡೇರಿದರೂ ಸಹ ಅದು ಹಿಂಸೆಯನ್ನು ಪ್ರತಿನಿಧಿಸುವುದು. ಈ ಸಂಕಲ್ಪ ಹಿಂಸೆ ಪಾಪದ ಯಾತನಾಮಯಕ್ಕೆ ಕಾರಣವಾಗುವುದು. ಪಾಪ ಮಾಡಿದ್ದರಿಂದಾಗಿ ತಿರ್ಯಾಗ್ ಜಾತಿಯಲ್ಲಿ ಹುಟ್ಟಿ ಮತ್ತೇ ತನ್ನ ಪಾಪ ಕ್ಷಯ ಮಾಡಿಕೊಂಡು ಮೋಕ್ಷದ ಕಡೆಗೆ ಸಾಗುವುದು. ಧರ್ಮದ ತಾತ್ವಿಕತೆಯ ಬಗ್ಗೆ ಹೇಳಲು ಪ್ರತಿಮೆಗಳನ್ನು ಬಳಸುವುದು ಜೈನ ಕಥೆಗಳ ಮತ್ತೊಂದು ಮುಖ್ಯ ಲಕ್ಷಣ.

ಭಾರತೀಯ ಜನಪದ ಕಥಾ ಸಮುದಾಯದಿಂದಲೇ ಜೈನಕಥೆಗಳು ರೂಪುತಳೆದಿವೆ. ಶಿಷ್ಟಕೃತಿಗಳಲ್ಲಿ ಜಾನಪದದ ಕಥೆಗಳ ಅಂಶವನ್ನು ಕಾಣಲು ಸಾಧ್ಯ. ಜಾನಪದ ಕಥೆಗಳು ಒಂದೂರಿನಲ್ಲಿ ಒಬ್ಬ ರಾಜನಿದ್ದ... ಎಂದು ಆರಂಭವಾಗುವಂತೆ, ಶಿಷ್ಟ ಕೃತಿಗಳ ಕಥೆಗಳು ಸಹ ಜಂಬೂದ್ವೀಪದ ಭರತಕ್ಷೇತ್ರದೊಳ್.... ಎಂದು ಆರಂಭಗೊಳ್ಳುತ್ತವೆ. ಇಲ್ಲಿ ನಮ್ಮ ಜಾನಪದ ಕಥೆಗಳ ಅಂಶವನ್ನು ಗಮನಿಸಬಹುದು. ಶಿಷ್ಟಕೃತಿಗಳ ಕಥನಕ್ರಮವು ಜಾನಪದ ಕಥನದ ಮುಂದುವರೆದ ರೂಪವಾಗಿದೆ ಎಂದರೆ ತಪ್ಪಾಗುವುದಿಲ್ಲ.

೩. ಆಧುನಿಕ ಕೃತಿಗಳ ಕಥನಕ್ರಮ

ಕನ್ನಡ ಅಭಿಜಾತ ಪರಂಪರೆಯ ಜೊತೆಗೆ ಕನ್ನಡದ ಮೌಖಿಕ ಪರಂಪರೆಯು ಸೃಷ್ಟಿಸಿದ ಕಥನ ಪರಂಪರೆಯು ವೈವಿಧ್ಯತೆಯಿಂದ ಕೂಡಿದೆ. ಮೌಖಿಕ ಪರಂಪರೆಯಲ್ಲಿ ಬರುವ ಲಾವಣಿಗಳು, ಕಥನ ಕವನಗಳು, ಜಾನಪದ ಕಥೆಗಳು ಇವೆಲ್ಲ ಕನ್ನಡ ಕಥನ ಪರಂಪರೆಯ ಶ್ರೀಮಂತಿಕೆಗೆ ಕಾರಣವಾಗಿವೆ. ೧೯ನೇ ಶತಮಾನದ ಹೊತ್ತಿಗೆ ಕನ್ನಡ ಕಥನ ಪರಂಪರೆಯು ಆಧುನಿಕ ಸಂವೇದನೆಯತ್ತ ಹೊರಳುವುದನ್ನು ಕಾಣಬಹುದು. ಇದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ಮುದ್ದಣನ ಕೃತಿಗಳು. ರಾಮಾಯಣ ಕಥೆಯನ್ನು ಮುದ್ದಣ ತನ್ನ ಪತ್ನಿ ಮನೋರಮೆಗೆ ಹೇಳುವಾಗ ಆಕೆ ತೂಕಡಿಸುತ್ತಾಳೆ. ಸಕಲಗುಣ ಸಂಪನ್ನೆಯಾದಂತಹ ಮನೋರಮೆ ತೂಕಡಿಸುವುದನ್ನು ಮುದ್ದಣ ಕವಿ ಆಕ್ಷೇಪಿಸುತ್ತಾನೆ. ಹೇಳುವ ಕಥೆ ಕೇಳುಗರಿಗೆ ಅರ್ಥ ವಾಗದಿದ್ದಾಗ ತೂಕಡಿಸದೇ ಮತ್ತೇನು ಮಾಡಬೇಕೆಂದು ಹೇಳುವ ಮನೋರಮೆಯ ಈ ಮಾತು ಆಧುನಿಕ ಸಾಹಿತ್ಯ ಪ್ರಕಾರವಾದ ಕಾದಂಬರಿಯ ಸೃಷ್ಟಿಗೆ ಕಾರಣವಾಯಿತೆಂದರೆ ಅತಿಶಯೋಕ್ತಿಯಲ್ಲ.

೧೯೦೦ರಿಂದ ೧೯೨೦ರವರೆಗಿನ ಕಾಲವನ್ನು ಆಧುನಿಕ ಕನ್ನಡ ಸಣ್ಣಕತೆಯ ಪ್ರಾರಂಭದ ಕಾಲವೆಂದು ಕರೆಯಲಾಗುತ್ತದೆ. ಪ್ರಾರಂಭದಲ್ಲಿ ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ರೂಪುಗೊಂಡ ಹೊಸಗನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳು ಅನುಕರಣೆಯಿಂದಲೇ ಬಂದಂತಹವು. ಕಾದಂಬರಿ, ಭಾವಗೀತೆ, ಸಣ್ಣಕತೆ ಇತ್ಯಾದಿ. ಈ ಎಲ್ಲಾ ಪ್ರಕಾರಗಳು ಕನ್ನಡ ಕಥನ ಸಂಪ್ರದಾಯದಲ್ಲಿ ಜೀವಂತವಾಗಿದ್ದರೂ, ಅದಕ್ಕೆ ಆಧುನಿಕ ರೂಪ ದೊರೆತದ್ದು ಪಾಶ್ಚಾತ್ಯ ಮಾದರಿಯಿಂದ ಔದ್ಯೋಗಿಕ ಕ್ರಾಂತಿಯ ಮೂಲಕ ಬದಲಾವಣೆ ಗೊಂಡ ಪ್ರಪಂಚದ ಸಾಹಿತ್ಯಿಕ ಲೋಕದ ಬಿಸಿಯು ಭಾರತಕ್ಕೆ ಬಂಗಾಳದ ಮೂಲಕ ಪ್ರವೇಶಿಸಿತು. ಅನಂತರ ಎಲ್ಲಾ ಪ್ರದೇಶಗಳಿಗೂ ಪ್ರವೇಶಿಸಿತು. ಅದು ಕನ್ನಡನಾಡಿಗೆ ಬರುವಲ್ಲಿಯು ತಡವಾಗಲಿಲ್ಲ. ಬ್ರಿಟಿಷರ ಆಡಳಿತದ ಮೂಲಕ ಅವರ ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯಗಳು ಸಹಜವೆಂಬಂತೆ ಭಾರತೀಯ

ಸಂಸ್ಕೃತಿ, ಕಲೆ, ಸಾಹಿತ್ಯಗಳ ಮೇಲೆ ಗಾಢವಾದ ಪ್ರಭಾವ ಬೀರಿದವು. ಇದರ ಪರಿಣಾಮವಾಗಿ ಅವರ ಸಾಹಿತ್ಯದಲ್ಲಿ ಹುಟ್ಟಿ ಬೆಳೆದ 'Short Story' ಎಂಬ ಸಾಹಿತ್ಯ ಪ್ರಕಾರ ವಂಗಭಾಷೆ ಆದಿಯಾಗಿ ಭಾರತದ ಎಲ್ಲಾ ಭಾಷೆಗಳಲ್ಲಿಯೂ ರೂಪು ತಳೆಯಿತು. ೧೯ನೇ ಶತಮಾನದ ಪೂರ್ವಾರ್ಧದಲ್ಲಿ 'ಎಡ್ಗರ್ ಆಲನ್ ಪೋ' ಎಂಬ ಅಮೇರಿಕನ್ ತರುಣ ಇಂದು ಸಣ್ಣಕಥೆಯೆಂದು ಕರೆಯುವ ಸಾಹಿತ್ಯ ರೂಪವನ್ನು ಸೃಷ್ಟಿಸಿ ಅದಕ್ಕೆ ಶಾಸ್ತ್ರೀಯ ಸಂಸ್ಕಾರವಿತ್ತು ಅದರ ರೂಪ-ರೇಖೆಗಳನ್ನು, ಅದರ ನಿಯಮ ಅನುಕೂಲಗಳನ್ನು ರಚಿಸಿ, ಪ್ರಪಂಚದ ಸಣ್ಣಕಥೆಗಾರರ ಮೂಲ ಪುರುಷನಾದ, 'ಸಣ್ಣ ಕಥೆಯ ಜನಕ' ಎಂದೆನಿಸಿಕೊಂಡ. ಕ್ರಿ.ಶ. ೧೮೮೩ರಲ್ಲಿ ಅವನಿಂದ ರಚಿತವಾದ 'A Manuscript found in a battle' ಎಂಬುದೇ ಮೊದಲ ಕಥೆ. ಪ್ರಾರಂಭದ ದೃಷ್ಟಿಯಿಂದಲೂ ಅದು ಶ್ರೇಷ್ಠವಾದುದು. ಇವನು ಮುಂದೆ ಅದ್ಭುತ ಭಯಾನಕ ಕಥೆಗಳನ್ನು ಬರೆದ. ಇವನ ಪ್ರಕಾರ ಸಣ್ಣಕಥೆಯೆಂದರೆ 'ಅರ್ಧತಾಸಿನಿಂದ ಹಿಡಿದು ಒಂದು ಅಥವಾ ಎರಡು ತಾಸುಗಳಲ್ಲಿ ಓದಿ ಮುಗಿಸಬಹುದಾದ ಗದ್ಯಾತ್ಮಕ ಕಥಾನಕ"[೮] ಈತನೇ ಮುಂದುವರೆದು "ಸಣ್ಣಕಥೆಗಳು ವೃತ್ತಪತ್ರಿಕೆಗಳ ಕೂಸು" ಎಂದೂ ಕರೆದ. ೧೯ನೇ ಶತಮಾನದ ಕೊನೆಗೆ ವೃತ್ತಪತ್ರಿಕೆಗಳ ಮುಖಾಂತರ ಇಂಗ್ಲೆಂಡಿನಲ್ಲಿ ಸಣ್ಣಕತೆ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. ಕನ್ನಡದಲ್ಲಿಯೂ ಕೂಡ ಸಣ್ಣಕತೆಯನ್ನು ಪ್ರಚಾರಕ್ಕೆ ತರುವುದಕ್ಕೆ ಸುವಾಸಿನಿ, ಸಚಿತ್ರಭಾರತ, ಶುಭೋದಯ, ಮಧುರವಾಣಿ ಪತ್ರಿಕೆಗಳೇ ಕಾರಣವಾದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಜನಪ್ರಿಯ ಸಾಹಿತ್ಯ ಪ್ರಕಾರದಲ್ಲಿ ಸಣ್ಣಕತೆ ಅತ್ಯಂತ ಲೋಕಪ್ರಿಯವಾದುದು. ನಮ್ಮ ಪ್ರಾಚೀನರು ಕಥೆಗಳಿಂದ ಮನೋರಂಜನೆಯನ್ನೂ, ಮನೋವಿಕಾಸವನ್ನು ಸಾಧಿಸಲು ಯತ್ನಿಸುತ್ತಿದ್ದರೆಂಬುದನ್ನು ನಮ್ಮಲ್ಲಿ ಹಲವು ಜನಪದ ಕಥೆಗಳಿಂದ, ಕಥಾಪುರಾಣಗಳಿಂದ ಗುರುತಿಸಬಹುದು. ಉಪನಿಷತ್ತುಗಳಲ್ಲಿ ಬರುವ ಕಥೆಗಳು, ಭಾಗವತ ಮೊದಲಾದ ಪುರಾಣಗಳು, ರಾಮಾಯಣ, ಮಹಾಭಾರತದಂಥ ಇತಿಹಾಸ ಕಾವ್ಯಗಳು, ರಘುವಂಶದಂಥ ಮಹಾಕಾವ್ಯ, ಪಂಚತಂತ್ರ-ಹಿತೋಪದೇಶದಂಥ ನೀತಿಕಥೆಗಳು, ಕಥಾಸರಿತ್ಸಾಗರ, ಶುಕಸಪ್ತಶತಿ ಎಂಬ ಕಥೆಗಳು, ಜಾನಪದ ಕತೆಗಳು ಮುಂತಾದವುಗಳು ಕಥಾಸೃಷ್ಟಿಯನ್ನು ಮಾಡಿದವು. ಕ್ರಿ.ಶ. ೯೨೦ರಲ್ಲಿ ಶಿವಕೋಟ್ಯಾಚಾರ್ಯನು ರಚಿಸಿದ 'ವಡ್ಡಾರಾಧನೆ', ೧೧ನೇ ಶತಮಾನಕ್ಕೆ ಸೇರಿದ ನಯಸೇನನ 'ಧರ್ಮಾಮೃತ'ವನ್ನು ಸಹ ಇಲ್ಲಿ ಹೆಸರಿಸಬಹುದು. 'ಸಣ್ಣಕತೆ' ಎಂಬ ಪದವನ್ನು ಇಲ್ಲಿ 'ಆಧುನಿಕ ಸಣ್ಣಕತೆ' ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಬಳಸಲಾಗುತ್ತಿದೆ. ಹೀಗೆಂದಾಗ ಪ್ರಾಚೀನ ಸಣ್ಣಕತೆಗಳು ಇದ್ದಿರಬೇಕು ಎಂಬ ಪ್ರಶ್ನೆ ಬರುವುದು. ಸಣ್ಣಕತೆ ಬರುವುದಕ್ಕಿಂತ ಮುಂಚೆ ನಮ್ಮಲ್ಲಿ ಕಥೆಗಳನ್ನು ಸಣ್ಣಕತೆಗಳೆಂದು ಪರಿಗಣಿಸುತ್ತಿರಲಿಲ್ಲ. ಅವು ಕೇವಲ ಕಥೆಗಳೆಂದು ಗುರುತಿಸುತ್ತಾ ಬಂದಿದ್ದೆವು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆ ಪ್ರಥಮವಾಗಿ ಕಾಲಿಟ್ಟಿದ್ದು ಪಂಜೆ ಮಂಗೇಶರಾಯರಿಂದಲೇ. ಎಂ.ಎನ್. ಕಾಮತ್, ಕೆರೂರ ವಾಸುದೇವಾಚಾರ್ಯ ಈ ಮೂವರನ್ನು ಒಟ್ಟುಗೂಡಿಸಿ ಹೇಳಲಾಗುತ್ತದೆ.

ಆಧುನಿಕ ಕನ್ನಡ ಸಣ್ಣಕತೆಗಳನ್ನು ಗುರುತಿಸಿದ್ದು ೧೯೦೦ರಲ್ಲಿ. ಅದೂವರೆಗೂ ಗುಪ್ತವಾಹಿನಿಯಾಗಿ ಹರಿಯುತ್ತಿದ್ದ ಕಥೆ, ಗೋಚರವಾಗಿ ಒಂದು ಬಗೆಯ ಸೃಷ್ಟಿಶೀಲ ಖಚಿತತೆಯನ್ನು ಪಡೆದುಕೊಂಡಿತು.

೧೯೦೦ರಲ್ಲಿ 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟವಾದ ಪಂಜೆಯವರ 'ನನ್ನ ಚಿಕ್ಕತಾಯಿ' ಕನ್ನಡದ ಮೊತ್ತಮೊದಲ ಕಥೆಯಾಗಿದೆ. ಅದನ್ನು ಮಂ. ಗೋವಿಂದ ಪೈ ಹಾಗೂ ಸಣ್ಣಕಥಾ ಪರಂಪರೆಯ ನಿರ್ಮಾಪಕ ಮಾಸ್ತಿಯವರೇ ಒಪ್ಪಿಕೊಂಡಿದ್ದಾರೆ. ಇದಕ್ಕೆ ನಿದರ್ಶನವಾಗಿ "೧೯೦೦ರವರೆಗೆ ಕನ್ನಡ ಸಾಹಿತ್ಯದ ಅಂಗವೆನಿಸತಕ್ಕ ಚಿಕ್ಕ ಕಥೆಗಳಿಲ್ಲದುದರಿಂದ ಅದೊಂದು ನೂತನತೆಯನ್ನು ಸೃಜಿಸಿ, ಅದನ್ನು ಮೊಟ್ಟಮೊದಲು ನಮ್ಮ ಸಾಹಿತ್ಯಕ್ಕೆ ದೊರಕಿಸಿಕೊಟ್ಟ ಪಂಜೆಯವರೇ ಕನ್ನಡ ಕಥೆಗಳ ವಿಧಾತ್ರರೆಂಬ ಸ್ವಯಂ ವ್ಯಕ್ತವಾದ ಸತ್ಯಕ್ಕೆ ಬೇರೊಂದು ಸತ್ಯಾಪನವು ಬೇಕೆಂದಿಲ್ಲ"[೯] ಎಂದು ಪೈ ಅವರು ಅಭಿಪ್ರಾಯಪಟ್ಟರೆ, "ಮಾಸ್ತಿಯವರು ಸಾಹಿತ್ಯದ ಈ ಪ್ರಕಾರದಲ್ಲಿ ನಮ್ಮಲ್ಲಿ ಮೊದಲು ದುಡಿದವರು ಶ್ರೀ ಪಂಜೆ ಮಂಗೇಶರಾಯರು ಎಂದು ನನ್ನ ತಿಳಿವಳಿಕೆ" ಎಂದು ಹೇಳುತ್ತಾರೆ. ಇವರ ಕೆಲವು ಕಥೆಗಳು 'ನನ್ನ ಚಿಕ್ಕ ತಂದೆ', 'ನನ್ನ ಚಿಕ್ಕ ತಂದೆಯ ಉಯಿಲು', ತಮ್ಮ ಜೀವನದ ನೈಜ ಘಟನೆಗಳ ನಿರೂಪಣೆ ಯಂತಿವೆ ಮತ್ತು ಪಾಶ್ಚಾತ್ಯರ ಅನುಕರಣೆಯೂ ಇವರ ಕಥೆಗಳಲ್ಲಿ ಕಂಡು ಬರುತ್ತದೆ. ಪಂಜೆಯವರನ್ನು ಅನುಸರಿಸಿ, ಅವರ ಪ್ರಭಾವಕ್ಕೊಳಗಾಗಿ ಗುರುತಿಸುವಂತಹ ಕಥೆಗಾರರು ಸೃಷ್ಟಿಯಾಗಲಿಲ್ಲವೆಂದು ಹೇಳಬಹುದು. ಗಿರಡ್ಡಿ ಗೋವಿಂದರಾಜು ಅವರು "ಈ ಮೂವರ ಕಥೆಗಳೂ ನಿಯತಕಾಲಿಕೆಯಲ್ಲಿ ಪ್ರಕಟವಾದ್ದದ್ದರಿಂದ ಜನ ಓದಿ ಮರೆತು ಬಿಟ್ಟರು. ಹೀಗಾಗಿ ಇವರ ಪ್ರಭಾವ ಮುಂದಿನವರ ಮೇಲೆ ಬೀಳಲಿಲ್ಲ"[೧೦] ಎಂದು ಅಭಿಪ್ರಾಯಪಟ್ಟಿದ್ದಾರೆ. ಇವರ ನಂತರ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಸಣ್ಣಕಥಾ ಪ್ರಕಾರವನ್ನೇ ಆಯ್ದುಕೊಂಡರು. ಇವರ 'ರಂಗಪ್ಪನ ಮದುವೆ' ೧೯೧೦ರಲ್ಲಿ ಪ್ರಕಟವಾದ ಕಥೆ ಮೊದಲನೆಯದು. ೧೯೨೦ರಲ್ಲಿ 'ಕೆಲವು ಸಣ್ಣಕಥೆಗಳು' ಎಂಬ ಮೊದಲ ಕಥಾ ಸಂಕಲನ ಪ್ರಕಟವಾಯಿತು. ಇದು ಆಧುನಿಕ ಸಣ್ಣಕತೆಗಳ ಮೊಟ್ಟಮೊದಲ ಕಥಾಸಂಕಲನ.

ಮಾಸ್ತಿಯವರಿಗಿಂತ ಮೊದಲೇ ಪಂಜೆ ಮಂಗೇಶರಾಯರು, ಕೆರೂರು ವಾಸುದೇವಾಚಾರ್ಯರು, ಎಂ.ಎನ್. ಕಾಮತರು ಸಣ್ಣಕತೆ ಮಾಧ್ಯಮದ ಸಾಧ್ಯತೆಗಳನ್ನು ಗುರುತಿಸಿ ಪ್ರಯೋಗಗಳನ್ನು ನಡೆಸಿದ್ದರು. ಇವರೆಲ್ಲರೂ ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಲಾಭ ಪಡೆದವರಾದುದರಿಂದ ಇಂಗ್ಲಿಷ್ ಕತೆಗಳ ಕಥನ ಶೈಲಿಯಿಂದ ಸಾಕಷ್ಟು ಪ್ರಭಾವಿತರಾಗಿದ್ದುದು ಸಹಜವಾಗಿತ್ತು. ಪಂಜೆಯವರ 'ಕಮಲಾಪುರದ ಹೋಟೆಲಿನಲ್ಲಿ' ಹಾಗೂ ಕಾಮತರ 'ಬೊಗ್ಗು ಮಹಾಶಯ'ಗಳಂಥ ಕಥೆಗಳ ಹಾಸ್ಯಶೈಲಿ ಕನ್ನಡಕ್ಕೆ ಹೊಸತು. ಆದರೆ ಪಂಜೆಯವರಾಗಲಿ, ಕಾಮತ್‌ರಾಗಲಿ ಸಣ್ಣಕತೆಯ ಕ್ಷೇತ್ರದಲ್ಲಿ ಗಂಭೀರ ಪ್ರಯೋಗ ನಡೆಸಲಿಲ್ಲ. ಈ ಕೀರ್ತಿ ಕೆರೂರರಿಗೆ ಸಲ್ಲಬೇಕು. ಕೆರೂರರ ಕತೆಗಳಲ್ಲಿ ವೈವಿಧ್ಯವಿದೆ. ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ ಈ ಎಲ್ಲ ಪ್ರಕಾರಗಳಲ್ಲಿಯೂ ಅವರು ಕತೆಗಳನ್ನು ಬರೆದರು. ಮಾಸ್ತಿಯವರಿಗೆ ಕೆರೂರರ ಪರಿಚಯ ಇಲ್ಲದೇ ಹೋದುದ್ದರಿಂದ ಅವರ ಕತೆಗಳು ಮಾಸ್ತಿಯವರಿಗೆ ತಲುಪಲಿಲ್ಲ. ಹೀಗಿದ್ದರೂ ಸಹ ಇವರಿಬ್ಬರಲ್ಲಿ ಎದ್ದು ಕಾಣುವ ಸಾಮ್ಯತೆಗಳಿವೆ. ಮಾಸ್ತಿಯವರಿಗಿಂತ ಮೊದಲೇ ಕೆರೂರರು ಭಾರತೀಯ ಹಾಗೂ ಪಾಶ್ಚಾತ್ಯ ಕಥನ ಶೈಲಿಯನ್ನು ಒಂದೇ ಸಂಕಥನದಲ್ಲಿ ತರಲು

ಪ್ರಯತ್ನಿಸಿದ್ದರು. ಕಥನ ತಂತ್ರದಲ್ಲಿಯೂ ಕೂಡ ಮಾಸ್ತಿಯವರಂತೆ ಕೆರೂರರು ಮಹತ್ವದ ಪ್ರಯೋಗ ಕೈಗೊಂಡರು. 'ತೊಳೆದ ಮುತ್ತು' ಕತೆಯ ನಿರೂಪಕನ ಆಯ್ಕೆ ಗಮನಿಸಿದರೆ, ಇಲ್ಲಿ ನಿರೂಪಕ ಕತೆ ಹೇಳುವುದಷ್ಟೇ ಅಲ್ಲದೇ ಕತೆಯ ಕ್ರಿಯೆಯಲ್ಲಿಯೂ ಸಕ್ರೀಯವಾಗಿ ಭಾಗವಹಿಸುತ್ತಾನೆ. ಕತೆಯ ಸಾಮಾಗ್ರಿಯ ಅಧಿಕೃತತೆಯನ್ನು ಸಾಧಿಸುವ ಇಂಥ ತಂತ್ರ ವಿಶೇಷವನ್ನು ಮಾಸ್ತಿಯವರು ಧಾರಾಳವಾಗಿ ಬಳಸಿಕೊಂಡರು. ಹೀಗಿದ್ದರೂ, ಜೀವನ ಸೂತ್ರಗಳ ಶೋಧವನ್ನೇ ತಮ್ಮ ಸಾಹಿತ್ಯದ ಮುಖ್ಯ ಉದ್ದೇಶವಾಗಿಟ್ಟುಕೊಂಡ ಮಾಸ್ತಿಯವರಂತೆ ಕೆರೂರು ಹೊಸದೊಂದು ಮಾರ್ಗ ತೆರೆಯುವಲ್ಲಿ ಸಫಲ ರಾಗಲಿಲ್ಲ. ಮಾಸ್ತಿಯವರು ಭಿನ್ನ ವಸ್ತು, ತಂತ್ರಗಳನ್ನಳವಡಿಸಿ ಸುಮಾರು ನೂರಕ್ಕೂ ಹೆಚ್ಚು ಕಥೆಗಳನ್ನು ಬರೆದರು. ೧೯೭೦ರ ಹೊತ್ತಿಗೆ ೧೫ ಕಥಾಸಂಗ್ರಹಗಳು ಪ್ರಕಟಗೊಂಡವು. ಇವರ ಪ್ರಭಾವಕ್ಕೊಳಗಾಗಿ ಆನಂದಕಂದ, ಅಶ್ವತ್ಥ, ಆನಂದ, ಸಿ.ಕೆ. ವೆಂಕಟರಾಮಯ್ಯ, ಕೆ.ವಿ. ಪುಟ್ಟಪ್ಪ, ಅ.ನ.ಕೃ., ಕೃಷ್ಣಕುಮಾರ ಕಲ್ಲೂರು ಮುಂತಾದವರ ಒಂದು ಪಂಥವೇ ಉದಯವಾಯಿತು.

ಆಧುನಿಕ ಕನ್ನಡ ಕಥನ ಸಾಹಿತ್ಯವು ಹುಟ್ಟಿದ್ದು ಜಾನಪದ ಮತ್ತು ಸಂಸ್ಕೃತದ ನೆಲೆಯಿಂದ, ಬೆಳೆದದ್ದು ಇಂಗ್ಲೀಷ್ ನೆಲೆಯ ಆಶ್ರಯದಲ್ಲಿ. ಈ ಮೂರು ನೆಲೆಗಳಲ್ಲಿ ಬೆಳೆದುಬಂದ ಕಥಾಸಾಹಿತ್ಯವು ಓದುಗರಿಗೆ ಕೊಡುವಂಥ ಅನುಭವ ಮಹತ್ವದ್ದು. ಈ ಅನುಭವ ಎರಡು ಬಗೆಯಲ್ಲಿ ಲಭಿಸುತ್ತದೆ. ಒಂದು ಪ್ರತ್ಯಕ್ಷ ಇನ್ನೊಂದು ಪರೋಕ್ಷ. ಈ ಎರಡೂ ಬಗೆಗಳಿಂದಲೂ ತಲಾ ಎರಡು ರೀತಿಯ ಅನುಭವವೂ ಹುಟ್ಟುತ್ತದೆ. ಅದೆಂದರೆ ಪ್ರಜ್ಞಾಪೂರ್ವಕ, ಅಪ್ರಜ್ಞಾಪೂರ್ವಕ. ಇವುಗಳಲ್ಲಿ ಕಥಾಸಾಹಿತ್ಯವು ನೀಡುವ ಅನುಭವ ಲೇಖಕರಿಗೆ ಪ್ರತ್ಯಕ್ಷ ಅನುಭವವನ್ನು ಹಾಗೂ ಸಹೃದಯನಿಗೆ ಪರೋಕ್ಷ ಅನುಭವವನ್ನು ನೀಡುತ್ತದೆ. ಲೇಖಕ ತಾನು ಕಂಡು ಅನುಭವಿಸಿದಂತಹ ನಿಲುವುಗಳನ್ನು ಕಥೆಯಲ್ಲಿ ತರುತ್ತಾನೆ. ಅಂಥವು ಗಳನ್ನು ಓದುವಾಗ ಸಹೃದಯನು ದ್ವಿತೀಯ ಪುರುಷನಾಗಿ ಮತ್ತು ಉತ್ತಮ ಪುರುಷನಾಗಿಯೂ ಅನುಭವಿಸುತ್ತಿರುತ್ತಾನೆ. ಲೇಖಕನ ಅನುಭವ ಎರಡು ಪರ್ಯಾಯ ವ್ಯವಸ್ಥೆಗೆ ಸಿದ್ಧಗೊಳಿಸುತ್ತದೆ. ಒಂದು ಸೃಜನಾತ್ಮಕವಾಗಿ ಎದುರಿಸುವುದು ಮತ್ತೊಂದು ಫಲಾಯನ ಮಾಡುವುದು. ಮೊದಲನೆಯದನ್ನು ಲೇಖಕ ಆಯ್ದುಕೊಂಡಾಗ ಕಥೆ ಹುಟ್ಟುತ್ತದೆ, ಬೆಳೆಯುತ್ತದೆ. ಅನುಭವ ಮತ್ತು ಇತರೇ ಅಂಶಗಳನ್ನೊಳ ಗೊಂಡು ಹೊರಬಂದಂತಹ ಕಥನಗಳತ್ತ ನೋಡಿದಾಗ ಸೃಷ್ಟಿಕ್ರಿಯೆಯು ನಿಜಕ್ಕೂ ಅತ್ಯದ್ಭುತವಾಗಿ ಕಂಡು ಬರುತ್ತದೆ.

ಟಿಪ್ಪಣಿಗಳು

೧. ಡಾ. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪು. ೬೨.

೨. ಸಂ. ಡಾ. ಎಂ.ಜಿ. ಬಿರಾದಾರ ಮತ್ತು ಇತರರು, ಜನಪದ ನೂರೆಂಟು ಕಥೆಗಳು, ಪು. ಲ.

೩. **ಅದೇ.....ಪುಸ್ತಕ,** ಪು.ಸಂ. ೧೭.

೪. ಸಂ. ಡಾ. ಹಂಪನಾಗರಾಜಯ್ಯ, ಜೈನ ಕಥಾಕೋಶ, ಪು. ೧೯.

೫. ಅದೇ ಪುಸ್ತಕ.... ಪು. ೬.

೬. ಅನು: ಡಿ.ಎ. ಶಂಕರ್, ಕಥಾಕೋಶ, ಪು. ೮೭.

೭. ಅದೇ ಪುಸ್ತಕ... ಪು. ೫೯.

೮. ಪಿ.ವಿ. ಶಾಸ್ತ್ರಿ, ಸಾಹಿತ್ಯದ ಪ್ರಕಾರಗಳು, ಪು. ೫.

೯. ಗೋವಿಂದ ಪೈ ಎಂ., ಕನ್ನಡದ ಮೊರೆ, ಪು. ೧೮.

೧೦. ಗಿರಡ್ಡಿ ಗೋವಿಂದರಾಜು, ಸಾತತ್ಯ, ಪು. ೧೭೩.

• • •

ಅಧ್ಯಾಯ ೩

ಕಥೆ ಮತ್ತು ಕಥನ ನೆಲೆಗಳು

ಅಧ್ಯಾಯ ೩

ಕಥೆ ಮತ್ತು ಕಥನದ ನೆಲೆಗಳು

'ಕಥೆ' ಎನ್ನುವುದು 'ಕಥ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಇದರ ಅರ್ಥ 'ಹೇಳು' ಎಂದು. 'ಕಥನ' ಎಂದರೆ ನಿರೂಪಣೆ, ವಿವರಣೆ, ಹೇಳುವಿಕೆ, ಕಥಿಸುವಿಕೆ ಎಂದು ಹೀಗೆ ಅನೇಕ ಅರ್ಥಗಳಿವೆ. 'ಕಥೆ' ಎಂದರೆ ಕಥಿತ ವಸ್ತು. ಮೂಲತಃ ಅದು ಹೇಳತಕ್ಕದ್ದು ಎಂಬ ಸ್ವರೂಪ ಹೊಂದಿದೆ. ಲಿಖಿತ ಪದ್ಧತಿ ಆನಂತರ ಬಂದದ್ದು. ಅಂದರೆ ಕಥೆ ಹೇಳುವ ಸಂಪ್ರದಾಯ ಮೌಖಿಕ ತೋಂಡಿ ಸಂಪ್ರದಾಯದಲ್ಲಿತ್ತು. ಕೆಲವೆಡೆ ಇಂದಿಗೂ ಕಥೆಗಳು ತೋಂಡಿ ಸಂಪ್ರದಾಯದಲ್ಲಿವೆ. ಇದನ್ನೆ ಜನಪದ ಕಥೆ ಎಂದು ಕರೆಯುವರು. ಜನಪದ ಕತೆಯ ವಸ್ತು-ಆಶಯ ಒಂದೇ ಇದ್ದರೂ ಕೂಡ ಅದನ್ನು ಕಥಿಸುವಂಥ ಕ್ರಮ ದೇಶದಿಂದ ದೇಶಕ್ಕೆ, ಭಾಷೆಯಿಂದ ಭಾಷೆಗೆ ಹಾಗೂ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುವುದನ್ನು ಗಮನಿಸುತ್ತೇವೆ. ಏಕೆಂದರೆ ಅದು ಅಂದರೆ ಕಥನಕ್ರಮ ಎನ್ನುವುದು ಆಯಾ ದೇಶದ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದಲೇ ಒಂದು ಸಮುದಾಯದ ಸಂಸ್ಕೃತಿಯನ್ನು ಅರಿಯಬೇಕಾದರೆ ಇಂಥ ಕಥೆಗಳು ಆಕರಗಳಾಗುತ್ತವೆ. ಅಲ್ಲದೆ ಕಥನಕ್ರಮವು ಕಥಿಸುವವನ ಬೌದ್ಧಿಕ ಮಟ್ಟವನ್ನು ಅವಲಂಬಿಸಿರುತ್ತದೆ. ಕಥಿಸುವವನು ಉತ್ತಮ ಪ್ರತಿಭಾವಂತನಾಗಿದ್ದರೆ, ಕಥೆಯನ್ನು ಕಲಾತ್ಮಕವಾದ ರೀತಿಯಲ್ಲಿ ನಿರೂಪಿಸುತ್ತಾನೆ. ಕಥೆ ಕಾಲಬದ್ಧ ಬದುಕಿನ ಕಥನವಾಗಿದೆ. ಕಥೆ ಒಂದು ರೂಪ ಪಡೆಯಬೇಕಾದರೆ ಅದಕ್ಕೆ ಕನಿಷ್ಟ ಪಕ್ಷ ಒಂದು ಘಟನೆಯಾದರೂ ಘಟಿಸಿರಬೇಕು ಅಥವಾ ಅಂಥ ಘಟನೆಯನ್ನು ಕಲ್ಪಿಸುವ ಬೌದ್ಧಿಕ ಸಾಮರ್ಥ್ಯ ಕಥಿಸುವವನಿಗಿರಬೇಕು. ಕಥೆ ಘಟನೆಗಳನ್ನು ಇದ್ದಕ್ಕಿದ್ದಂತೆ ವಿವರಿಸದೆ ಅವುಗಳನ್ನು ಪುನಃ ಸೃಷ್ಟಿಸುತ್ತದೆ ಎಂಬುದರಲ್ಲಿ ಕತೆಗಾರನ ಸೃಜನಶೀಲತೆಯ ಸೂಕ್ಷ್ಮ ಪ್ರಸ್ತಾಪವೂ ಇದೆ. 'ಘಟನೆ' ಕಥೆಯ ಮೂಲ ಘಟಕವಾಗಿದೆ. ಬಾಲ್ ಎಂಬಾಕೆ 'ಘಟನೆ'ಯೆಂದರೆ "ವ್ಯಕ್ತಿಗಳಿಂದ ಘಟಿಸಿದ ಅಥವಾ ಅವರು ಅನುಭವಿಸಿದ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಸ್ಥಿತ್ಯಂತರ"[1] ಎಂದು ವ್ಯಾಖ್ಯಾನಿಸಿದ್ದಾಳೆ.

ಕಥನ ಕ್ರಮದ ಪರಿಕಲ್ಪನೆ ಅತ್ಯಂತ ಪ್ರಾಚೀನವಾದುದು. ಮಾನವ ಭಾಷೆ ಕಲಿತಂದಿನಿಂದ ಈ ಪ್ರಕ್ರಿಯೆ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ಆರಂಭದಲ್ಲಿ ಕಥೆ ಹೇಳುವ ಅಥವಾ ಒಂದು

ಘಟನೆಯನ್ನು ನಿರೂಪಿಸುವ ಕ್ರಮವು ಕಥಿಸುವವನ ಗಮನಕ್ಕೆ ಬಾರದೇ ಹಾಗೆಯೇ ಬಂದಿರಬಹುದು. ಕಾಲಕ್ರಮೇಣ ಮನುಷ್ಯನ ವಿಚಾರಧಾರೆ ಬದಲಾದಂತೆ, ಉತ್ತಮವಾಗ್ಮಿಯಾದಂತೆ ಕಥೆಯ ಸ್ವರೂಪ ದಲ್ಲಿಯೂ ಬದಲಾವಣೆಯಾಗುತ್ತಾ ಹೋಯಿತು. ಕಥನಕ್ರಮವೆನ್ನುವುದು ಘಟಿಸಿದ ಘಟನೆಯನ್ನಾಗಲಿ ಅಥವಾ ಕಲ್ಪಿತ ಘಟನೆಯನ್ನಾಗಲಿ ಕಲಾತ್ಮಕವಾಗಿ ನಿರೂಪಿಸುವಂತಹ ಕ್ರಿಯೆ. ಆ ಕಲ್ಪಿತ, ಘಟಿಸಿದ ಘಟನೆಯ ಕಲಾತ್ಮಕ ನಿರೂಪಣೆಗೆ ತನ್ನದೇ ಆರಂಭ, ಬೆಳವಣಿಗೆ ಹಾಗೂ ಮುಕ್ತಾಯ ಎಂಬ ಆಯಾಮಗಳಿರುತ್ತವೆ.

ಕಥೆಯ ಹುಟ್ಟನ್ನು ಹುಡುಕುವುದು ಭಾಷೆಯ ಮೂಲವನ್ನು ಹುಡುಕಿದಂತೆಯೆ. ಆದರೆ ಭಾರತೀಯರ ಕಲ್ಪನೆಯಲ್ಲಿ ಕಥೆಯ ಹುಟ್ಟಿಗೆ ಅನೇಕ ಪೌರಾಣಿಕ ಕಟ್ಟುಕಥೆಗಳಿರುವುದನ್ನು ಕಾಣುತ್ತೇವೆ. ಬೃಹತ್ಕಥೆ, ಪಂಚತಂತ್ರ, ವಡ್ಡಾರಾಧನೆ, ಜಾತಕ ಕಥೆಗಳು ಮುಂತಾದ ಕೃತಿಗಳ ಉಗಮದ ಹಿನ್ನೆಲೆಯನ್ನು ಗಮನಿಸಿದಾಗ ಕಥೆಗಳ ಸ್ವರೂಪ, ಅವುಗಳ ಹಿಂದಿರುವ ಉದ್ದೇಶ, ಕಥನ ಕ್ರಮದ ಅರಿವು ಗಮನಕ್ಕೆ ಬರುವುದು. ಕಥೆಗಳ ಹುಟ್ಟಿಗೆ ನಮ್ಮಲ್ಲಿ ಒಂದು ಪೌರಾಣಿಕ ಕಥೆಯೊಂದಿದೆ. ಕಥಾಸರಿತ್ಸಾಗರದಲ್ಲಿ ಕಥೆಗಳನ್ನು ಮೊದಲು ಪಾರ್ವತಿಯ ಕೋರಿಕೆಯ ಮೇರೆಗೆ ಶಿವನು ಹೇಳಿದ್ದಾಗಿಯೂ ಅದನ್ನು ಶಿವನ ಇಬ್ಬರು ಗಣಗಳಾದ ಪುಷ್ಪದಂತ ಮತ್ತು ಮಾಲ್ಯವಂತರು ಕದ್ದು ಕೇಳಿದ್ದರಿಂದ ಶಪಿತರಾಗಿ ಸ್ವರ್ಗಚ್ಯುತರಾಗಿ ಭೂಮಿಯ ಮೇಲೆ ವರರುಚಿ ಮತ್ತು ಗುಣಾಢ್ಯರಾಗಿ ಹುಟ್ಟಿ, ವರರುಚಿಯು ಕಾಣಭೂತಿಗೂ, ಕಾಣಭೂತಿಯೂ ಗುಣಾಢ್ಯನಿಗೂ ಆ ಕಥೆಗಳನ್ನು ಹೇಳಿ ಶಾಪ ವಿಮುಕ್ತರಾದರೆಂದೂ, ಹಾಗೇ ಹೇಳಿದ ಕಥೆಗಳನ್ನು ಗುಣಾಢ್ಯನೂ ಪೈಶಾಚಿ ಭಾಷೆಯಲ್ಲಿ ಬರೆದು ಪ್ರಕಾಶಿಸಿದ್ದು ಅದು ಬೃಹತ್ಕಥೆಯಾಯಿತೆಂದು ಕಥಾಪೀಠಲಂಬಕದಲ್ಲಿ ಹೇಳಲಾಗಿದೆ. ಇದು ಉಪಲಬ್ಧವಿಲ್ಲ. ಆದುದರಿಂದ ಅದರ ಮೂಲ ರೂಪ ತಿಳಿಯಲು ಸಾಧ್ಯವಿಲ್ಲ. ಈ 'ಕಥಾಸರಿತ್ಸಾಗರ' ಕೃತಿಯ ಹುಟ್ಟಿಗೆ ಹಿನ್ನೆಲೆಯಾಗಿ ಈ ಮೇಲಿನ ಕಥೆ ನಮ್ಮಲ್ಲಿ ಪ್ರಚಲಿತವಿರುವುದನ್ನು ಕಾಣಬಹುದು. "ಕಥಾಸರಿತ್ಸಾಗರವು ಧರ್ಮಗ್ರಂಥವಲ್ಲ, ಇತಿಹಾಸವಲ್ಲ; ಅದು ಧರ್ಮದರ್ಶನಗಳನ್ನು ಬೋಧಿಸುತ್ತೇನೆಂದಾಗಲಿ, ರಾಮಕೃಷ್ಣರಂಥ ಉದಾತ್ತ ನಾಯಕರನ್ನು ಬಣ್ಣಿಸುತ್ತೇನೆಂದಾಗಲಿ, ರಾಮಕೃಷ್ಣರಂಥ ಉದಾತ್ತ ನಾಯಕರನ್ನು ಬಣ್ಣಿಸುತ್ತೇನೆಂದಾಗಲಿ ಹೊರಟಿದ್ದಲ್ಲ, ಅದರ ಧರ್ಮ ನಿಷ್ಪೃಷ್ಟವೂ ನಿಸ್ಸಂದಿಗ್ಧವೂ ಆಗಿದೆ."[೨]

ದಾಕ್ಷಿಣಾತ್ಯ ದೇಶದಲ್ಲಿ ಮಹಿಲಾರೋಪ್ಯ ನಗರದಲ್ಲಿ ಅಮರಶಕ್ತಿ ಎಂಬ ಅರಸನಿಗೆ ಬಹುಶಕ್ತಿ, ಉಗ್ರಶಕ್ತಿ ಮತ್ತು ಅನಂತಶಕ್ತಿ ಎಂಬ ಮೂವರು ಮಕ್ಕಳಿದ್ದರು. ರಾಜಕುಮಾರರು ಅವಿವೇಕಿಗಳೂ, ಮೂರ್ಖರೂ ಆಗಿದ್ದುದರಿಂದ, ಅವರನ್ನು ಸುಧಾರಿಸುವ ಉಪಾಯವೇನೆಂದು ಅರಸನು ಆಸ್ಥಾನದಲ್ಲಿ ಪ್ರಶ್ನಿಸಿದನು. ರಾಜಪುತ್ರರನ್ನು ವಿದ್ಯಾವಂತರಾಗಿ ಮಾಡುವುದು ತಮಗೆ ಸಾಧ್ಯವಿಲ್ಲವೆಂದು ಮಂತ್ರಿಗಳು ಮತ್ತು ಪಂಡಿತರು ನುಡಿದಾಗ ಎಂಬತ್ತು ವರುಷದ ವಯೋವೃದ್ಧ ಮತ್ತು ಜ್ಞಾನವೃದ್ಧನಾದ ವಿಷ್ಣುಶರ್ಮನು ತಾನೇ ಮುಂದೆ ಬಂದು ಮಕ್ಕಳನ್ನು ಆರೇ ತಿಂಗಳಲ್ಲಿ ನೀತಿಶಾಸ್ತ್ರಜ್ಞರಾಗಿ ಮಾಡುವುದಾಗಿ ವಚನಕೊಟ್ಟನು.

ನಂತರ ಆ ಮೂವರಿಗೂ ಮಿತ್ರಭೇದ, ಮಿತ್ರ ಸಂಪ್ರಾಪ್ತಿ, ಕಾಕೋಲುಕೀಯ, ಲಬ್ಧಪ್ರಣಾಶ ಮತ್ತು ಅಪರೀಕ್ಷಿತಕಾರಕ ಎಂಬ ಪಂಚತಂತ್ರದ ಕಥೆಗಳನ್ನು ಹೇಳಿ ಮಂದಬುದ್ಧಿಗಳಾದ ರಾಜಕುಮಾರರನ್ನು ಆರೇ ತಿಂಗಳಲ್ಲಿ ನೀತಿವಿದರನ್ನಾಗಿ ಮಾಡಿದನು. ಈ ತಂತ್ರಗಳನ್ನು ಒಳಗೊಂಡ ಕೃತಿಯೇ 'ಪಂಚತಂತ್ರ'.

'ವಡ್ಡಾರಾಧನೆ' ಒಂದು ಜೈನ ಧಾರ್ಮಿಕ ಕೃತಿ. ಈ ಕಥೆಗಳು ನಮ್ಮ ಅತ್ಯಂತ ಪ್ರಾಚೀನ ಕಲೆಯಾದ ಕಥೆಗಾರಿಕೆಗೆ ಸಾಕ್ಷಿಯಾಗಿವೆ. 'ವಡ್ಡಾರಾಧನೆ'ಯಲ್ಲಿಯ ಉಪಕಥೆಗಳು ಬಹಳ ಪ್ರಾಚೀನ ವಾದವುಗಳು. ಕೆಲವು ಕತೆಗಳು 'ಬೃಹತ್ಕಥೆ'ಯಲ್ಲಿ ಬರುವ ಕಥೆಗಳನ್ನು ಹೋಲುತ್ತವೆ. ಇಲ್ಲಿನ ಕೆಲವು ಕತೆಗಳಲ್ಲಿ ಮತಾಂತರದ ರಾಜಕಾರಣ ಇಲ್ಲಿ ಕೆಲಸ ಮಾಡುತ್ತದೆ. 'ಪುಣ್ಯಕ್ಕೆ ತಕ್ಕ ಫಲ, ಪಾಪಕ್ಕೆ ತಕ್ಕ ಶಿಕ್ಷೆ' ಎಂಬ ತತ್ವಗಳನ್ನು ಈ ಕಥೆಗಳು ಪ್ರತಿಪಾದಿಸುತ್ತವೆ.

ಅದೇ ರೀತಿ 'ಜಾತಕ ಕಥೆಗಳು' ಬುದ್ಧ ಮತ್ತು ಅವನ ಅನುಯಾಯಿಗಳು ಬೌದ್ಧ ಧರ್ಮದ ತತ್ವಗಳನ್ನು ನಿರೂಪಿಸಿದ ಕಥೆಗಳಾಗಿವೆ. ಕ್ರಿ.ಪೂ. ೩೮೦ರ ಸುಮಾರಿನಿಂದ ೫೪೭ರವರೆಗೆ ಜಾತಕ ಕಥೆಗಳು ಬಳಕೆಯಲ್ಲಿವೆ. ಬುದ್ಧನ ಪೂರ್ವ ಜನ್ಮದ ಹರಹುವನ್ನು ತಿಳಿಸುವಂತಹ ಈ ಕಥೆಗಳು ಪಾಲೀ ಭಾಷೆಯಲ್ಲಿವೆ. ಪ್ರಾಣಿ ಕಥೆಗಳು, ನೀತಿಕಥೆಗಳು, ಕಟ್ಟುಕಥೆಗಳು, ತತ್ವನಿರೂಪಣೆ ಮತ್ತು ಐತಿಹ್ಯಗಳು ಇದರಲ್ಲಿ ಅಡಗಿವೆ.

ಮಾನವನಿಗೂ ಕಥೆಗೂ ಅವಿನಾಭಾವ ಸಂಬಂಧವಿದೆ. ಕಥೆಯನ್ನು ಉತ್ಸಾಹದಿಂದ ಹೇಳುವುದೂ ಅದನ್ನು ಕುತೂಹಲದಿಂದ ಕೇಳುವುದೂ ಮನುಷ್ಯನ ಪ್ರವೃತ್ತಿ. ಈ 'ಕಥನಕಲೆ'ಯ ಪ್ರವೃತ್ತಿ ಯಾವುದೊಂದು ದೇಶಕ್ಕಾಗಲಿ, ಕಾಲಕ್ಕಾಗಲಿ, ಸೀಮಿತಿವಾದುದಲ್ಲ. ನಾಗರಿಕತೆಯ ಪೂರ್ವದಲ್ಲಿ ಮನುಷ್ಯ ಕಾಡಿನಲ್ಲಿ ಗಡ್ಡೆ-ಗೆಣಸುಗಳನ್ನು ತಿನ್ನುತ್ತ, ಬಯಲಿನಲ್ಲಿ ಬೆತ್ತಲೆಯ ಬದುಕು ಸಾಗಿಸುತ್ತಿರುವಾಗಿನಿಂದ ಹಿಡಿದು, ಚಂದ್ರಲೋಕದಲ್ಲಿ ಮನೆಕಟ್ಟುತ್ತಿರುವವರೆಗೂ ಈ ಕಥೆ ಹೇಳುವ, ಕೇಳುವ, ಬರೆಯುವ, ಓದುವ ವೈವಿಧ್ಯತೆಯಿಂದೊಡಗೂಡಿದ ಕಲೆ ಅವಿರಳವಾಗಿ, ಅವಿಚ್ಛಿನ್ನವಾಗಿ ಹರಿದು-ಬೆಳೆದು ಬಂದಿದೆ. ಪ್ರಕೃತಿಯ ಅದ್ಭುತ ಬದಲಾವಣೆಗಳಲ್ಲಿ ಅದರಿಂದ ಹೊರಹೊಮ್ಮುವಂತಹ ವರ್ಣನಾತ್ಮಕವಾಗಿರುವಂತಹ ರೂಪಗಳು, ಮಾನವ ಬುದ್ಧಿಯ ಸವಾಲುಗಳಾಗಿ, ಉತ್ತರಿಸಲಾರದ ಒಗಟುಗಳಾಗಿ ತೋರಿದ ಅನಂತ ಸೃಷ್ಟಿಕ್ರಿಯೆಗಳೇ ಈ ಕಥನಕಲೆಗೆ ಮೂಲವೆಂದು ಹೇಳಬಹುದು.

ಕಥೆಯ ಹುಟ್ಟಿಗೆ ಇನ್ನೊಂದು ಕಾರಣ ಮನುಷ್ಯನ ಸ್ವಭಾವ. ಎಲ್ಲಿಯಾದರೂ ಇಬ್ಬರು ಸೇರಿದರೆ ಮೂರನೆಯವನೊಬ್ಬನ ವಿಷಯವಾಗಲಿ, ಯಾವುದೋ ಒಂದು ಘಟನೆಯಾಗಲಿ, ಅನುಭವವಾಗಲಿ, ಭಾವನೆಯಾಗಲಿ, ಪ್ರಸ್ತಾಪಕ್ಕೆ ಬಂದೇ ಬರುವುದು. ಹೇಳಬೇಕು ಎನ್ನುವ ಮಾನವನ ಮನಸ್ಸಿನ ತುಡಿತ ಮಾತಿಗೆ ಮೊದಲು ಮಾಡುವುದು. ಮಾತನಾಡುವ ವ್ಯಕ್ತಿ ಜಾಣನಾಗಿದ್ದರೆ ತನ್ನ ಅಭಿಪ್ರಾಯವನ್ನು ಎದುರಿಗಿದ್ದ ವ್ಯಕ್ತಿಗೆ ಮನೋರಂಜಕವಾಗಿ, ಕಲಾತ್ಮಕವಾಗಿ, ಚಿತ್ರದ ಮೇಲೆ ಅಚ್ಚೊತ್ತುವಂತೆ ಕುಶಲತೆ ಯಿಂದ ಹೇಳುತ್ತಾನೆ. ಆ ಕ್ರಿಯೆಯೆ ಕಥೆಯ ಹುಟ್ಟಿಗೆ ಕಾರಣವೆನ್ನಬಹುದು. ಇಲ್ಲಿ ಹೇಳುವಷ್ಟೇ

ಕೇಳುವ ಕ್ರಿಯೆಯೂ ಮುಖ್ಯ. ಅಭಿವ್ಯಕ್ತಿಗೊಳಿಸುವಾಗ ಬಳಸುವಂಥ ರಂಜನೀಯತೆ, ಕಲಾತ್ಮಕತೆ ಕೇಳುಗನನ್ನು ಕ್ಷಣ ಮಾತ್ರವಾದರೂ ಮೈಮರೆಯುವಂತೆ ಮಾಡಿ, ಅಂದರೆ ಹೇಳುಗನ ಭಾವನೆಯಲ್ಲಿಯೇ ಕೇಳುಗನನ್ನು ಮುಳುಗಿಸಿಕೊಂಡರೆ ಅದೇ ಹೇಳುವ ಕಲೆ ಎನಿಸುತ್ತದೆ. ಈ ಹೇಳುವ ಕಲೆ ಅಥವಾ ಭಾವನೆಯ ತಾದಾತ್ಮತೆಯೇ ಕಥೆಯಾಗಿ ನಿಲ್ಲುತ್ತದೆ.

ಭಾರತೀಯರಲ್ಲಿಯ ಕಥಾಸ್ವರೂಪ ಜನಪದ ಕಥೆಗಳಲ್ಲಿ ಮೊದಲು ಮೊಳಕೆಯೊಡೆದದ್ದು. ಬೆನ್ಫೆ ಎಂಬ ಜಾನಪದ ವಿದ್ವಾಂಸರು ಜಾಗತಿಕ ಕಥೆಗಳ ಅಧ್ಯಯನ ಮಾಡಿ ಭಾರತವೇ ಎಲ್ಲಾ ಕಥೆಗಳಿಗೂ ಮೂಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಭಾರತವನ್ನು ಕಥೆಗಳ ತವರೂರು ರೆಂತಲೂ, ಕಥೆಗಳ ಕಣಜವೆಂತಲೂ ಗುರುತಿಸಿದ್ದಾರೆ. ಜಾನಪದ ಸಾಹಿತ್ಯ ಪ್ರಕಾರಗಳಲ್ಲೆಲ್ಲಾ 'ಜನಪದ ಕಥೆ' ಅತ್ಯಂತ ಪ್ರಾಮುಖ್ಯ ಪಡೆದಂತಹ ಸಾಹಿತ್ಯ ಪ್ರಕಾರವಾಗಿದೆ. ಕಥೆ ಹೇಳುವವರ ಕಲ್ಪನೆ ಮತ್ತು ಕಥೆ ಕೇಳುವವರ ಕುತೂಹಲ ಒಟ್ಟೊಟ್ಟಾಗಿ ಬೆರೆತು ಹೋಗುವಂತಹ ವಿಶಿಷ್ಟ ಜನಪದ ಪ್ರಕಾರವೇ ಜನಪದ ಕಥೆಯಾಗಿದೆ. ಈ ಜನಪದ ಕಥೆಯನ್ನು ಈಗಲೂ ಸಹ ಗ್ರಾಮೀಣ ಪ್ರದೇಶದಲ್ಲಿಯ ಅನಕ್ಷರಸ್ಥ ಜನರು 'ಅಜ್ಜಿಕತೆ' ಎಂದೇ ಗುರುತಿಸುತ್ತಾರೆ. ಇದಕ್ಕೆ ಕಾರಣ ಕಥೆ ಹೇಳುವುದರಲ್ಲಿ ಅಜ್ಜಿ ಎತ್ತಿದ ಕೈ, ಅಜ್ಜಿಯನ್ನು ಮೀರಿಸುವವರು ಯಾರು ಇಲ್ಲ. ಕಥೆ ಹೇಳುವುದಕ್ಕೆ ಯಾವುದೇ ಭೇದವಿಲ್ಲ, ಪುರುಷರು, ಸ್ತ್ರೀಯರು, ಬಾಲಕರು ವಯಸ್ಸಾದವರು ಎಂದು ಯಾವುದೇ ಭೇದವಿಲ್ಲದೆ ಯಾರಾದರೂ ಕೂಡ ಕಥೆ ಹೇಳಬಹುದು.

ಜಾನಪದ ಸಾಹಿತ್ಯ ವ್ಯಷ್ಟಿಯಿಂದ ಸಮಷ್ಟಿಯತ್ತ ಸಾಗುವ ಸಾಹಿತ್ಯ. ಇಲ್ಲಿ ಕರ್ತೃ ಯಾರೆಂಬುದು ತಿಳಿಯುವುದಿಲ್ಲ. ಆದರೆ ಕಥೆಗಳ ಹುಟ್ಟಿಗೆ ಕಾರಣ ಮತ್ತು ಉದ್ದೇಶವನ್ನು ಆಯಾ ಕಥೆಗಳನ್ನು ಓದುವಾಗ ಸ್ಪಷ್ಟವಾಗುತ್ತದೆ. ಜನಪದ ಕಥೆಗಳಲ್ಲಿ ಕಥಾವಸ್ತು ಸರಳವಾಗಿದ್ದು ಒಂದು ಕಥೆಯನ್ನು ಮಾತ್ರ ಒಳಗೊಂಡಿರುತ್ತದೆ. ಉಪಕಥೆಗಳಿರುವುದು ತುಂಬಾ ವಿರಳ. ಕನ್ನಡ ಜಾನಪದ ಸಾಹಿತ್ಯದಲ್ಲಿ 'ಕಥಾಸಾಹಿತ್ಯ'ವೇ ಹೇರಳವಾಗಿ ಲಭ್ಯವಿದೆ. ಅಜ್ಜಿ ಹೇಳುವಂತಹ ಮಕ್ಕಳ ಕಥೆಗಳಾದಿಯಾಗಿ ವೇದಾಂತ, ತತ್ವ, ನೀತಿಯನ್ನು ಬೋಧಿಸುವಂಥ ಪೌರಾಣಿಕ ಕಥೆಗಳವರೆಗೆ ಅದು ವಿವಿಧ ರೂಪದಲ್ಲಿ ಬೆಳೆದು ನಿಂತಿದೆ. ದಾಸರ ಕಥೆಗಳು, ಕುರುಬರ ಕಥೆಗಳು, ಗೊಂದಲಿಗರ ಕಥೆಗಳು, ಕಾಗೆ-ಗುಬ್ಬಿಯ ಕಥೆ, ಮೋಜಿನ ಕಥೆ, ಮಂತ್ರ-ತಂತ್ರದ ಕಥೆ ಇನ್ನೂ ಹಲವು ಬಗೆಯಲ್ಲಿ ಜಾನಪದ ಕಥಾಸಾಹಿತ್ಯದಲ್ಲಿ ಅಗಣಿತ ವಸ್ತುಸಂಗತಿಗಳು ಸೇರಿಕೊಂಡಿವೆ.

ಜನಪದ ಕಥೆಗಳ ಸ್ವರೂಪ ಲಕ್ಷಣ ಆಧುನಿಕ ಸಣ್ಣಕಥೆಗಳಿಗಿಂತ ತೀರ ಭಿನ್ನ. ಜನಪದ ಕಥೆಗಳು, ಭಾಷೆ, ನಿರೂಪಣೆಗಳಲ್ಲಿ ಸರಳತೆ, ಸಹಜತೆ ಮೈವೆತ್ತಿರುತ್ತವೆ. ಸಾಮಾನ್ಯವಾಗಿ ಎಲ್ಲಾ ಜನಪದ ಕಥೆಗಳು ಸುಖಾಂತದಲ್ಲಿಯೆ ಕೊನೆಗೊಳ್ಳುತ್ತವೆ. ಹೇಳುವವನ ಜಾಣ್ಮೆ ಕಲ್ಪನಾ ಚಾತುರ್ಯದ ಮೇಲೆ ಕಥೆಯ ಗಾತ್ರ ಅವಲಂಬಿಸಿರುತ್ತದೆ. ಹೆಚ್ಚಿನ ತಾಂತ್ರಿಕ ಗೊಂದಲವಿಲ್ಲದೆ ನೇರವಾಗಿಯೇ ನಿರೂಪಿತವಾಗಿರುವಂತಹವು. "ಹೀಂಗ ಒಂದೂರಾಗ ಒಬ್ಬ ರಾಜಾ ಇದ್ದ" ಇಲ್ಲವೇ "ಒಂದೂರಾಗ ಇಬ್ಬರು ಗಂಡ ಹೆಂಡ್ರಿದ್ರಂತ"

ಎಂದೇ ಕಥೆಗಳು ಪ್ರಾರಂಭಗೊಳ್ಳುತ್ತವೆ. ಮನುಷ್ಯನ ಗುಣ-ಸ್ವಭಾವಗಳಿಗೆ ಪ್ರಾಣಿಗಳ ಗುಣ ಸ್ವಭಾವ ದೊಂದಿಗೆ ಹೇಳುವುದು ಇಲ್ಲಿ ಎದ್ದು ಕಾಣುವಂತಹದ್ದು. ಕೇಳುವವನ ಕುತೂಹಲ ಕೆರಳುವಂಥ ಬಗೆಯಲ್ಲಿ ಕಥಾನಕ ಕಲೆ ಆಕರ್ಷಕವೂ ಸರಳ ಸುಂದರವೂ ನೇರವೂ ಆಗಿರುತ್ತದೆ. ಗಾದೆ, ಒಗಟು, ಪ್ರಾದೇಶಿಕ ಭಾಷೆ ಕಥೆಗಳಲ್ಲಿ ಸರ್ವೇಸಾಮಾನ್ಯ. ದುಷ್ಟ-ಶಿಷ್ಟರ ನಡುವಿನ ಹೋರಾಟವನ್ನು ಚಿತ್ರಿಸಿ, ದುಷ್ಟರಿಗೆ ಸೋಲು, ಶಿಷ್ಟರಿಗೆ ಗೆಲುವನ್ನು ಒದಗಿಸುವುದು ಎಲ್ಲಾ ಕಥೆಗಳಲ್ಲಿ ಕಂಡು ಬರುವಂತಹ ವಿಷಯ. ಜನಪದ ಕಥೆಗಳ ವಸ್ತುವು ಸ್ವರ್ಗ-ಮರ್ತ್ಯ-ಪಾತಾಳಗಳನ್ನು ಸುತ್ತಿ ಹಾಕಿಕೊಂಡಿರುತ್ತದೆ. ಕಥೆ ಹೇಳುವಲ್ಲಿ ತೋರುವ ಜಾನಪದರ ಕಲ್ಪನಾಶಕ್ತಿ, ಚಾತುರ್ಯ ಎಂಥಹವರನ್ನೂ ಕೂಡ ಬೆರಗುಗೊಳಿಸುವಂತಹದ್ದು.

ಹೀಗೆ ಹುಟ್ಟಿದ "ಜನಪದ ಕಥೆಗಳನ್ನು ಹೇಳುವ-ಕೇಳುವ ಉದ್ದೇಶ ಹೊತ್ತುಗಳೆಯುವುದಕ್ಕಲ್ಲ. ಲೋಕ ವ್ಯವಹಾರ ಜ್ಞಾನ ಪಡೆದು, ಬುದ್ಧಿವಂತರಾಗುವುದಕ್ಕಾಗಿ. ದುಷ್ಟರನ್ನು, ಅಜ್ಞಾನಿಗಳನ್ನು, ಹಟವಾದಿಗಳನ್ನು ತಿದ್ದಿ-ತೀಡುವುದು ಇವುಗಳ ಉದ್ದೇಶವಾಗಿದೆ. ಅಂತೆಯೇ ಪುರಾಣ, ಕೀರ್ತನ, ಭಾಷಣಗಳಲ್ಲೆಲ್ಲ ಜನಪದ ಕತೆಗಳನ್ನು ಧಾರಾಳವಾಗಿ ಬಳಸಲಾಗುತ್ತಿದೆ."[5] ಈ ರೀತಿಯಾಗಿ ಜನಪದ ಕಥೆಗಳ ಹಿಂದಿರುವ ಉದ್ದೇಶವನ್ನು ವಿದ್ವಾಂಸರುಗಳು ಗುರುತಿಸಿದ್ದಾರೆ. ಇಂಥ ವಿಶಿಷ್ಟ ಲಕ್ಷಣ ಉದ್ದೇಶವನ್ನು ಇಟ್ಟುಕೊಂಡು ತೋಂಡಿ ಸಂಪ್ರದಾಯದಲ್ಲಿ ಬೆಳೆದು ಬಂದಂತಹ ಕಥೆಗಳೇ ಮುಂದೆ ಬರಹಕ್ಕೆ ಇಳಿದಾಗ ಮಹಾಕಾವ್ಯಗಳಿಗೆ ಗ್ರಾಸವಾಗಿರಬಹುದು. 'ಜನವಾಣಿ ಬೇರು, ಕವಿವಾಣಿ ಹೂವು' ಎನ್ನುವಂತೆ ಶಿಷ್ಟ ಸಾಹಿತ್ಯಕ್ಕೆ ಪ್ರೇರಣೆ ಒದಗಿಸಿರಬಹುದು.

ಕಥೆ ಹುಟ್ಟಿದ ನೆಲೆ, ಅದು ವ್ಯಾಪಿಸಿರುವ ಬಗೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಎರಡು ನೆಲೆಗಟ್ಟಿನ ಆಂತರ್ಯದ ಒಳಗೆ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಐತಿಹಾಸಿಕ, ರಾಜಕೀಯ ಹೀಗೆ ವಿವಿಧ ಬಗೆಯ ಆಯಾಮಗಳು ಕಂಡುಬರುತ್ತವೆ. ಇವನ್ನು ಕಥನಕ್ರಮದ ನೆಲೆಗಳು ಎಂದು ಗುರುತಿಸಿಕೊಂಡು ಮುಂದುವರೆಯುವುದು ಅವಶ್ಯವಾಗಿದೆ. ಕಥನಕ್ರಮದ ನೆಲೆಗಳನ್ನು

- ವ್ಯಷ್ಟಿ-ಸಮಷ್ಟಿ ಕೇಂದ್ರಿತ ನೆಲೆ
- ಭಾಷಿಕ ನೆಲೆ
- ವೈಚಾರಿಕ ನೆಲೆ

ಎಂದು ಮೂರು ಬಗೆಯಲ್ಲಿ ಸ್ಥೂಲವಾಗಿ ನೋಡಬಹುದು. ಈ ಅಂಶಗಳನ್ನು ಸಾಮಾನ್ಯವಾಗಿ ಎಲ್ಲಾ ಕಥನಗಳಲ್ಲೂ ಕಾಣಬಹುದಾಗಿದೆ.

• ವ್ಯಷ್ಟಿ-ಸಮಷ್ಟಿ ಕೇಂದ್ರಿತ ನೆಲೆ

ವ್ಯಕ್ತಿ-ಸಂಸ್ಕೃತಿಗಳ ಸಂವಾದ ಅಥವಾ ಅದನ್ನು ನೋಡುವ ಕ್ರಮ, ಪ್ರಕೃತಿ, ಸಂಸ್ಕೃತಿಗಳ ಸಂವಾದವೂ ಹೌದು. ಕಥೆಗಾರ ವ್ಯಕ್ತಿ ನೆಲೆಯಿಂದ ಕಥನವನ್ನು ಸೃಷ್ಟಿಸಿ ಅದನ್ನು ಸಾಮಾಜಿಕ ನೆಲೆಯವರೆಗೆ ತೆಗೆದುಕೊಂಡು ಹೋಗುತ್ತಾನೆ. ಅಲ್ಲದೇ ಸಮಾಜ-ಸಂಸ್ಕೃತಿಗಳ ನಡುವಣ ಅರ್ಥವತ್ತಾದ ಚಿತ್ರಣ

ಮೂಡುವಂತೆ ಮಾಡುವುದು ಅವನ ಕರ್ತವ್ಯವಾಗುತ್ತದೆ. ಈ ಅಂಶವನ್ನು ನವೋದಯ ಪೂರ್ವದ ಕಥೆಗಳಲ್ಲಿ ಹಾಗೂ ನವೋದಯ ಘಟ್ಟದ ಕಥೆಗಳಲ್ಲಿ ಸ್ಪಷ್ಟವಾಗಿ ಓದುಗರ ಗಮನಕ್ಕೆ ಬರುತ್ತದೆ. "ಕತೆ ಹೇಳುವ ಕಲೆಯು ತೀರ ಹಳೆಯದು; ಕೂಡಿಯುಂಬ ಕೆಲೆವ ಜನದ ಜಂಗುಳಿಯೊಡನೆ ಅದು ಜನ್ಮವೆತ್ತಿದೆ. ಸಮಾಜವೆಂಬಲ್ಲಿ ಸಹೃದಯತೆ, ಕಲ್ಪಕತೆ ಇವು ಇರಲೇಬೇಕು. ಅವುಗಳ ಒಡಲಿನಿಂದ ಹುಟ್ಟುವ ಸಹಜತರವಾದ ಮೊದಲ ಕಲೆಯು ಕತೆಗಾರಿಕೆ. ಅದು ಯಾವುದೊಂದು ಕಾಲದ ಇಲ್ಲವೆ ಮತದ ಸೊತ್ತಲ್ಲ. ಅಂತೆಯೇ ಯಾವ ಭಾಷೆಯೇ ಆಗಲಿ, ಅದನ್ನಾಡುವ ಜನರ ಬಳಕೆಯಲ್ಲಿ ಸನಾತನವಾಗಿ ಕತೆಯ ರಾಶಿ ರಾಶಿ ಇಲ್ಲದೆ ಇಲ್ಲ. ಅದಕ್ಕೆ ಬರೆಹದ ಚಿರಮುದ್ರೆ ದೊರೆಯದಿದ್ದರೂ ಅದು ಬಾಯಿಂದ ಬಾಯಿಗೆ, ಗಾಳಿಯಲ್ಲಿ ತನ್ನ ತಾನೇ ಬರೆದುಕೊಂಡು, ಬಾಳಿ ಬೆಳಗಿ ಹೋಗುತ್ತದೆ"[೪] ಎಂಬ ರಂ.ಶ್ರೀ. ಮುಗಳಿಯವರ ಮಾತು ಕಥೆಯ ಸೃಷ್ಟಿಗೆ ಸಮಾಜ ಎಷ್ಟರಮಟ್ಟಿಗೆ ಪ್ರೇರಕ, ಪೋಷಕವಾಗಿದೆ ಎಂಬುದನ್ನು ತಿಳಿಸುತ್ತದೆ. ಪಂಜೆ, ಕೊರೂರು, ಎಂ.ಎನ್. ಕಾಮತ್ ಹಾಗೂ ಮಾಸ್ತಿಯವರ ಕಥೆಗಳ ಮೇಲೆ ಈ ವ್ಯಷ್ಟಿ-ಸಮಷ್ಟಿ ಕೇಂದ್ರಿತ ನೆಲೆಯು ಹೇಗೆ ಪ್ರಭಾವ ಬೀರಿದೆ ಎನ್ನುವುದನ್ನು ನೋಡಬಹುದು. ಕಾಮತ್‌ರವರ 'ಕದ್ದವರು ಯಾರು' ಕಥೆಯಲ್ಲಿ ಒಂದು ಹೆಣ್ಣಿನ ನೋವಿನ ಕಥೆಯೊಂದಿಗೆ ಪ್ರಾರಂಭಗೊಂಡು, ಅದು ಇಡೀ ಸಮಾಜದ ಸಮಗ್ರ ಜೀವನದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಮಂತ್ರವಾದಿಯ ಕರಾಮತ್ತು, ಹಳ್ಳಿಗರ ಮೂಢನಂಬಿಕೆ, ಪಟೇಲರ ನಿರಕ್ಷರತೆ, ಅಜ್ಞಾನ, ಭೂತ-ಪ್ರೇತಗಳ ಮೇಲಿನ ಗ್ರಾಮ್ಯ ನಂಬಿಕೆ, ಕಲೆಕ್ಟರನ ನ್ಯಾಯಪರತೆ ಹೀಗೆ ವ್ಯಷ್ಟಿಯಿಂದ ಸಮಷ್ಟಿಯ ಕಡೆಗೆ ಕಥೆ ಸಾಗುತ್ತದೆ. ಪ್ರಗತಿಶೀಲ ಕಥೆಗಾರರ ಕಥೆಗಳಲ್ಲಿ ವ್ಯಷ್ಟಿ-ಸಮಷ್ಟಿಗಳ ನೆಲೆ ಅಷ್ಟಾಗಿ ಕಂಡುಬರುವುದಿಲ್ಲ. ಅದೇ ನವ್ಯಕಥೆಗಾರರಲ್ಲಿ ಸಮಷ್ಟಿ ನೆಲೆಗಿಂತ ವ್ಯಷ್ಟಿನೆಲೆಯು ಹೆಚ್ಚಾಗಿ ಕಂಡುಬರುತ್ತದೆ. ರಾಷ್ಟ್ರೀಯತೆ ಹಾಗೂ ಪಾಶ್ಚಿಮಾತ್ಯ ಸಂಸ್ಕೃತಿಗಳ ಆಮದೀಕರಣಗಳ ಸಂಸ್ಕೃತಿ-ಪ್ರತಿಸಂಸ್ಕೃತಿಗಳ ವಾದದ ಪ್ರಕ್ರಿಯೆ ನಡೆದಿದೆ. ನವ್ಯ ಬರಹಗಾರರ ಎಲ್ಲಾ ಕಥೆಗಳು ವ್ಯಷ್ಟಿ ಕೇಂದ್ರಿತ ನೆಲೆಯಲ್ಲಿ ನೆಲೆಗೊಂಡಿವೆ. ದೇಸಾಯಿ, ಲಂಕೇಶ್, ರಾಮಚಂದ್ರಶರ್ಮ, ಚಿತ್ತಾಲ ಮುಂತಾದವರ ಕಥೆಗಳನ್ನು ಇದಕ್ಕೆ ಉದಾಹರಿಸಬಹುದು. ದಲಿತ ಬಂಡಾಯದ ಸಂದರ್ಭದ ಕಥೆಗಾರರ ಕಥೆಗಳಲ್ಲಿ ವ್ಯಕ್ತಿ-ಸಂಸ್ಕೃತಿಯ ಸಂವಾದಕ್ಕಿಂತ ಹೆಚ್ಚಾಗಿ ಸಮಾಜ-ಸಮಾಜಗಳ ನಡುವೆ ಇರುವಂತಹ ವೈರುಧ್ಯದ ಚಿತ್ರಣಗಳನ್ನು ತಮ್ಮ ಕಥೆಗಳಲ್ಲಿ ಹೆಚ್ಚಾಗಿ ಚಿತ್ರಿಸಿದರು. ದೇವನೂರು ಮಹಾದೇವ, ಚೆನ್ನಣ್ಣವಾಲೀಕರ, ಬರಗೂರು ರಾಮಚಂದ್ರಪ್ಪ ಮುಂತಾದವರ ಕಥೆಗಳನ್ನು ಹೆಸರಿಸಬಹುದು.

- **ಭಾಷಿಕ ನೆಲೆ**

ಕನ್ನಡ ಕಥಾಸಾಹಿತ್ಯದಲ್ಲಿ ಭಾಷಿಕ ನೆಲೆಯನ್ನು ಎರಡು ಬಗೆಯಲ್ಲಿ ಗುರುತಿಸಬಹುದು. ಒಂದು ಗ್ರಾಂಥಿಕ ಭಾಷೆ. ಎರಡು ಗ್ರಾಮ್ಯಭಾಷೆ. ಈ ಎರಡೂ ಬಗೆಯ ಭಾಷೆಯನ್ನು ಬಳಸಿಕೊಂಡು ನಮ್ಮ ಕಥಾಸಾಹಿತ್ಯವು ಸಂಪದ್ಭರಿತವಾಗಿ ಬೆಳೆದು ಬಂದಿದೆ. ಗ್ರಂಥದ ಭಾಷೆಯನ್ನು ನವೋದಯ, ಪ್ರಗತಿಶೀಲ, ನವ್ಯ ಕಥೆಗಾರರ ಕಥೆಗಳಲ್ಲಿ ಕಾಣಲು ಸಾಧ್ಯ. ಅದೇ ರೀತಿಯಾಗಿ ಗ್ರಾಮ್ಯ ಭಾಷೆಯನ್ನು ಜನಪದರ ಕಥೆಗಳಲ್ಲಿ ಕಾಣುವಂತೆ ದಲಿತ ಬಂಡಾಯ ಕಥೆಗಾರರ ಕಥೆಗಳಲ್ಲಿ ಗುರುತಿಸಲು ಸಾಧ್ಯ. ಆರಂಭದ

ಕಥೆಗಾರರು ಗ್ರಾಂಥಿಕ ಭಾಷೆಯ ಬಳಕೆಯ ಸಂದರ್ಭದಲ್ಲಿ ಸಂಸ್ಕೃತದ ಮೊರೆ ಹೋಗಿರುವುದು ಗಮನಿಸಬಹುದು. ಪಂಜೆಯವರ 'ಕಮಲಾಪುರದ ಹೋಟೇಲಿನಲ್ಲಿ', 'ಭಾರತ ಶ್ರವಣ' ಕಥೆಗಳು ಈ ಅಂಶಗಳನ್ನು ಒಳಗೊಂಡಿದೆ. ಎಂ.ಎನ್. ಕಾಮತರು ಸಮಾಜದ ವ್ಯಂಗ್ಯವನ್ನು ತೋರಿಸುವುದಕ್ಕಾಗಿ ಕಥೆಗಳ ಮಾಧ್ಯಮವನ್ನು ಬಳಸಿದ್ದಂತೆ ಕಂಡು ಬರುತ್ತದೆ. 'ಭಾರತ ಪ್ರಯೋಗ' ಕಥೆ ಸಂಸ್ಕೃತ ಸಾಹಿತ್ಯದ ವಸ್ತುವನ್ನೇ ಒಳಗೊಂಡಿರುವುದು ಒಂದು ವಿಶೇಷ.

ದಲಿತ ಬಂಡಾಯದ ಲೇಖಕರ ಕಥೆಗಳಲ್ಲಿ ಗ್ರಾಮ್ಯಭಾಷೆಯನ್ನು ಕಾಣಬಹುದು. ದಲಿತ ಸಮುದಾಯದ ಬಗ್ಗೆ ಬರೆಯುವಾಗ ಈ ಕಥೆಗಾರರು ಸಮುದಾಯದ ಬದುಕಿನ ವಿವರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ, ಆ ವಿವರಣೆಗಳನ್ನು ಆಯಾ ಸಮುದಾಯದ ಭಾಷೆಯಲ್ಲಿಯೇ ವ್ಯಕ್ತಪಡಿಸಿದ್ದಾರೆ ತಮ್ಮ ಕಥೆಗಳಲ್ಲಿ. ದೇವನೂರ ಮಹಾದೇವ ಅವರ 'ಡಾಂಬರು ಬಂದುದು', 'ಮೊಗಳ್ಳಿ ಗಣೇಶ ಅವರ 'ಅವ್ವ', ಬೆಸಗರಹಳ್ಳಿ ರಾಮಣ್ಣನವರ - 'ಸುಗ್ಗಿ', ಅಮರೇಶ ನುಗಡೋಣಿಯವರ - 'ಕಾಗೀಕೂಟ', ಕುಂ. ವೀರಭದ್ರಪ್ಪನವರ - 'ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ' ಮೊದಲಾದ ಕಥೆಗಾರರು ತಮ್ಮ ಕಥೆಗಳು ಗ್ರಾಮ್ಯಭಾಷೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಲೇಖಕರು ತಮ್ಮ ವಿಚಾರಗಳನ್ನು ಭಾಷೆಯಲ್ಲಿ ಹಿಡಿದಿಟ್ಟುಕೊಂಡು ಕಥನದಲ್ಲಿ ಅದನ್ನು ಸಮರ್ಪಕವಾಗಿ ಮುನ್ನಡೆಸಿಕೊಂಡು ಬಂದಿದ್ದಾರೆಂಬುದು ಗಮನಿಸತಕ್ಕ ಸಂಗತಿ.

- **ವೈಚಾರಿಕ ನೆಲೆ**

ಕನ್ನಡ ಕಥೆಗಳಲ್ಲಿ ವೈಚಾರಿಕ ಪ್ರಜ್ಞೆಯನ್ನು ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಕಥಾ ವಸ್ತುವಿನ ನಿರೂಪಣಾ ತಂತ್ರದಲ್ಲಿ ಬಳಸಿಕೊಳ್ಳುವಂತಹ ವಿಚಾರಗಳು ಆಯಾ ಕಥೆಗಳ ಪಾತ್ರಗಳ ಮೂಲಕ ವ್ಯಕ್ತಪಡಿಸಲಾಗುತ್ತದೆ. ಸಾಂಪ್ರದಾಯಿಕ ಜಗತ್ತಿನಿಂದ ಹೊರಬಂದು ಮಾಢನಂಬಿಕೆಗಳನ್ನು ವಿವರವಾಗಿ ವಿಶ್ಲೇಷಿಸುವಂತೆ ಘಟನೆಗಳನ್ನು ಸೃಷ್ಟಿಸಿ ಆ ನಂಬಿಕೆಯೂ ತಪ್ಪು ಇಲ್ಲವೆ ಸರಿ ಎನ್ನುವುದನ್ನು ವೈಚಾರಿಕ ನೆಲೆಯೊಳಗೆ ಬಿಂಬಿಸುವುದಾಗಿದೆ. ಆ ಮೂಲಕ ಓದುಗರನ್ನು ಹೊಸ ಬಗೆಯ ಚಿಂತನೆಯ ಕಡೆಗೆ ಕರೆದುಕೊಂಡು ಹೋಗುವ ಆಶಯ ಲೇಖಕನದ್ದಾಗಿರುತ್ತದೆ. ಇಂಥಹ ಪರಿವರ್ತನೆಯ ಅಥವಾ ವೈಚಾರಿಕತೆಯ ಅಂಶವೂ ಕನ್ನಡ ಕಥನದಲ್ಲಿ ಸಾಕಷ್ಟು ಬಳಕೆಗೊಂಡಿದೆ.

ಪಂಜೆ ಮಂಗೇಶರಾಯರ ಕಥೆಗಳಲ್ಲಿ ಈ ವೈಚಾರಿಕ ಅಂಶ ಸ್ಪಷ್ಟವಾಗಿ ಕಾಣಲು ಸಿಗದಿದ್ದರೂ ಕೂಡ ಅವರ ಕಥೆಗಳಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಈ ವೈಚಾರಿಕತೆಯ ಅಂಶ ಇಣುಕು ಹಾಕುತ್ತದೆ. 'ಕಮಲಾಪುರದ ಹೋಟೇಲಿನಲ್ಲಿ' ಕಥೆಯನ್ನು ಓದುವಾಗ ಈ ಅಂಶ ಅಲ್ಲಲ್ಲಿ ಕಂಡು ಬರುತ್ತದೆ. ನವೋದಯ, ಪ್ರಗತಿಶೀಲ, ನವ್ಯ-ದಲಿತ ಬಂಡಾಯದ ಕಥೆಗಾರರಲ್ಲಿ ಈ ವೈಚಾರಿಕ ಅಂಶ ಸ್ಪಷ್ಟವಾಗಿ ಕಾಣಲು ಸಿಗುತ್ತದೆ. ಅನಂತಮೂರ್ತಿಯವರು ತಮ್ಮ "ಪ್ರಶ್ನೆ" ಸಂಕಲನದ ಕಥೆಗಳ ಮೂಲಕ ಕನ್ನಡ ಸಣ್ಣ ಕಥೆಯ ವೈಚಾರಿಕ ಮತ್ತು ಕಲಾತ್ಮಕ ಸ್ವರೂಪವನ್ನೇ ಬದಲಾಯಿಸಿದರೆಂಬುದು ಈಗ ಎಲ್ಲರಿಗೂ

ತಿಳಿದ ಸಂಗತಿ. ಅವರು ನವ್ಯ ಕಥೆಗೆ ವೈಚಾರಿಕತೆಯನ್ನು ರೂಪಿಸಿಕೊಟ್ಟು, ಆ ವೈಚಾರಿಕತೆಯ ಅಭಿವ್ಯಕ್ತಿಗೆ ಬೇಕಾದಂತಹ ತಾಂತ್ರಿಕ ಸಾಧ್ಯತೆಗಳನ್ನು ಸಹ ತೋರಿಸಿಕೊಟ್ಟರು. ಇವರ ಕಥೆಗಳ ನಾಯಕ ದುರ್ಬಲ, ಅಂತರ್ಮುಖಿ, ಸುಶಿಕ್ಷಿತ, ಸಂವೇದನಾಶೀಲ ತರುಣ. ವೈಯಕ್ತಿಕ ನಂಬಿಕೆಗಳಿಗೂ ಪರಿಸರದ ಒತ್ತಾಯದಿಂದ ಹೇಳಿರುವ ಸಾಂಪ್ರದಾಯಿಕ ಬದುಕಿಗೂ ಇರುವ ಕಂದರವೇ ಇವರ ಕಥೆಗಳ ಮುಖ್ಯವಸ್ತು. ತನ್ನ ನಂಬಿಕೆಗಳನ್ನು ಬದುಕಲಾಗದ ದೌರ್ಬಲ್ಯವೇ ದುರಂತ. ಈ ದೃಷ್ಟಿಯಿಂದ 'ಪ್ರಶ್ನೆ', 'ಘೋಜರಾಜ', 'ಕಾರ್ತೀಕ', 'ಕ್ಲಿಪ್ ಜಾಯಿಂಟ್', ಇಂಥಹ ಕಥೆಗಳು ಪ್ರಮುಖವಾಗಿವೆ. ಶ್ರೀನಿವಾಸರಂಥವರ ಕತೆಗಳಲ್ಲಿ ಬಾಳಿನ ಅವ್ಯಕ್ತ ತಿಳುವಳಿಕೆಯೇ ವೈಚಾರಿಕತೆಯಾದರೆ, ಅನಂತಮೂರ್ತಿಯವರ ಕತೆಗಳಲ್ಲಿ ಬದುಕು ವೈಚಾರಿಕತೆಯನ್ನು ಪರೀಕ್ಷೆಗೆ ಒಳಪಡಿಸುವ ಒರೆಗಲ್ಲಾಗುತ್ತದೆ. ವೈಚಾರಿಕತೆ ಎನ್ನುವುದು ಒಂದು ಪೂರ್ವನಿಶ್ಚಿತವಾದ ಸಿದ್ಧಾಂತವಾಗದೆ ಅಂಥ ಸಿದ್ಧಾಂತಗಳನ್ನು ಒಳಗೊಂಡು ಎಲ್ಲವನ್ನೂ ಪರೀಕ್ಷಿಸಿ ನೋಡುವ, ಪ್ರಶ್ನಿಸುವ, ಸಂದೇಹಿಸುವ, ಒಪ್ಪುವ ಕ್ರಮ ಮುಖ್ಯವಾಗುತ್ತದೆ. ಬಸವರಾಜ ಕಟ್ಟೀಮನಿಯವರ 'ಬೂಟ್‌ಪಾಲೀಶ್', ಲಂಕೇಶ್ ಅವರ 'ನಿವೃತ್ತರು' ಮುಂತಾದ ಕಥೆಗಳನ್ನಿಲ್ಲಿ ಹೆಸರಿಸಬಹುದು.

ಟಿಪ್ಪಣಿಗಳು

೧. Bal, Mieke, **Narratology,** Page No. 5.

೨. ಎ.ಆರ್. ಕೃಷ್ಣಶಾಸ್ತ್ರೀ, **ಕಥಾಮೃತ,** ಪು. XLIX.

೩. ಡಾ. ಎಂ.ಜಿ. ಬಿರಾದರ್ ಮತ್ತು ಇತರರು, **ಜನಪದ ನೂರೆಂಟು ಕಥೆಗಳು,** ಪು. ೧೮.

೪. ಜಿ.ಬಿ. ಜೋಶಿ, ಕೆ.ಡಿ. ಕುರ್ತಕೋಟಿ, **ಪುಟ ಬಂಗಾರ-೪,** ಪು ೬೬೫.

• • •

ಅಧ್ಯಾಯ ೪

ಕೊಡಗಿನ ಗೌರಮ್ಮನ ಕಥೆಗಳು ಮತ್ತು ಕಥನ ಕಲೆಯ ವಿನ್ಯಾಸ

ಅಧ್ಯಾಯ ೪

ಕೊಡಗಿನ ಗೌರಮ್ಮನ ಕಥೆಗಳು ಮತ್ತು ಕಥನ ಕಲೆಯ ವಿನ್ಯಾಸ

ಈ ಭಾಗದಲ್ಲಿ ಗೌರಮ್ಮನವರ ಕಥೆಗಳನ್ನು ಹಾಗೂ ಆ ಕಥೆಗಳಲ್ಲಿ ವ್ಯಕ್ತವಾಗಿರುವಂತಹ ವಿನ್ಯಾಸ, ಕಥನ ಕಲೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ. 'ಕೆಲವು ಕಾಗದಗಳು', 'ಪ್ರಾಯಶ್ಚಿತ್ತ', 'ಹೋಗಿಯೇ ಬಿಟ್ಟಿದ್ದ' ಮುಂತಾದ ಕಥೆಗಳಲ್ಲಿ ಸ್ತ್ರೀ-ಪುರುಷರ ಸಂಬಂಧಗಳ ಹಲವು ಮಗ್ಗಲುಗಳನ್ನು ಪರಿಶೀಲಿಸುತ್ತಾ, ಅದರಲ್ಲಿ ಉದ್ಭವಿಸಿರುವ, ಸಾಮಾಜಿಕ ಆಯಾಮ ಪಡೆದ ಸಮಸ್ಯೆಯ ವಿವೇಚನೆಗೆ ಯತ್ನಿಸಿರುವರು.

ಸಾಮಾಜಿಕ ವಿನ್ಯಾಸ

ಆರಂಭ ಕಾಲದ ಲೇಖಕಿಯರಲ್ಲಿ ಕೌಟುಂಬಿಕ ಪರಿಸರದಲ್ಲಿನ ಗಂಡ-ಅತ್ತೆ ಮಾವಂದಿರು, ಮಕ್ಕಳು-ಪ್ರೀತಿ-ಪ್ರೇಮ, ಆದರ್ಶ, ಹುಟ್ಟು, ಸಾವು, ತ್ಯಾಗ, ಸಹನೆ, ಶೀಲಗಳಷ್ಟೇ ಕಥೆಗಳಿಗೆ ವಸ್ತುಗಳಾಗಿ ಕಂಡು ಬರುತ್ತವೆ. ಅವುಗಳನ್ನು ಎತ್ತಿಕೊಂಡು ಬರೆಯುವಾಗ ತಮ್ಮಷ್ಟಕ್ಕೆ ತಾವೇ ಒಪ್ಪಿಕೊಂಡು, ಬೆಳೆಸಿಕೊಂಡು ಬಂದ ದೈವೀಕತೆ, ಮಡಿವಂತಿಕೆ ಅವರ ಬರಹದಲ್ಲಿ ಎದ್ದು ಕಾಣುತ್ತಿದ್ದವು. ಸ್ವಾತಂತ್ರ್ಯನಂತರ ಕ್ರಮೇಣ ನಮ್ಮ ಲೇಖಕಿಯರ ಸಂಖ್ಯೆ ಗಣನೀಯವಾಗಿ ಬೆಳೆಯಿತು. ಬೇರೆ ಬೇರೆ ಕ್ಷೇತ್ರದಲ್ಲಿ ದುಡಿಮೆಯನ್ನು ಆರಂಭಿಸಿದ ಅವರು ಅಲ್ಪಮಟ್ಟಿಗೆ ಸಾಮಾಜಿಕ ಚಿಂತನಶೀಲತೆಯನ್ನು ಬೆಳೆಸಿಕೊಂಡರು. ಅದರಲ್ಲೂ ಮುಖ್ಯವಾಗಿ ಸಮಾಜದ ಒಪ್ಪಿತ ಮೌಲ್ಯಗಳನ್ನು ಗಟ್ಟಿಯಾದ ಧ್ವನಿಯಲ್ಲಿ ಪ್ರಶ್ನಿಸುವ ಎದೆಗಾರಿಕೆಯನ್ನು ಬೆಳೆಯಿಸಿಕೊಂಡರು. ವರ್ಗದ ಹಿನ್ನೆಲೆಯಲ್ಲಿ ನಮ್ಮ ಲೇಖಕಿಯರನ್ನು ಗಮನಿಸಿದಾಗ ಹೆಚ್ಚಾಗಿ ಎಲ್ಲರೂ ಮಧ್ಯಮ ಮತ್ತು ಮೇಲ್‌ಮಧ್ಯಮ ವರ್ಗದಿಂದ ಬಂದವರು. ಅವರು ಸಾಹಿತ್ಯಿಕ ವಸ್ತುವಿನ ಆಯ್ಕೆಯಲ್ಲಿ ಅಷ್ಟೊಂದು ವೈಚಾರಿಕತೆಯನ್ನು ಬೆಳೆಸಿಕೊಂಡಿಲ್ಲ. ಮಧ್ಯಮವರ್ಗದ ಭಾವನಾತ್ಮಕ ಮತ್ತು ಭ್ರಮಾತ್ಮಕ ಲೋಕವೇ ಇವರ ಕಣ್ಣಿಗೆ ಬಹಳಷ್ಟು ಅಭೂತಪೂರ್ವವಾಗಿ ಕಂಡಿದೆ. ಜೊತೆಗೆ ಇಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ತಮ್ಮ ಅನುಭವಗಳ ದಟ್ಟ ಸಾಂದ್ರತೆಯ ಹಿನ್ನೆಲೆಯಲ್ಲಿ ಅವರ ಸಾಹಿತ್ಯಿಕ ಶಕ್ತಿ ಪ್ರಕಟವಾಗುತ್ತದೆ. ಈ ವರ್ಗದ ಮಹಿಳೆಯರು ಓದು ಬರಹ ಕಲಿತವರು. ಸಾಮಾಜಿಕ ಸಮಸ್ಯೆಗಳಾದ ವರದಕ್ಷಿಣೆ, ಅದರ ಅನಾಹುತಗಳನ್ನು ಕುರಿತು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ತ್ರಿವೇಣಿಯಂಥ ಒಂದಿಬ್ಬರು

ಮಾತ್ರ ಮಾನಸಿಕ ಲೋಕದ ಅದ್ಭುತ ವ್ಯಾಪಾರಗಳನ್ನು ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡದ್ದು ಸಾಹಿತ್ಯಲೋಕಕ್ಕೆ ಹೊಸ ವಸ್ತುವೊಂದನ್ನು ಪರಿಚಯಿಸಿಕೊಟ್ಟಿರುವರು. ಅದೇ ರೀತಿಯಾಗಿ ಮಡಿವಂತಿಕೆಯ ಬೇಲಿಯನ್ನು ದಾಟಿಬಂದು, ಮಹಿಳೆಯ ಶೋಷಣೆಯ ಹಲವು ಮುಖಗಳ ಚಿತ್ರಣವನ್ನು ತೋರಿಸಿದ್ದಾರೆ. ವಸ್ತುವಿನ ದೃಷ್ಟಿಯಿಂದ ಒಟ್ಟಾಗಿ ನೋಡಿದರೆ, ಪ್ರೀತಿ, ಪ್ರೇಮ, ತ್ಯಾಗ, ಸಹನೆ, ಹೆಣ್ತನದ ಕೋಮಲತೆ, ಹಲವು ವಿಧದ ಕೌಟುಂಬಿಕ ಸಂಬಂಧಗಳು, ದಾಂಪತ್ಯ ಸಮಸ್ಯೆ, ಮದುವೆ ನಂತರದ ಪ್ರೇಮ, ಇವು ಒಂದು ಕಡೆಯಾದರೆ, ಸಾಮಾಜಿಕ ಸಮಸ್ಯೆಗಳಾದ ಜಾತಿ, ಅಂತರ್‌ಜಾತಿ ಮದುವೆ, ಅದರಿಂದುಂಟಾಗುವ ಸಮಸ್ಯೆ, ವರದಕ್ಷಿಣೆ, ಸಮಯ ಸಾಧಕತನ, ವೈಧವ್ಯ, ಬಾಲ್ಯ ವಿವಾಹ ಮುಂತಾದವುಗಳು ತಮ್ಮ ಕಥೆಯಲ್ಲಿ ವಸ್ತುವಾಗಿಸಿಕೊಂಡು ಬರೆದಿರುವರು.

ಆರಂಭದ ಕಥೆಗಾರ್ತಿ ಎನಿಸಿದರೂ ಕನ್ನಡ ಕಥಾಸಾಹಿತ್ಯದಲ್ಲಿ ಮೊಟ್ಟಮೊದಲಿಗೆ ದಿಟ್ಟ ಹೆಜ್ಜೆಯನ್ನಿಟ್ಟ ಕೊಡಗಿನ ಗೌರಮ್ಮನವರ ಕಥೆಗಳ ಕಥಾವಸ್ತು ಇಂದಿಗೂ ಪ್ರಸ್ತುತವೆನಿಸುತ್ತದೆ. ಮೇಲ್‌ಮಧ್ಯಮ ವರ್ಗದಲ್ಲಿ ಸುಸಂಸ್ಕೃತ ಪರಿಸರದಲ್ಲಿ ಬದುಕಿದ ಗೌರಮ್ಮನವರು ಸಾಂಪ್ರದಾಯಿಕ ರೀತಿಯಲ್ಲಿ ಬರೆದರೂ ಸಾಂಪ್ರದಾಯಿಕ ಮಹಿಳೆಯರಿಗಿಂತಲೂ ಭಿನ್ನವಾಗಿ ಸಾಹಿತ್ಯಿಕ, ಸಾಮಾಜಿಕ ಕಳಕಳಿಯನ್ನು ತೋರಿದ ಕೊಡಗಿನ ಗೌರಮ್ಮನವರಲ್ಲಿಯೆ ಮಹಿಳೆಯರ ಸಾಧನೆಯ ಬೀಜರೂಪ ಕಾಣಬಹುದು. ಬಾಲ್ಯವಿವಾಹ, ವಿಧವಾ ಸಮಸ್ಯೆ, ವರದಕ್ಷಿಣೆಯ ಸಮಸ್ಯೆಯನ್ನು ಎತ್ತಿಕೊಂಡು ಬರೆದ ಕೊಡಗಿನ ಗೌರಮ್ಮನವರ ಕಥೆಗಳು ವಿಧವೆಯ ಬಗ್ಗೆ ಸಾಮೂಹಿಕ ಚಿಂತನೆಗೆ ತೊಡಗಿಸುವುದರ ಜೊತೆಗೆ, ಬಾಲ್ಯವಿವಾಹ, ವರದಕ್ಷಿಣೆ, ಇವುಗಳನ್ನು ಕುರಿತು ಮಹಿಳೆಯರು ತಣ್ಣನೆಯ ಮನಸ್ಸಿನಲ್ಲಿಯೂ ಪ್ರತಿಭಟಿಸುವ ಕಿಡಿಯನ್ನು ಬೆಳೆಯಿಸಿಕೊಳ್ಳಲು ಪ್ರೋತ್ಸಾಹಿಸಿದವು. ಹೀಗೆ, ಮಹಿಳೆಯ ದಾರುಣ ಸ್ಥಿತಿಗತಿಗಳು ಬದಲಾಗಬೇಕು ಎನ್ನುವ ತುಡಿತದಿಂದಾಗಿ ಸಾಮಾಜಿಕ ಸಮಸ್ಯೆಗಳ ಕಡೆಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು.

ಗೌರಮ್ಮನವರ 'ವಾಣಿಯ ಸಮಸ್ಯೆ' ಕಥೆಯಲ್ಲಿ ತನ್ನ ಸ್ನೇಹಿತೆಯ ಗಂಡನಲ್ಲಿ ಆಕರ್ಷಿತಳಾ ಗುತ್ತಿರುವ ತನ್ನ ಸ್ಥಿತಿಯ ಅರಿವಿನಿಂದ ಅನುಭವಿಸುವ ಮಾನಸಿಕ ಒಳತೋಟಿಯನ್ನು ಸೂಕ್ಷ್ಮವಾಗಿ ಚಿತ್ರಿಸುವಂತಹ ಕಥೆ. 'ವಾಣಿಯ ಸಮಸ್ಯೆ' ಕಥೆಯಲ್ಲಿ ಲಿಂಗ, ವರ್ಗ, ವರ್ಣ ಅಸಮಾನತೆಗಳಾಗಲಿ, ವರದಕ್ಷಿಣೆ, ವೇಶ್ಯಾ, ವಿಧವಾ ಸಮಸ್ಯೆಗಳಾಗಲಿ ಮುಖ್ಯವಾಗದೆ ಅಲ್ಲಿ ಗಂಡು-ಹೆಣ್ಣಿನ ಪರಸ್ಪರ ಆಕರ್ಷಣೆಯ ತೀವ್ರತೆಯೇ ಮುಖ್ಯ ಅಂಶವಾಗಿದೆ. ಕಾಮ-ಪ್ರೇಮಗಳ ಸೆಳೆತವೇ ಮುಖ್ಯವಾಗುತ್ತದೆ. ಮಾನವ ಸಹಜವಾದ ಕಾಮದಂತಹ ವಿಷಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲೆಲ್ಲಾ ಗೌರಮ್ಮನವರು ಮಡಿವಂತಿಕೆಯನ್ನು ತೋರಿದ್ದಾರೆ. ಬಹುಶಃ ಇದಕ್ಕೆ ಅವರು ಬೆಳೆದು ಬಂದಿರುವ ಪರಿಸರ ಕಾರಣವಿರ ಬಹುದು. ಈ ಕಥೆಯಲ್ಲಿ ಆಕರ್ಷಣೆಯ ಸಭ್ಯತೆಯ ಚೌಕಟ್ಟನ್ನು ಸ್ವಲ್ಪವೂ ಮೀರದೆ ತೋರಿಸಿರುವ ರೀತಿ ಗೌರಮ್ಮನವರ ಕಥನ ಕಲೆಯ ಬಗ್ಗೆ ಮೆಚ್ಚುಗೆಯನ್ನು ಮೂಡಿಸುತ್ತದೆ. ಈ ಕಥೆಯ ಹಂದರ ಚಿಕ್ಕದು. ವಿಧವೆಯಾದ ಇಂದುವಿನ ಬಾಳಿನಲ್ಲಿ ಬಂದು ಹೋಗುವ ಡಾಕ್ಟರ್ ರತ್ನ ಮತ್ತು ಆತನ ಪತ್ನಿ

ವಾಣಿ - ಈ ಮೂರು ಪಾತ್ರಗಳ ಸುತ್ತ ಕಥೆಯನ್ನು ಹೆಣೆಯಲಾಗಿದೆ. ದಾಂಪತ್ಯ ಸುಖದಿಂದ ವಂಚಿತಳಾದ, ಆದರೆ ಸಂಪ್ರದಾಯದ ಕಟ್ಟನ್ನು ಮೀರದೆ ಬದುಕು ಸಾಗಿಸುತ್ತಿರುವಂತಹ ಇಂದು, ಸುಂದರವಾದ ಪತ್ನಿಯಿದ್ದರೂ, ಅವಳನ್ನು ಪ್ರೀತಿಸುತ್ತಿದ್ದರೂ ಮಾನಸಿಕವಾಗಿ, ಬೌದ್ಧಿಕವಾಗಿ ಆಕೆಯೊಡನೆ ಪ್ರಬುದ್ಧ ಸಂಬಂಧ ಸಾಧಿಸಲಾರದ ಡಾಕ್ಟರ್ ರತ್ನ, ತನ್ನ ಗಂಡನನ್ನು ಪ್ರೀತಿಸಿಯೂ ಅವನ ಆಸೆ-ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ಅರಿಯಲಾರದ ಮುಗ್ಧವಾಣಿ - ಈ ಪಾತ್ರಗಳ ಸುತ್ತ ಹೆಣೆದಿರುವ ಈ ಕಥೆ ಯಾರೊಬ್ಬರನ್ನು ಏಕಮುಖವಾಗಿ ಒಪ್ಪಿಕೊಳ್ಳದೆ ಇಲ್ಲವೆ ನಿರಾಕರಿಸದೆ, ಸಹಾನುಭೂತಿ ಇಲ್ಲವೆ ಅನುಕಂಪದ ನೆಲೆಗಳಿಂದಲೂ ಭಿನ್ನವಾಗಿಸುತ್ತ, ಶುದ್ಧ, ಮಾನವೀಯ ನೆಲೆಯಲ್ಲಿ ತನ್‌ತಾನೇ ಕಥೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ಗಂಡ ಎಂದರೇನು ಎಂದು ತಿಳಿಯುವ ಮೊದಲೇ ಅವನನ್ನು ಕಳೆದುಕೊಂಡ ಇಂದು, ಮುಂದೆ ಗಂಡನಿಟ್ಟಿದ್ದ ಹಣದಿಂದಾಗಿ ಎಲ್ಲರಿಗೂ ಬೇಕಾಗುತ್ತಾಳೆ. ಆದರೆ ಅದರ ನಿಜ ಸ್ವರೂಪವನ್ನು ಅರಿತ ಇಂದು ಸ್ವತಂತ್ರವಾಗಿ ಒಬ್ಬಳೆ ಜೀವನವನ್ನು ಸಾಗಿಸುತ್ತಾಳೆ. ತನ್ನ ಒಂಟಿತನದಲ್ಲೂ ಶಿಸ್ತನ್ನು ರೂಢಿಸಿಕೊಂಡ ಶಾಂತ ಸ್ವಭಾವದವಳು. ಈಕೆಯ ಶಾಂತ ಗಂಭೀರ ಸರಳ ಬದುಕಿನಲ್ಲಿ ನೆರೆಮನೆಗೆ ಬಾಡಿಗೆಗೆ ಬಂದ ನವದಂಪತಿಗಳ ಪ್ರವೇಶವಾಗುತ್ತದೆ. ಇಂದುವಿನ ಶಾಂತ, ಸೌಮ್ಯ, ಗಂಭೀರ ಸ್ವಭಾವ ರತ್ನನ ಮನಸೂರೆ ಗೊಳಿಸುತ್ತವೆ. ವಾಣಿ ತನ್ನ ತವರಿಗೆ ಹೋದಾಗ ಇಂದು, ರತ್ನರಿಗೆ ತಮ್ಮೊಳಗೆ ಬೆಳೆದ ಪ್ರೀತಿಯ ತೀವ್ರತೆಯ ಸಾಕ್ಷಾತ್ಕಾರವಾಗುತ್ತದೆ. ಈ ಅರಿವಿನಿಂದ ಸಂಪ್ರದಾಯಕ್ಕೆ ಅಂಟಿದ ಇಂದುವಿನ ಮನಸ್ಸಿನಲ್ಲಿ ಉಂಟಾಗುವಂತಹ ಮನೋಭಾವನೆಯನ್ನು ಬಹು ಸಂಯಮದಿಂದ ಮನೋಜ್ಞವಾಗಿ ಕಥೆಯಲ್ಲಿ ಹೇಳಲಾಗಿದೆ. ಶಾಂತವಾಗಿರುವ ಬದುಕಿನಲ್ಲಿ ತೀವ್ರ ಕೊರತೆಯ ಅರಿವುಂಟಾಗಿ ಅವಳ ಸುಖ ಸಂತೋಷಗಳು ಮಾಯವಾಗುತ್ತವೆ. ಈ ಕೊರತೆಯ ಅರಿವು ಹಾಗೂ ರತ್ನನ ಕಡೆಗೆ ಉತ್ಕಟವಾಗಿ ಹರಿಯುವ ಮನವನ್ನು ನಿಗ್ರಹಿಸಲಾಗದ ತನ್ನ ಅಶಕ್ತತೆಯ ಅರಿವು ಆಕೆಯನ್ನು ಪಲಾಯನ ಮಾಡುವಂತೆ ಪ್ರಚೋದಿಸುತ್ತವೆ. ಇನ್ನೇನು ತನ್ನ ಹಾಗೂ ರತ್ನನ ಸಂಬಂಧ ಸಂಪ್ರದಾಯದ ಕಟ್ಟನ್ನು ಮೀರಬಹುದು ಎಂಬ ಅರಿವಾದಾಗ ಇಂದು ಯಾವ ನೆಂಟರ ಆಶ್ರಯ ಬಯಸದೆ ಸ್ವತಂತ್ರವಾಗಿ ಬದುಕಲು ಬಯಸಿದ್ದಳೋ ಅದೇ ಬಂಧುಗಳ ಆಶ್ರಯಕ್ಕೆ ಹಿಂದಿರುಗುತ್ತಾಳೆ. ಈ ರೀತಿ ಇಂದು ತನ್ನ ಸಮಸ್ಯೆಗೆ ಸಮಾಜದ ಕಟ್ಟುಪಾಡಿಗೆ ಒಳಗಾಗಿ ಸಾಂಪ್ರದಾಯಿಕ ಪರಿಹಾರವನ್ನು ಕಂಡುಕೊಳ್ಳುತ್ತಾಳೆ. ಸ್ತ್ರೀಯರು ಸಮಾಜದ ನಿಯಮಗಳಿಗೆ ಕಟಿಬದ್ಧರಾಗಿಯೇ ತಮ್ಮ ಜೀವನವನ್ನು ಸಾಗಿಸಬೇಕಿತ್ತು. ಅವರಿಗೆ ತಮ್ಮದೇ ಆದ ರೀತಿಯಲ್ಲಿ ಬದುಕುವ ಸ್ವಾತಂತ್ರ್ಯವು ಇರಲಿಲ್ಲ. ಒಂದು ವೇಳೆ ಹಾಗೇನಾದರೂ ಮಾಡಿದ್ದೇ ಆದರೆ ಸಮಾಜದ ಕೆಂಗಣ್ಣಿಗೆ ಗುರಿಯಾಗುವ ಪರಿಸ್ಥಿತಿ ಉಂಟಾಗುತ್ತಿತ್ತು. ಗೌರಮ್ಮನವರು ಸಾಮಾಜಿಕ ದುರಂತಗಳನ್ನು ಕುರಿತು ಚಿತ್ರಿಸುವಾಗಲು ಯಾವುದೆ ರೀತಿಯ ಆವೇಶ, ಆಕ್ರೋಶಕ್ಕೆ ಒಳಗಾಗದೆ, ಒರಟು ಭಾಷೆ ಬಳಸದೆ, ಘೋಷಣೆಯ ಗೀಳಿಗೆ ಒಳಪಡದೆ, ನೇರವಾಗಿ, ಸಹಜವಾದ, ನವಿರಾದ ಭಾಷೆಯಲ್ಲಿ ಹಿಡಿದಿಟ್ಟಿರುವುದು ಕಥೆಗಳ ಮುಖ್ಯ ಲಕ್ಷಣವಾಗಿದೆ. 'ಪುನರ್‌ವಿವಾಹ' ಕಥೆಯ ಬಾಲವಿಧವೆ ರಾಜಿ 'ಆಹುತಿ' ಕಥೆಯ ಶಾಂತಿ, 'ಮರದ ಬೊಂಬೆ'ಯ ಸೀತೆ, 'ಪಾಪನಮದುವೆ'ಯ ಸೀತಾಲಕ್ಷ್ಮಿ. ಈ ಎಲ್ಲಾ ಕಥೆಯ ಪಾತ್ರಗಳು

ತಮ್ಮ ಮುಗ್ಧತೆ, ಗಾಂಭೀರ್ಯ, ತಿಳುವಳಿಕೆಯಿಂದ ಹಾಗೂ ಸಂಸ್ಕೃತಿಯಿಂದ ಗಮನವನ್ನು ಸೆಳೆಯುವಂತಹ ಪಾತ್ರಗಳಾಗಿವೆ. ಅದೇ ರೀತಿ ಪಾಪ, ಕಾಡ, ಕೃಷ್ಣಮೂರ್ತಿ ಮೊದಲಾದ ಪುರುಷ ಪಾತ್ರಗಳೂ ಕೂಡ. ತಂತ್ರದ ದೃಷ್ಟಿಯಿಂದ ಗಮನಿಸಿದಾಗ 'ಕೆಲವು ಕಾಗದಗಳು' ಕಥೆ ವಿಶಿಷ್ಟವಾಗಿದೆ. ಹತ್ತೊಂಬತ್ತು ಕಾಗದಗಳಲ್ಲಿ ಬಿಚ್ಚಿಕೊಂಡಿರುವ, ಕಾಗದಗಳಿಂದಲೇ ಪ್ರಾರಂಭ ಮತ್ತು ಮುಕ್ತಾಯ ಕಾಣುವ ಈ ಕಥೆಯಲ್ಲಿ ಮುಖ್ಯವಾಗಿ ಪತ್ರ ರೂಪದಲ್ಲಿ ವಿಷಯದ ಪದರುಗಳು ತೆರೆದುಕೊಳ್ಳುತ್ತವೆ. ಇದು ಆ ಕಾಲಕ್ಕೆ ಒಂದು ಹೊಸ ತಂತ್ರವಾಗಿದೆ. ಆ ಕಾರಣದಿಂದ ಅದನ್ನು ಕುರಿತು ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಕೊಂಡಾಡಿ ರುವುದು ಸಹಜವಾಗಿದೆ.

ಈ ಕಥೆ ಕೆಲವು ಕಾಗದ ಪತ್ರಗಳು ಮಾತ್ರವೇ ಆದರೂ ಲೇಖಕಿಯ ಜಾಣ್ಮೆಯಿಂದಾಗಿ ಒಂದು ಕತೆಯಾಗಿ ಮೂಡಿಬಂದಿದೆ. ಒಂದು ಹೆಣ್ಣು ಒಂದು ಗಂಡಿನ ನಡುವೆ ಇರುವ ಪವಿತ್ರ ಪ್ರೇಮವನ್ನು ಸಮಾಜ ನೋಡುವ ರೀತಿಯೇ ಬೇರೆ. ಅಂತಹ ಪವಿತ್ರ ಪ್ರೇಮವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸಮಾಜದಲ್ಲಿರುವ ಸಂಬಂಧಗಳಿಂದ ಬಹುದೂರ ನಿಂತು ವಿಶಾಲದೃಷ್ಟಿಯಿಂದ ನೋಡಿದಾಗ ಮಾತ್ರ ಅದನ್ನು ಅರ್ಥೈಸಿಕೊಳ್ಳಲಿಕ್ಕೆ ಸಾಧ್ಯ. ಕಾಯಿಲೆಯಿಂದ ಮಲಗಿದ್ದ ವಸಂತರಾಯರಿಗೆ ನಿಸ್ವಾರ್ಥ ಸೇವೆಯನ್ನು ಮಾಡುತ್ತಿದ್ದ ೧೬ ವರ್ಷದ ಪ್ರಭೆ ಅವರನ್ನು ಪವಿತ್ರಭಾವದಿಂದ ಪ್ರೀತಿಸುತ್ತಿದ್ದಳು. ಇದೇ ಭಾವನೆಯನ್ನು ಅವಳ ಬಗ್ಗೆ ಹೊಂದಿದ ವಸಂತರಾಯರು. ತನ್ನ ಪ್ರೀತಿಯ ತಂಗಿಯಂತೆ ಭಾವಿಸಿ, ಪ್ರಭೆ ಸದಾ ತನ್ನ ಜೊತೆಯಲ್ಲಿರಬೇಕೆಂದು ಬಯಸುತ್ತಿದ್ದರು. ಇವರ ಈ ಪವಿತ್ರ ಪ್ರೇಮವನ್ನು ಸಂದೇಹಿಸುತ್ತಿದ್ದ ಜನರಿಗಾಗಿ ಪ್ರಭೆ ಬೋರ್ಡಿಂಗ್ ಸೇರಿದಳಾದರೂ ಪತ್ರಗಳ ಮೂಲಕ ಅವರಿಬ್ಬರೂ ತಮ್ಮ ಪ್ರೀತಿಯನ್ನು ವ್ಯಕ್ತಪಡಿ ಸುತ್ತಿದ್ದರು. ಆದರೆ ವಸಂತರಾಯರ ಪತ್ನಿ ಸುನೀತ ಪರ-ಪುರುಷನೊಂದಿಗೆ ಈ ರೀತಿ ಪತ್ರ ವ್ಯವಹಾರ ಉಚಿತವಲ್ಲ, ನೀನು ಮಾನಸ್ಥೆಯಾದರೆ ಅವರ ಕಲ್ಯಾಣವನ್ನು ಬಯಸುವುದಾದರೆ ಇನ್ನು ಮುಂದೆ ಪತ್ರಗಳನ್ನು ಬರೆಯಬೇಡ ಎಂದು ಪ್ರಭೆಗೆ ಕಾಗದ ಬರೆದಳು. ಮನಸ್ಸಿನಲ್ಲಿ ಯಾವುದೇ ಕಲ್ಮಶ ಭಾವನೆಯನ್ನು ಹೊಂದಿರದ ಪ್ರಭಾ ಕಾಗದಗಳನ್ನು ಬರೆಯುವುದನ್ನು ನಿಲ್ಲಿಸಿ, ಸುನೀತಗೆ ಕಾಗದ ಬರೆಯದೇ ವಸಂತರಾಯರ ಯೋಗಕ್ಷೇಮವನ್ನು ತಿಳಿದುಕೊಳ್ಳುತ್ತಿದ್ದಳು. ಹೆಂಡತಿಯ ಸಂಶಯ ಗೊತ್ತಿದ್ದ ವಸಂತರಾಯರು ಪ್ರಭೆಯ ಕಾಗದಗಳು ಬಾರದೇ ಇರುವುದಕ್ಕೆ ಚಿಂತೆಗೊಳಗಾಗಿ ತಂದೆಗೆ ಕಾಗದ ಬರೆದು ಪ್ರಭಾಳ ಬಗ್ಗೆ ತಿಳಿದುಕೊಂಡು ಬರುವಂತೆ ಹೇಳಿ ಕಾಗದ ಬರೆದನು. ಕಾಯಿಲೆ ಜಾಸ್ತಿಯಾಗಿ, ನಿತ್ರಾಣದಿಂದ ಆಗಾಗ ಮೂರ್ಛಿತರಾಗುತ್ತಿದ್ದ ವಸಂತರಾಯರು ನಿದ್ರೆಯಲ್ಲಿ ಪ್ರಭಾಳ ಹೆಸರು ಹೇಳುತ್ತಾ ತಿರುಗಾಡುತ್ತಿದ್ದರು. ಈ ಸಮಯದಲ್ಲಿ ಸುನೀತ ಈ ವಿಷಯವನ್ನು ಪ್ರಭಾಳಿಗೆ ಅವಳ ನಿರ್ಭಾಗ್ಯ ಸಹೋದರಿಯಾಗಿ ನಿವೇದಿ ಸುತ್ತಾಳೆ. ಕೊನೆಗೆ ವಸಂತರಾಯರ ಗೆಳೆಯ ಸೀತಾರಾಮದಿಂದ ವಸಂತರಾಯರು ಇಹಲೋಕವನ್ನು ತ್ಯಜಿಸಿದ ವಿಷಯ ತಿಳಿಯುತ್ತದೆ. ಕೊನೆಯ ಬಾರಿ ಪ್ರಭಾಳನ್ನು ನೋಡುವ ವಸಂತರಾಯರ ಆಸೆಯನ್ನು ಸುನೀತಗೆ ಬೇಸರವಾಗುವುದೆಂದೂ ತಿಳಿದು ಅದನ್ನು ಈಡೇರಿಸಲಾಗಲಿಲ್ಲವೆಂದು ತಿಳಿಸಿ ಪ್ರಭಾಳ ವಿದ್ಯಾಭ್ಯಾಸದ ಖರ್ಚೆಲ್ಲವನ್ನು ವಹಿಸಬೇಕೆಂಬ ವಸಂತರಾಯರ ಅಂತಿಮೇಚ್ಛೆಗೆ ಅವರ ತಂದೆಯ ಅನುಮತಿಯೂ ಇದೆ

ಎಂದು ತಿಳಿಸಿದನು. ನಂತರ ಪೇಪರೊಂದರಲ್ಲಿ, ಆರನೇ ತರಗತಿ ವಿದ್ಯಾಭ್ಯಾಸ ಮುಗಿಸಿರುವ ೧೭ ವರ್ಷ ಪ್ರಾಯದ ಅನಾಥ ಹುಡುಗಿ ಪ್ರಭಾಕುಮಾರಿ "ನನ್ನನ್ನು ಹುಡಕಬೇಡಿ, ನನ್ನನ್ನು ನಾನು ರಕ್ಷಿಸಿಕೊಳ್ಳುತ್ತೇನೆ. ನನಗಾಗಿ ಅಳುವವರು ಯಾರೂ ಇಲ್ಲ" ಎಂದು ಮುಖ್ಯ ಉಪಾಧ್ಯಾಯಿನಿಯ ಹೆಸರಿನಲ್ಲಿ ಕಾಗದ ಬರೆದಿಟ್ಟು ಕಾಣೆಯಾಗಿದ್ದಾಳೆ ಎನ್ನುವ ಸುದ್ದಿ ಪ್ರಕಟಗೊಂಡಿತ್ತು. ಕಥೆಯ ಭಾವುಕತೆ ಕಲಾತ್ಮಕತೆಗೆ ಧಕ್ಕೆ ತಂದಂತೆನಿಸುತ್ತದೆ. ಕಥೆಯಲ್ಲಿ ಸುನೀತಳ ಪಾತ್ರ ಸಮಾಜದಲ್ಲಿರುವ ಜನರ ಪ್ರತಿನಿಧಿಯಾಗಿರುವಂತೆ ಚಿತ್ರಿತಗೊಂಡಿದೆ. ಪ್ರಭೆ ಮತ್ತು ವಸಂತರ ಪವಿತ್ರ ಪ್ರೇಮವನ್ನು ಸಮಾಜ ಯಾವ ಬಗೆಯಲ್ಲಿ ಅರ್ಥೈಸಿ ಕೊಳ್ಳುತ್ತದೆ ಎಂಬುದನ್ನು ಸುನೀತ ಮತ್ತು ಆಕೆಯ ಚಿಕ್ಕಮ್ಮ ಪಾತ್ರಗಳ ಮೂಲಕ ಅರ್ಥೈಸಿರುವರು.

ಪ್ರೇಮಕ್ಕೆ ಯಾವುದೇ ರೀತಿಯ ಜಾತಿ-ಭೇದವಿಲ್ಲದೆ ಅದು ಯುವಕ-ಯುವತಿಯರ ಮನಸ್ಸನ್ನು ಹೇಗೆ ಅವಲಂಬಿಸಿರುತ್ತದೆ ಎನ್ನುವುದನ್ನು 'ಪ್ರಾಯಶ್ಚಿತ್ತ', ಕಥೆಯೂ ಉತ್ತಮವಾಗಿ ಚಿತ್ರಿಸಿದೆ. ಈ ಕಥೆಯೂ ಮನಸ್ಸುಗಳ ಹೊಯ್ದಾಟಗಳನ್ನು ಕುರಿತು ಹೇಳುತ್ತದೆ. ಈ ಕಥೆಯಲ್ಲಿ ಹದಿವಯಸ್ಸಿನವರ ಪ್ರೇಮದ ವಿಷಯವನ್ನು ವಸ್ತುವಾಗಿ ತೆಗೆದುಕೊಂಡು ಕಥೆಯನ್ನು ಹೆಣೆಯಲಾಗಿದೆ. ಸಮಾಜದ ಒಂದು ಭಾಗವಾದ ಕುಟುಂಬ, ಕುಟುಂಬದಲ್ಲಿರುವ ಮನೆಯ ಯಜಮಾನ ಯಾವ ರೀತಿಯಾಗಿ ಪ್ರೇಮದ ವಿಷಯದಲ್ಲಿ ಅಡ್ಡಿಯನ್ನುಂಟು ಮಾಡುವರು ಎಂಬುದನ್ನು ನೋಡಬಹುದು. ತಾಯಿಯ ಪ್ರೀತಿಯ ಮಗ ಮೂರ್ತಿ. ಆದರೆ ತಂದೆಯದು ಸದಾ ಸಿಡುಕು ಸ್ವಭಾವ, ಜಿಪುಣ. ತಾಯಿಯನ್ನು ವಿನಾಕಾರಣ ಹಿಂಸಿಸುತ್ತಿದ್ದ. ಮೂರ್ತಿಗೆ ಓದಿದ ನಂತರ ತನ್ನ ತಾಯಿಯನ್ನು ತನ್ನೊಂದಿಗೆ ಸುಖವಾಗಿ ಇರಿಸಿಕೊಳ್ಳ ಬೇಕೆಂದು ಆಸೆ. ನೆರೆಮನೆಯ ತಂದೆ-ತಾಯಿ ಇಲ್ಲದ ನಳಿನಿಯನ್ನು ಮದುವೆಯಾಗಬೇಕೆಂಬುದು ಅವನ ಇಚ್ಛೆ. ರಜೆಗೆ ಊರಿಗೆ ಬಂದಾಗ ಚಿಕ್ಕಂದಿನ ಗೆಳತಿ ನಳಿನಿಯನ್ನು ಕಂಡು ಮೋಹಪರವಶನಾಗುತ್ತಾನೆ. ತಾಯಿಗೆ ಈ ವಿಷಯ ತಿಳಿಸಿದಾಗ ಅವಳು ಮಗನ ಆಸೆಗೆ ಪುಷ್ಟಿ ನೀಡುತ್ತಾಳೆ. ಆದರೆ ಊಹಿಸಿದಂತೆ ತಂದೆ ವಿರೋಧಿಸುವನು. ಮೂರ್ತಿಯ ವಿದ್ಯಾಭ್ಯಾಸ ಮುಗಿದು ಉತ್ತಮ ನೌಕರಿ ದೊರೆಯುತ್ತದೆ. ತಂದೆಯನ್ನು ವಿರೋಧಿಸಿ ನಳಿನಿಯನ್ನು ಮದುವೆಯಾಗಿ ತಾಯಿಯನ್ನು ತನ್ನೊಂದಿಗೆ ಕರೆದೊಯ್ಯಲು ತೀರ್ಮಾನಿಸಿರುತ್ತಾನೆ. ಆದರೆ ವಿಧಿಯಾಟವೇ ಬೇರೆಯಾಗಿತ್ತು. ತಾಯಿ ಕಾಯಿಲೆ ಬಿದ್ದು ಅಸುನೀಗುತ್ತಾಳೆ. ಮೂರ್ತಿಗೆ ಬದುಕಲು ನಳಿನಿಯೊಬ್ಬಳೇ ಆಸರೆ. ಅವಳನ್ನು ಮದುವೆಯಾಗಿ ತನ್ನೊಂದಿಗೆ ಕರೆದೊಯ್ಯುತ್ತಾನೆ. ನಳಿನಿಯ ಅಪೇಕ್ಷೆಯಂತೆ ಕ್ಷಮೆಯಾಚಿಸಿ ತಂದೆಗೆ ಒಂದು ಪತ್ರ ಬರೆಯುತ್ತಾನೆ. ಪತ್ರ ಓದಿದ ತಂದೆ ಕಣ್ಣೀರು ಹರಿಸುತ್ತಾರೆ. ತಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತವಿದು ಎಂದುಕೊಂಡು ನಿಟ್ಟುಸಿರು ಬಿಡುತ್ತಾರೆ.

"ಪ್ರಾಯಶ್ಚಿತ್ತ" ಕಥೆಯಲ್ಲಿ ಸಮಾಜದಲ್ಲಿ ರೂಢಿಗತವಾಗಿರುವ ಸಂಪ್ರದಾಯಗಳನ್ನೆಲ್ಲಾ, ತನ್ನ ಆದರ್ಶ, ಆಕಾಂಕ್ಷೆಗಳಿಗಾಗಿ, ತಂದೆಯ ಪರಂಪರಾಗತ ಅಧಿಕಾರವನ್ನು ದಿಟ್ಟತನದಿಂದ ಎದುರಿಸುವ ಒಂದು ಮನೋಭಾವವನ್ನು ಈ ಕಥೆಯ ನಾಯಕ ಮೂರ್ತಿಯಲ್ಲಿ ಕಾಣಬಹುದು. ಎಲ್ಲಾ ಕಥೆಗಳಂತೆ ಇಲ್ಲಿಯೂ ಸಹ ತಂದೆಯೇ ಅವರ ಪ್ರೀತಿಗೆ ವಿರೋಧವನ್ನುಂಟುಮಾಡುತ್ತಿರುತ್ತಾನೆ. ನಳಿನಿ ಮತ್ತು ಮೂರ್ತಿ ಇವರಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದು, ಮೂರ್ತಿಯ ತಂದೆ ಇದಕ್ಕೆ ಒಪ್ಪುವುದಿಲ್ಲ. ಕಾರಣ

ಕೇಳಿದಾಗ ನಳಿನಿಯ ತಾಯಿ ನಡತೆಗೆಟ್ಟವಳೆಂದು ಕಾರಣವನ್ನು ಹೇಳುವನು. ನಿಜವಾಗಿ ಇಲ್ಲಿ ನಳಿನಿಯ ತಾಯಿಗೆ ಅನ್ಯಾಯ ಮಾಡಿದ ವ್ಯಕ್ತಿ ಮೂರ್ತಿಯ ತಂದೆಯೇ ಆಗಿರುವನು, ಇದರೊಂದಿಗೆ ನಳಿನಿಯ ತಾಯಿಯ ಆತ್ಮಹತ್ಯೆಗೆ ಕಾರಣವೂ ಮೂರ್ತಿಯ ತಂದೆಯೇ ಎಂಬ ವಿಷಯವನ್ನು ಸೂಕ್ಷ್ಮವಾಗಿ ಕಥೆಯಲ್ಲಿ ಸೂಚಿತವಾಗಿದೆ. ಆದರೆ ಮೂರ್ತಿ "ತಾಯಿ ಕೆಟ್ಟವಳಾದರೆ ಮಗಳ ಅಪರಾಧವೇನು?" ಎಂದು ಪ್ರಶ್ನಿಸಿ ತಂದೆಯ ವಿರೋಧವನ್ನು ಅಲಕ್ಷಿಸಿ ನಳಿನಿಯೊಡನೆ ವಿವಾಹವಾಗುತ್ತಾನೆ. ಈ ಕಥೆಯಲ್ಲಿ ಸಮಾಜದಲ್ಲಿ ಹೆಣ್ಣನ್ನು ಕೇವಲ ಲೈಂಗಿಕ ನೆಲೆಯಲ್ಲಿ ನೋಡುವ ಸಾಮಾಜಿಕ ಆಶಯವನ್ನು ಇಲ್ಲಿ ವಿರೋಧಿಸಿದ್ದನ್ನು, ತಿರಸ್ಕರಿಸಿರುವುದನ್ನು ಮುಖ್ಯವಾಗಿ ಗಮನಿಸಬಹುದು. ಗೌರಮ್ಮನವರು ನಿಜವಾದ ಶುದ್ಧ ಪ್ರೀತಿಗೆ ಎಂದೂ ಕೇಡಾಗುವುದಿಲ್ಲ, ಯಾರದೋ ತಪ್ಪಿಗೆ ಯಾರಿಗೋ ಶಿಕ್ಷೆ ಕೊಡುವುದು ಸರಿಯಲ್ಲ ಎಂದು ತೀರ್ಮಾನಿಸಿ ನಳಿನಿಯನ್ನು ವಿವಾಹವಾಗುವಂತೆ ಒಂದು ಒಳ್ಳೆಯ, ದಿಟ್ಟ ನಿರ್ಧಾರಕ್ಕೆ ಬರುವಂತೆ ಮಾಡಿರುವರು. ಸಮಾಜದಲ್ಲಿ ಪುರುಷರು ಮಾಡುವ ತಪ್ಪಿಗೆ ಮಹಿಳೆಯರು ಅನುಭವಿಸುವಂತಹ ಕಷ್ಟ, ನೋವು-ತಲ್ಲಣಗಳ ಚಿತ್ರಣ ಸಹಜವಾಗಿ ಮೂಡಿಬಂದಿದೆ.

ಗೌರಮ್ಮನವರ **'ಹೋಗಿಯೇ ಬಿಟ್ಟಿದ್ದ'** ಇದೊಂದು ಸತ್ಯ ಘಟನೆಯನ್ನು ಆಧರಿಸಿ ಬರೆದಂತಹ ಕಥೆ. ಇದು ಅವರ 'ಕಂಬನಿ' ಕಥಾಸಂಕಲನದಲ್ಲಿ ಸ್ವಲ್ಪ ಭಿನ್ನವಾಗಿರುವಂತಹ ಕಥೆ. ಈ ಕಥೆಯ ೩೦ ವರ್ಷಗಳ ಹಿಂದಿನ ಸಾಮಾಜಿಕ ಚಿತ್ರಣವನ್ನು ಕಥಾನಾಯಕ ಬಿಚ್ಚಿಡುತ್ತಾನೆ. ಉತ್ತಮ ಪುರುಷದಲ್ಲಿ ಈ ಕಥೆ ಪ್ರಾರಂಭಗೊಳ್ಳುತ್ತದೆ. ಒಮ್ಮೊಮ್ಮೆ ಕಲ್ಪನೆಗಿಂತಲೂ ನಿಜವು ಆಶ್ಚರ್ಯಕರವಾಗಿರುತ್ತದೆ.

ಕಾಲೇಜಿನ ನಾಲ್ಕೈದು ಮಿತ್ರರು ರೈಲ್ವೆ ಡಬ್ಬಿಯೊಂದರಲ್ಲಿ ಒಂದು ಕೊಲೆಯ ಪ್ರಕರಣ ಬಗ್ಗೆ ಮಾತನಾಡುತ್ತ ಪ್ರಯಾಣ ಮಾಡುತ್ತಿರುವಾಗ ಅವರ ಸನಿಹದಲ್ಲೇ ಕುಳಿತಿದ್ದ ಮುದುಕನೊಬ್ಬ ತಾನೊಂದು ಕಥೆ ಹೇಳುವುದಾಗಿ ಹೇಳಿ ಅವರ ಪ್ರತಿಕ್ರಿಯೆಯನ್ನು ನಿರೀಕ್ಷಿಸದೆ ಕತೆಯನ್ನು ಪ್ರಾರಂಭಿಸುವನು. ಆ ಕಥಾನಾಯಕನ ಮೂವತ್ತು ವರ್ಷಗಳ ಹಿಂದಿನ ಮಾತು. ಅನಾಥವಾಗಿ ಬೇರೆಯವರ ಮನೆಯಲ್ಲಿ ಕೆಲಸ ಮಾಡುತ್ತ ಬೆಳೆದ ಅವನು ಆಗ ಇಪ್ಪತ್ತೈದು ವರ್ಷದ ದಷ್ಟಪುಷ್ಟನಾದ ಯುವಕನಾಗಿದ್ದ. ಹಳ್ಳಿಯ ವಾಡಿಕೆಯಂತೆ ತನ್ನ ಕೆಲಸ ಬೇಗ ಮುಗಿದಿದ್ದರಿಂದ ಬೇರೆಯವರ ಗದ್ದೆಗಳಿಗೆ ಹೋಗಿ ಸಹಾಯ ಮಾಡಲು ನಾಲ್ಕಾರು ಆಳುಗಳೊಡನೆ ಹೋಗುತ್ತಿದ್ದ. ಆ ದಿನಗಳಲ್ಲಿ ಅವನ ಮನ ಕದ್ದ ಲತೀಫಾಳೂ ಕೂಡ ಅನಾಥೆ. ತಾಯಿ ಇದ್ದರೂ ಅವಳು ಇನ್ನೊಬ್ಬನೊಂದಿಗೆ ನಿಖಾ ಮಾಡಿಕೊಂಡಿದ್ದಳು. ಇವರಿಬ್ಬರ ಪ್ರೇಮದ ಸುಳಿವು ಸಿಕ್ಕಿದಾಗ ಅವಳ ಚಿಕ್ಕಪ್ಪ ಲತೀಫಳ ಮದುವೆಯನ್ನು ಹೆಂಡತಿಯನ್ನು ಕಳೆದುಕೊಂಡಿದ್ದ ನೆರೆಮನೆಯವನೊಂದಿಗೆ ನಿಶ್ಚಯಿಸಿದ. ಇದಿಷ್ಟೂ ಕಥೆಯ ಸಾರಾಂಶವಾಗಿದೆ. ಈ ಕಥೆಯಲ್ಲಿ ಹಿಂದೂ-ಮುಸ್ಲಿಂ ಗಂಡು ಹೆಣ್ಣಿನ ಪ್ರೀತಿ ಒಂದುಗೂಡಲು ಸಾಧ್ಯವಿಲ್ಲ ಎನ್ನುವ ದುರಂತವನ್ನು ಈ ಕಥೆ ಸೂಚಿಸುತ್ತದೆ. ಸಮಾಜದಲ್ಲಿ ಬೇರೂರಿರುವ ಜಾತಿಪದ್ಧತಿಯನ್ನು ಕುರಿತು ಕಥೆಯಲ್ಲಿ ಯಾವ ರೀತಿಯಲ್ಲಿ ಮೂಡಿಬಂದಿದೆ ಎನ್ನುವುದನ್ನು ನೋಡಬಹುದು.

ಅನಾಥ ಹಿಂದೂ ಒಬ್ಬ ಮುಸ್ಲಿಂ ಹುಡುಗಿಯಾದ ಲತೀಫಾಳನ್ನು ಪ್ರೀತಿಸುತ್ತಿದ್ದರೂ, ಆಕೆಯನ್ನು ಪಡೆಯಲಾಗದೆ, ಬೇರೊಬ್ಬರ ಪಾಲಿಗೆ ಒಪ್ಪಿಸಲಾರದೆ, ಮದುವೆಯಾಗದೆ ಕಳ್ಳನಂತೆ ಕರೆದುಕೊಂಡು ಹೋಗುವುದು ಅವನಿಗೆ ಇಷ್ಟವಿರಲಿಲ್ಲ. ಅವಳೇ ಕೇಳಿಕೊಂಡಂತೆ ಆಕೆಯನ್ನು ಚೂರಿಯಿಂದ ಚುಚ್ಚಿ ಆಕೆಯನ್ನು ಕೊಂದನು. ಸತ್ತಂತಹ ಲತೀಫಾಳನ್ನು ಸೇರಿಕೊಳ್ಳಬೇಕೆಂಬ ಆಸೆಯಿಂದ ಬಾವಿಯಲ್ಲಿ ಹಾರಿದರೆ, ಅವನು ಸಾಯದೇ ಹುಚ್ಚು ಆಸ್ಪತ್ರೆಯಲ್ಲಿ ತನ್ನ ಜೀವನವನ್ನು ಕಳೆದ. ಆ ಮುದುಕ ಹೇಳುವ ಕತೆಯೂ ಆ ರೈಲಿನಲ್ಲಿದ್ದಂತಹ ಯುವಕರು ಕೇಳಬೇಕೆಂದೇನು ಆತ ಬಯಸುವುದಿಲ್ಲ. ಆತ ತನಗೆ ತಾನೇ ಕಥೆ ಹೇಳಿಕೊಳ್ಳುವಂತೆ ಕಥೆಯ ನಿರೂಪಣಾ ಶೈಲಿಯನ್ನು ರಚಿಸಲಾಗಿರುವುದು. ಹೀಗೆ ಕಥೆಯನ್ನು ಹೇಳುತ್ತಲೇ ಚಲಿಸುತ್ತಿರುವಂತಹ ರೈಲಿನಿಂದ ಜಿಗಿಯುತ್ತಾನೆ. ತನಗಾಗಿಯೇ ಕಾಯುತ್ತಿರುವ ಲತೀಫಾಳನ್ನು ಸೇರಲು ಇದನ್ನು ಕಂಡು ಆ ಕಾಲೇಜಿನ ಯುವಕರುಗಳು, ದಿಙ್ಮೂಢರಾಗಿ, ಏನು ತೋಚದೇ ಅದೂವರೆಗೂ ಆ ಮುದುಕ ತನ್ನ ಕಥೆಯನ್ನೇ ಹೇಳುತ್ತಿದ್ದದ್ದೂ ಎಂಬ ಅಂಶ ಕೊನೆಯವರೆಗೂ ತಿಳಿಯುವುದಿಲ್ಲ.

ಭಿನ್ನ ಕಥಾವಸ್ತುವನ್ನು ಹೊಂದಿರುವ ಈ ಕಥೆಯ ನಿರೂಪಣೆಯಲ್ಲಿ ಹೊಸತಂತ್ರವನ್ನು ನೋಡಬಹುದು. ಈ ಕಥೆಯಲ್ಲಿ ಚಲಿಸುತ್ತಿರುವ ರೈಲನ್ನು ಮನುಷ್ಯನ ಜೀವನಕ್ಕೆ, ಬದುಕಿಗೆ ಸಂಕೇತದ ರೂಪದಲ್ಲಿ ಹೇಳಲಾಗಿದೆ. ಆದರೆ ಈ ಕಥೆಯ ನಾಯಕನ ಬದುಕು ಎಷ್ಟೋ ವರ್ಷಗಳ ಹಿಂದೆಯೇ ಚಲನಶೀಲತೆಯನ್ನು ಕಳೆದುಕೊಂಡಿರುವುದು. ಇನ್ನೇನು ತಾನು ಕಥೆ ಹೇಳುವುದು ಮುಗಿದ ತಕ್ಷಣ "ಬಿಡುಗಡೆಯಾಯಿತು; ಇನ್ನೇನು ಹೋಗಬಹುದಲ್ಲ ಎಂದು ನೀವು ಕೇಳಬಹುದು. ಹೌದು ಹೋಗಬಹುದು. ಇದೋ ಹೊರಟೆ ಹೋಗುತ್ತೇನೆ"[3] ಎಂದು ಹೇಳಿ ಚಲಿಸುತ್ತಿದ್ದ ರೈಲಿನಿಂದ ಹಾರಿ ತನ್ನ ಬದುಕಿಗೆ ವಿದಾಯ ಹೇಳಿ ತನ್ನ ಲತೀಫಾಳನ್ನು ಸೇರಿಕೊಳ್ಳುವನು. ಈ ಘಟನೆ ನಡೆದಾಗಲೆ ಅಲ್ಲಿದ್ದಂತಹ ಯುವಕರಿಗೆ ತಿಳಿಯುವುದು, ಇಷ್ಟು ಹೊತ್ತು ಮುದುಕ ತನ್ನ ಕಥೆಯನ್ನು ಹೇಳುತ್ತಿದ್ದದು ಎಂದು. "ಇದೇನು! ಕತೆ ಹೇಳುತ್ತ ಹೇಳುತ್ತ ಇವನಿಗೆ ಹುಚ್ಚು ಹಿಡಿಯಿತೇ ಎಂದು ನಾವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಮತ್ತೇ ಅವನ ಮುಖವನ್ನು ನೋಡುವುದರೊಳಗೆ, ಅವನು ಮಿಂಚಿನ ವೇಗದಿಂದ, ಹೋಗುತ್ತಿದ್ದ ಆ ರೈಲು ಕಿಟಕಿಯಿಂದ ಕೆಳಗೆ ಹಾರಿಬಿಟ್ಟಿದ್ದ"[4] ಎನ್ನುವ ವಾಕ್ಯವು ಪ್ರೀತಿಯ ಕುರಿತು ನಿಜವಾದ ಮನಸ್ಸನ್ನು ತಿಳಿಸುವಂತಹದ್ದು.

ಇಬ್ಬರು ಪ್ರೀತಿಸುವ ಪ್ರೇಮಿಗಳಿಗೆ ಮತ, ಜಾತಿ, ಮೇಲು-ಕೀಳೆಂಬ ಶ್ರೇಣೀಕರಣಕ್ಕೆ ಅನಗತ್ಯವಾಗಿ ಪ್ರಾಶಸ್ತ್ಯ ನೀಡಿ ಎರಡು ಸರಳ ಜೀವಿಗಳ ಬಲಿ ತೆಗೆದುಕೊಂಡಿರುವ ಸಮಾಜ ಆರೋಗ್ಯಕಾರಿ ಸಮಾಜವಲ್ಲ. ಅದೊಂದು ಅಸ್ವಸ್ಥ ಸಮಾಜ ಎಂದು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಇದರೊಡನೆ ಹೊಸ ಪೀಳಿಗೆಯ ಯುವಕರ ಸಮ್ಮುಖದಲ್ಲಿ ಕಥೆಯನ್ನು ನಿರೂಪಿಸಲಾಗಿದೆ. ಬೇರೆ ದಾರಿ ಕಾಣದೇ ಯುವಕರು ರೈಲಿನ ಚೈನನ್ನು ಎಳೆದು ರೈಲನ್ನು ನಿಲ್ಲಿಸಿದರು. ಈ ಅಸ್ವಸ್ಥ ಸಮಾಜಕ್ಕೆ ತಡೆ ಹಾಕದೆ ಮನುಷ್ಯ ಸಮಾಜದಲ್ಲಿ ಬದುಕಲು ಸಾಧ್ಯವಿಲ್ಲವೆನ್ನುವ ಸಂಗತಿಯನ್ನು ಕಥೆಯಲ್ಲಿ ಅಡಕವಾಗಿಸಿದ್ದಾರೆ.

"ಪ್ರೇಮಕ್ಕೆ ಜಾತಿ ಕುಲವನ್ನು ಕಟ್ಟಿಕೊಂಡು ಮಾಡಬೇಕಾದುದೇನು? ಅದು ಕುರುಡು. ಅದರಲ್ಲೂ ನಿಜವಾದ ಪ್ರೇಮವೆಂದರೆ ಅದರ ಹಾದಿ ಎಂದೆಂದಿಗೂ ನಿಷ್ಕಂಟಕವಲ್ಲ"[9]

ಎನ್ನುವ ಲೇಖಕಿಯ ಮಾತು. ಪ್ರೀತಿಯ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ಸಮಾಜದಲ್ಲಿ ನಿಜವಾದ ಪ್ರೇಮಕ್ಕೆ ಬೆಲೆ ಇಲ್ಲದೆ, ಜಾತಿ ಮತಗಳ ಕಟ್ಟುಪಾಡಿಗೆ ಒಳಗಾಗಿ ಸಾವಿನ ದಾರಿ ಹಿಡಿಯುವ ನಿಷ್ಕಲ್ಮಶ ಪ್ರೇಮಿಗಳ ಮನಸ್ಸನ್ನು ತೆರೆದು ತೋರಿಸುತ್ತದೆ. ಕಥಾನಾಯಕ ತನ್ನ ಪ್ರೀತಿಗಾಗಿ ಜಾತಿಯನ್ನು ಸಹ ಬದಲಾಯಿಸಿಕೊಳ್ಳಲು ಸಿದ್ಧನಿದ್ದ. ಆದರೆ ಈ ಕ್ರೂರ ಸಮಾಜದಲ್ಲಿ ನಿಜವಾದ ಪ್ರೇಮಕ್ಕೆ ಸ್ಥಾನವಿಲ್ಲ. ಅದಕ್ಕೆ ಜಾತಿ ಎಂಬ ಸೊಗನ್ನು ಹಾಕಿ ಅದಕ್ಕೆ ವಿರೋಧವನ್ನು ಒಡ್ಡುವವರೆ ಹೆಚ್ಚು. ಇಲ್ಲಿ ಪ್ರೇಮಿಗಳಿಗಬ್ಬರೂ ಸಮಾಜದ ದೃಷ್ಟುತ್ಯದಿಂದಾಗಿ ಸಾವಿನಲ್ಲಿ ಒಂದಾದರು.

ಭಾಷಿಕ ವಿನ್ಯಾಸ

ಭಾಷೆ ಸಾಹಿತ್ಯ ಕೃತಿಗಳಲ್ಲಿ ವಸ್ತುವಿನ ವಾಹಕವಾಗಿ ಕಾರ್ಯನಿರ್ವಹಿಸುತ್ತದೆ. ಅಧ್ಯಯನ ಅನುಭವ ಹಾಗೂ ಬರವಣಿಗೆಯ ಮೂಲಕ ಅದು ದಿನದಿನಕ್ಕೂ ಪಕ್ವಗೊಳ್ಳುತ್ತಾ ಹೋಗುತ್ತದೆ. ಭಾಷೆಯ ನೈಪುಣ್ಯತೆಗೆ ಪರಿಶ್ರಮ ಮುಖ್ಯ ಸಾಧನವಾಗಿದೆ. ಎಂಥ ಒಳ್ಳೆಯ ಕಥಾವಸ್ತು, ಒಳ್ಳೆಯ ವಿಚಾರಗಳಿದ್ದರೂ ಅದಕ್ಕೆ ತಕ್ಕಂತಹ ಭಾಷೆಯನ್ನು ಬಳಸುವಲ್ಲಿ ಹಿಡಿತವಿಲ್ಲದಿದ್ದರೆ ಅವು ತಮ್ಮ ಉದ್ದೇಶ ಈಡೇರಿಸಿಕೊಳ್ಳುವಲ್ಲಿ ವಿಫಲವಾಗುತ್ತವೆ. ಈ ಹಿನ್ನೆಲೆಯಿಂದ ಗಮನಿಸಿದ್ದೇ ಆದರೆ ಕನ್ನಡ ಬರಹಗಾರರು ಒಬ್ಬೊಬ್ಬರು ಒಂದೊಂದು ಬಗೆಯ ಭಾಷೆಯನ್ನು ತಮ್ಮ ಪ್ರತಿಭಾ ಸಾಮರ್ಥ್ಯಕ್ಕನುಗುಣವಾಗಿ ದುಡಿಸಿಕೊಂಡಿದ್ದಾರೆ. ಮಹಿಳಾ ಕಥಾಗಾರ್ತಿಯರ ಕಥೆಗಳ ಭಾಷೆಯನ್ನು ಅವಲೋಕಿಸಿದರೆ ವೈವಿಧ್ಯತೆಗಿಂತ ಏಕತಾನತೆ ಅನುಕರಣೆ ಹೆಚ್ಚಾಗಿ ಕಂಡುಬರುತ್ತದೆ. ಅದರಲ್ಲಿಯೆ ಕೆಲವರು ಆ ಅಪಾಯದಿಂದ ತಪ್ಪಿಸಿಕೊಂಡು ತಮ್ಮ ಕೃತಿಗಳಲ್ಲಿ ಭಾಷಾ ವಿಶಿಷ್ಟತೆಯನ್ನು ಮೆರೆದು ಯಶಸ್ವಿಯಾಗಿರುವರು.

ಕಥೆಯ ಸೌಂದರ್ಯಕ್ಕೆ ಅಪೇಕ್ಷಿತ ಉದ್ದೇಶಕ್ಕೆ ಭಾವ ನಿರೂಪಣೆಗೆ ಭಾಷೆ ಮುಖ್ಯವಾದುದು. ಅದು ಹದವರಿತ ಶಬ್ದಗಳ ಜೋಡಣೆಯ ಮೂಲಕ ಸಾಗುವಂತಹದ್ದು, ಕಥಾಸಾಹಿತ್ಯದಲ್ಲಿ ಭಾಷೆಯ ಬಳಕೆಯ ಬಗ್ಗೆ ಹೇಳುತ್ತ ಗಿರಡ್ಡಿ ಗೋವಿಂದರಾಜು ಅವರು

"ಸಾಹಿತ್ಯವೆನ್ನುವುದು ಭಾಷೆಯ ಜತೆಗೆ ನಡೆಸುವ ಗುದುಮುರುಗಿ ಅನುಭವವನ್ನು ಶಬ್ದಗಳ ತೆಕ್ಕೆಗೊಗ್ಗಿಸುವ ವಿಶೇಷ ಸಾಹಸ ಇಂದು ಕಾಣುತ್ತದೆ. ಅದರಲ್ಲೂ ಕನ್ನಡವನ್ನು ಸೂಕ್ಷ್ಮವಾದ ಹಾಗೂ ಪ್ರೌಢವಾದ ಸಮಸ್ಯೆಗಳ ಚಿಂತನೆಗೆ ಯೋಗ್ಯವಾದ ಭಾಷೆಯನ್ನಾಗಿ ಮಾಡುವಲ್ಲಿ ತಳಪಾಯ ಹಾಕುವ ಕೆಲಸ ಇಂದು ನಡೆದಿದೆ. ಭಾಷೆಯೆನ್ನುವುದು ಕೇವಲ ಸಲಿಲವಾಗಿ ಹರಿದು ಓದುಗನನ್ನು ಜಾರಿಸಿ ಕೊಂಡು ಹೋಗುವ ಮಂತ್ರಶಕ್ತಿಯಾಗಿ ಮಾತ್ರ ಈಗ ಉಳಿದಿಲ್ಲ. ಅನುಭವದ

> ತೀಕ್ಷ್ಣ ಶೋಧವನ್ನು ಭಾಷೆಯ ಮೂಲಕ ಪ್ರಕಟಿಸುವ ಒದ್ದಾಟ, ಅದರ ಎಲ್ಲಾ ಸ್ತರಗಳನ್ನು ಒಂದಿಷ್ಟು ಕಾವು ಆರದಂತೆ ಶಬ್ದಗಳಲ್ಲಿ ಹಿಡಿದು ನಿಲ್ಲುವ ಹಠ ಇಂದು ಮೂಡಿಬರುತ್ತಿದೆ"[೫]

ಎಂದು ಹೇಳುತ್ತಾರೆ. ಬರಹಗಾರರು ತಾವು ಆರಿಸಿದ ವಸ್ತುವಿನ ಕಾಲ, ಪ್ರದೇಶದ ಬಗ್ಗೆ ಪೂರ್ವ ನಿಯೋಜಿತವಾಗಿ ತಿಳಿದು ಅದಕ್ಕೆ ಎಂಥ ಭಾಷೆಯನ್ನು ಬಳಸುವುದರಿಂದ ಅದು ಸಮರ್ಪಕವಾಗುವುದೆಂದು ಪೂರ್ವದಲ್ಲಿಯೇ ಖಚಿತಪಡಿಸಿಕೊಳ್ಳಬೇಕು. ತಮಗೆ ಕರಗತವಾದ ಭಾಷೆಯಲ್ಲಿ ಬರೆಯುವುದರಿಂದಾಗಿ, ಭಾಷೆಯ ಬಳಕೆಯಲ್ಲಿ ಏಕರೂಪತೆಯನ್ನು ಕಾಯ್ದುಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಕಥೆಯ ಪ್ರಾರಂಭದಲ್ಲಿ ಬಳಸಿದ ಭಾಷೆಯನ್ನೆ ಕಥೆಯ ಕೊನೆಯವರೆಗೂ ಮುಂದುವರೆಸಬೇಕಾಗುತ್ತದೆ. ಪಾತ್ರಗಳ ರಚನೆಯ ಹಿನ್ನೆಲೆಯಲ್ಲಿ ಯಾವ ಪಾತ್ರಗಳ ಸ್ಥಾನಮಾನಗಳು ಹೇಗಿದೆಯೋ ಹಾಗೆಯೇ ಅದೇ ಸ್ತರದ ಭಾಷೆಯನ್ನು ಆ ಪಾತ್ರಗಳ ಮೂಲಕ ಹೇಳಿಸಬೇಕಾಗುತ್ತದೆ.

ಗೌರಮ್ಮನವರ ಕಥೆಗಳಲ್ಲಿ ಮಧ್ಯಮವರ್ಗದ ಜನರಾಡುವ ಶಿಷ್ಟ ಸಂಪ್ರದಾಯಕ್ಕೆ ಸೇರಿದ ಭಾಷೆಯ ಬಳಕೆ ಮಾಡಿರುವುದನ್ನು ಗಮನಿಸಬಹುದು. 'ಕೌಸಲ್ಯಾನಂದನ' ಕಥೆಯಲ್ಲಿ ಬರುವ ಒಂದು ಅಂಶವನ್ನು ನೋಡುವುದಾದರೇ,

> "ಕಾನ್ವೆಂಟಿನಲ್ಲಿ ಜೈಲಿನಲ್ಲಿದ್ದವರಂತೆ ಇದ್ದವರಿಗೆ ಅನಾಯಾಸವಾಗಿ ಮೂರು ಮೈಲಿ ನಡೆಯುವುದಕ್ಕೆ ಅದೊಂದು ಸೌಭಾಗ್ಯದಂತೆ. ಲಿನ್ನಿಯ ಪರಿಚಯದವರು ಸ್ಟೇಶನ್ ಮಾಸ್ಟರ್. ಅವರು ಕಾರು ಮಾಡಿ ಕೊಡುತ್ತೇನೆಂದರೂ ಬೇಡವೆಂದು ಹಾಸಿಗೆ ಪೆಟ್ಟಿಗೆಗಳನ್ನವರ ಸ್ವಾಧೀನಕ್ಕೆ ಕೊಟ್ಟು ಹೊರಟೆವು. ಕಾಡುಗಳ ನಡುವಿನಿಂದ, ತೋಟಗಳ ಮಧ್ಯದಿಂದ ತೋಡುಗಳನ್ನು ದಾಟಿಕೊಂಡು ಓಡುತ್ತಾ ಕೂರುತ್ತಾ, ಕಂಡ ಕಂಡ ಕಾಡುಹೂಗಳನ್ನು ಕೀಳುತ್ತಾ, ಹೇಗೆ ದಾರಿ ಮುಗಿಯಿತೆಂಬುದೇ ತಿಳಿಯದಷ್ಟು ಬೇಗ ಲಿನ್ನಿಯ ಮನೆಯ ಹತ್ತಿರ ತಲುಪಿದೆವು"[೬]

ಯಾವುದೇ ಅಂಶಗಳನ್ನು ಹೇಳುವಲ್ಲಿ ಗೌರಮ್ಮನವರು ಸರಳವಾದ ಭಾಷೆಯಲ್ಲಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತಹ ಭಾಷೆಯನ್ನು ತಮ್ಮ ಕಥೆಗಳ ಪಾತ್ರಗಳಿಂದ ನುಡಿಸುತ್ತಾರೆ.

ಸೌಂದರ್ಯಾತ್ಮಕ ವಿನ್ಯಾಸ

ಗೌರಮ್ಮನವರ ಹೆಣ್ಣಿನ ಸೌಂದರ್ಯದ ಕಲ್ಪನೆ ಕುತೂಹಲಕಾರಿಯಾದುದು ಹಾಗೂ ವಿಶಿಷ್ಟವಾದ್ದುದು. ಇವರ ಕಥೆಗಳಲ್ಲಿ ಬರುವಂತಹ ಬಹುತೇಕ ಸ್ತ್ರೀಪಾತ್ರಗಳು ಸುಂದರಿಯರಲ್ಲ. ಅಂದರೆ ಸಾಂಪ್ರದಾಯಿಕವಾದ ಸ್ತ್ರೀ-ಸೌಂದರ್ಯ ವರ್ಣನೆಗಳಿಂದ ಕಂಗೊಳಿಸುವುದಿಲ್ಲ. ಇವರ ಕಥೆಗಳಲ್ಲಿ ದೈಹಿಕ ಸೌಂದರ್ಯಕ್ಕಿಂತ ಹೆಚ್ಚಾಗಿ ಆ ಪಾತ್ರಗಳ ಹೃದಯ ವೈಶಾಲ್ಯತೆ, ಅನುಪಮವಾದ ನಡವಳಿಕೆ, ಕಲಾ ಸಂಪನ್ನತೆಗಳೇ ಮೆಚ್ಚುಗೆಯ ಅಂಶಗಳಾಗಿ ಮೂಡಿಬರುತ್ತವೆ. ಮನುಷ್ಯನ ಅಂತರಾಳದಲ್ಲಿ ಹುದುಗಿರುವಂತಹ

ಮಾನವೀಯ ಅಂಶಗಳ ಕಡೆಗೆ ಹೆಚ್ಚು ಗಮನಕೊಡುವುದು ಕಥೆಯ ವೈಚಾರಿಕ ನಿಲುವೂ ಆಗುತ್ತದೆ. 'ವಾಣಿಯ ಸಮಸ್ಯೆ', 'ಅವಳ ಭಾಗ್ಯ', 'ಪ್ರಾಯಶ್ಚಿತ್ತ', 'ಹೋಗಿಯೇ ಬಿಟ್ಟಿದ', 'ಯಾರು?' 'ಅದೃಷ್ಟದ ಆಟ' ಈ ಎಲ್ಲಾ ಕಥೆಗಳ ಮುಖ್ಯ ಸ್ತ್ರೀ-ಪಾತ್ರಗಳೆಲ್ಲವೂ ಸಾಮಾನ್ಯ ಹೆಂಗಸರು. 'ಅವಳ ಭಾಗ್ಯ' ಕಥೆ ಯಲ್ಲಿ ಪಾತ್ರವೊಂದರ ಮೂಲಕ ಹೇಳಿಸಿರುವಂತಹ ನುಡಿಗಳು ಕತೆಗಾರ್ತಿಯ ಜೀವನದೃಷ್ಟಿಯನ್ನು ತೆರೆದು ತೋರಿಸುತ್ತದೆ.

> "ಅವಳನ್ನು ಕುರೂಪಿ ಎಂದು ಹೇಳಿದೆನಲ್ಲ! ಎಂತಹ ಹುಚ್ಚು ನನಗೆ! ಅವಳ ಆ ಸೌಂದರ್ಯದಿಂದ ತುಂಬಿದ ಹೃದಯದ ಕನ್ನಡಿಗಳಂತಿದ್ದ ಆ ಎರಡು ಕಣ್ಣುಗಳೇ ಸಾಲವೆ? ಆ ಸರ್ವಸಾಮಾನ್ಯ ಮುಖಕ್ಕೆ ಸ್ವರ್ಗೀಯ ಸೌಂದರ್ಯವನ್ನು ಕೊಟ್ಟಿದ್ದ ಆ ಕಣ್ಣುಗಳನ್ನು ನೋಡದೆ ಅವಳು ಕುರೂಪಿ ಎಂದಂದುಕೊಂಡಿದ್ದೆನಲ್ಲ - ಎಂತಹ ಅಕ್ಷಮ್ಯ ಮೂಢತನ! ಬಿಳಿಚರ್ಮ, ಉದ್ದವಾದ ಕೇಶರಾಶಿ, ಎಳಸು ಮೂಗು, ಚಂದುಟಿಗಳು ಇವೆಲ್ಲಾ ಇದ್ದರೇನೇ ಸೌಂದರ್ಯವೆಂದಿದ್ದ ನನ್ನ ಭಾವನೆ ಕ್ಷಣ ಮಾತ್ರದಲ್ಲಿ ಬದಲಾಯ್ತು. ಸುಂದರವಲ್ಲದ ರೂಪದ ಒಳಗೂ ಅತ್ಯಂತ ಸುಂದರವಾದ ಹೃದಯಗಳಿರುವುವು ಎಂಬುದನ್ನು ಪಾರುವಿನ ಕಣ್ಣುಗಳು ನನಗೆ ತೋರಿಸಿಕೊಟ್ಟವು. ಮತ್ತೆ ಆ ಸುಂದರವಾದ ಹೃದಯ, ರೂಪಸೌಂದರ್ಯದಂತೆ ಬಹುಬೇಗನೆ ಮಾಸದೆ ಸುಂದರವಾಗಿಯೇ ಇರುವುದು ಎಂಬುದರ ಅರಿವನ್ನೂ ನನಗೆ ಮಾಡಿಕೊಟ್ಟವು ಪಾರುವಿನ ಆ ಕಣ್ಣುಗಳೇ"[೭]

ಕೊಡಗಿನ ಗೌರಮ್ಮನವರ 'ಕೌಸಲ್ಯಾನಂದನ' ಕಥೆಯಲ್ಲಿ ಕೊಡಗಿನ ಪ್ರಾಕೃತಿಕ ವರ್ಣನೆ ಮೂಡಿ ಬಂದಿರುವುದನ್ನು ಗಮನಿಸಬಹುದು. ಲಿನ್ನಿ ಮತ್ತು ಸೀತಾ ಊರಿಗೆ ಹೋದಾಗ ಅವರಿಗೆ ಕರೆದುಕೊಂಡು ಹೋಗಲು ಯಾವುದೇ ಗಾಡಿ ವ್ಯವಸ್ಥೆ ಇಲ್ಲದ್ದರಿಂದ ಅವರಿಬ್ಬರು ನಡೆದುಕೊಂಡು ಹೋಗುವ ಸಂದರ್ಭದಲ್ಲಿ ಅಲ್ಲಿಯ ಕಾಡಿನ ತೋಟಗಳ ಮೂಲಕ ಹಾದುಹೋಗುವ ಸಂದರ್ಭದಲ್ಲಿ ಅಲ್ಲಿಯ ಪ್ರಾಕೃತಿಕ ಸೌಂದರ್ಯ ತಿಳಿಯಲು ನೆರವಾಗುತ್ತದೆ. ಕಾಡುಗಳ ನಡುವಿನಿಂದ, ತೋಟಗಳ ಮಧ್ಯದಿಂದ ತೋಡುಗಳನ್ನು ದಾಟುತ್ತಾ, ದಾರಿಯಲ್ಲಿ ಓಡುತ್ತಾ, ಆಯಾಸವಾದಾಗ ಮಧ್ಯದಲ್ಲಿ ಕೂಡುತ್ತಾ, ಅಲ್ಲಿದ್ದಂತಹ ಕಾಡು ಹೂಗಳನ್ನು ಕೀಳುತ್ತಾ, ಹೊರಟೆವು.

ಗೌರಮ್ಮನವರ ಕಥೆಗಳಲ್ಲಿ ಬರುವ ಸ್ತ್ರೀಯರು ಅಷ್ಟೊಂದು ಸುಂದರವಾಗಿರದಿದ್ದರೂ ಮಾನವೀಯ ಮೌಲ್ಯವನ್ನು ಪ್ರತಿಪಾದಿಸುವಂಥಹ ಹೃದಯವನ್ನು ಹೊಂದಿರುವಂತಹವರು. 'ವಾಣಿಯ ಸಮಸ್ಯೆ' ಕಥೆಯಲ್ಲಿ ಬರುವ 'ಇಂದು' ನೋಡಲು ಅಷ್ಟು ಸುಂದರವಾಗಿಲ್ಲ. ಆದರೂ ಸಹ ಅವಳಲ್ಲಿ ಬೇರೆಯವರ ತನ್ನದಲ್ಲದ ಸಂಸಾರವನ್ನು ಅಚ್ಚುಕಟ್ಟಾಗಿ ಇಟ್ಟುಕೊಡುವಂತಹ ಒಂದು ಮನುಷ್ಯತ್ವವನ್ನು ಹೊಂದಿದವಳು. ರತ್ನನಿಗೆ ತಾನು ಊಹಿಸಿದ ಸೌಂದರ್ಯ ಇಂದುವಿನಲ್ಲಿ ಇರದಿದ್ದರೂ ಕೂಡ ಅವಳ ಕಾರ್ಯತತ್ಪರತೆ ಅವಳ ಆ

ಒಂದು ನ್ಯೂನ್ಯತೆಯನ್ನು ತುಂಬಿ ಬಿಡುವುದು ಎಂದು ಹೇಳುವ ವಾಕ್ಯದ ಮೂಲಕ ಆಕೆಯಲ್ಲಿರುವ ಮಾನವೀಯ ಮೌಲ್ಯದ ಬಗ್ಗೆ ತಿಳಿಯಲು ಸಹಾಯಕವಾಗುವುದು. ಅದೇ ರೀತಿ 'ಯಾರು?' ಕಥೆಯಲ್ಲಿ ಬರುವ ಪಾಪ ಸಹ ಸುಂದರಿಯಲ್ಲ, ಆದರೆ ಆಕೆಯ ಬುದ್ಧಿ, ಗುಣ, ನಡತೆಗಳಲ್ಲಿ ಅವಳನ್ನು ಮೀರಿಸುವವರಾರಿಲ್ಲ. ತನ್ನಿಂದಾಗಿ ತನ್ನ ಮನೆಯವರೆಲ್ಲರೂ ನೊಂದುಕೊಳ್ಳುವರು ಎಂಬ ಉದ್ದೇಶದಿಂದ ತನ್ನ ದುಃಖವನ್ನೆಲ್ಲಾ ಸಹಿಸಿಕೊಂಡು ಮನೆಯಲ್ಲಿ ಓಡಾಡುತ್ತಿದ್ದಳು. ತನ್ನ ಗಂಡನ ಓದಿಗಾಗಿ ತಂದೆ ಮಾಡಿದ ಸಾಲದಿಂದ ಅವರ ಮನೆಯ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತು. ಇದರಿಂದ ತನ್ನ ಅಣ್ಣ ಮುಂದೆ ಓದುವ ಸಲುವಾಗಿ ಆಕೆ ಸಿನಿಮಾ ನಟಿಯಾಗಿ ದುಡಿದಳು.

ಗೌರಮ್ಮನವರ ಕಥೆಗಳಲ್ಲಿ ಪ್ರಾಕೃತಿಕ ಸೌಂದರ್ಯವೂ, ಮಾನವ ಸೌಂದರ್ಯವೂ ಪ್ರತೀತಗೊಂಡಿರುವುದನ್ನು ಮೇಲಿನ ಕೆಲವು ಉದಾಹರಣೆಗಳ ಮೂಲಕ ವಿವರಿಸಿಕೊಳ್ಳಬಹುದು.

ಟಿಪ್ಪಣಿಗಳು

೧. ಕೊಡಗಿನ ಗೌರಮ್ಮ, ಕಂಬನಿ, ಪು. ೫೩.

೨. ಕೊಡಗಿನ ಗೌರಮ್ಮ, ಕಂಬನಿ, ಪು. ೧೧೫.

೩. ಅದೇ...

೪. ಅದೇ...ಪು. ೧೧೧.

೫. ವಿಜಯಾ, ಸಣ್ಣಕಥೆಯ ಸೊಗಸು, ಪು. ೪೫.

೬. ಕೊಡಗಿನ ಗೌರಮ್ಮ, ಕಂಬನಿ, ಪು. ೩೭.

೭. ಕೊಡಗಿನ ಗೌರಮ್ಮ, ಕಂಬನಿ, ಪು. ೩೨.

• • •

ಅಧ್ಯಾಯ ೫

ಕೊಡಗಿನ ಗೌರಮ್ಮನವರ ಕಥೆಗಳ ಆಶಯ ಮತ್ತು ಕಥನ ಕ್ರಮದ ನೆಲೆಗಳು

ಅಧ್ಯಾಯ ೫

ಕೊಡಗಿನ ಗೌರಮ್ಮನವರ ಕಥೆಗಳ ಆಶಯ ಮತ್ತು ಕಥನ ಕ್ರಮದ ನೆಲೆಗಳು

ಈ ಅಧ್ಯಾಯದಲ್ಲಿ ಗೌರಮ್ಮನವರ ಕಥೆಗಳ ಮುಖ್ಯ ಆಶಯವೇನು ಎಂದು ನೋಡುವ ಮೂಲಕ ಕಥನ ಕ್ರಮದ ನೆಲೆಗಳನ್ನು ಗುರುತಿಸುವುದನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಗೌರಮ್ಮನವರ 'ಯಾರು'? ಎಂಬ ಕಥೆಯಲ್ಲಿ ತನ್ನ ಗಂಡನ ತಿರಸ್ಕಾರದಿಂದಾಗಿ 'ಪಾಪ' ಎಂಬ ಹೆಸರಿನ ಕಥಾನಾಯಕಿ ಜೀವನದಲ್ಲಿ ಎದೆಗುಂದದೆ ಒಬ್ಬ ನಟಿಯಾಗಿ ಹೇಗೆ ಜೀವನವನ್ನು ದಿಟ್ಟತನದಿಂದ ಎದುರಿಸುವಳು ಎಂಬುದನ್ನು ಈ ಕಥೆಯಲ್ಲಿ ಗೌರಮ್ಮ ಕಟ್ಟಿಕೊಟ್ಟಿದ್ದಾರೆ. ಗೌರಮ್ಮನ ಹೆಣ್ಣಿನ ನೋವನ್ನು ಅಥವಾ ಬವಣೆಯನ್ನು ಹಲವಾರು ಬಗೆಯಲ್ಲಿ, ಬೇರೆ ಬೇರೆ ನೆಲೆಗಳಲ್ಲಿ ಕಾಣಿಸಿರುವ ಗೌರಮ್ಮ ಅಂತಃಕರಣ ಮಿಡಿಯುವಂತೆ ತಮ್ಮ ಕಥೆಗಳಲ್ಲಿ ತೋರಿಸಿದ್ದಾರೆ.

ಕಥೆಯ ಕೇಂದ್ರಬಿಂದು 'ಪಾಪ', ಮಹೇಶ ಕಥೆಯ ನಿರೂಪಕನಾಗಿರುವನು. ಪಾಪಳ ಜೀವನವನ್ನು ಆಕೆಯ ವ್ಯಕ್ತಿತ್ವವನ್ನು ನಿರೂಪಿಸಿರುವನು. ವಸಂತ ತನ್ನ ಪ್ರಾಣ ಸ್ನೇಹಿತ ಮಹೇಶ ನಟಿಯೊಬ್ಬಳ ಒಡನಾಡಿಯಾಗಿರುವುದನ್ನು ಕಂಡು, ಅವನ ಸಹವಾಸವನ್ನು ತೊರೆದು, ನೋವಿನಲ್ಲಿ ಎಲ್ಲೆಲ್ಲೋ ಸುತ್ತಾಡಿ ಕೊನೆಗೆ ಮನೆಗೆ ಬಂದಾಗ ತಂಗಿ ತನ್ನ ರೂಮಿನಲ್ಲಿಟ್ಟಿದ್ದ ಮಹೇಶನ ಕಾಗದವನ್ನು ತನ್ನ ತಾಯಿಯ ಊಟದ ಕರೆಯನ್ನು ಲೆಕ್ಕಿಸದೆ ಬಾಗಿಲು ಹಾಕಿಕೊಂಡು ಓದತೊಡಗಿದ.

ವಸಂತನ ಕಾಗದಿಂದ ನೊಂದುಕೊಂಡಿರುವಂತಹ ಮಹೇಶ ಅಲ್ಲಿಯವರೆಗೂ ಯಾರೊಂದಿಗೂ ಹೇಳದಿರುವ ವಿಷಯವನ್ನು ತನ್ನ ಸ್ನೇಹಿತನ ತಪ್ಪು ತಿಳುವಳಿಕೆಯನ್ನು ನಿವಾರಿಸಲು ಕಾಗದದಲ್ಲಿ ಬರೆದಿದ್ದ. ಮಹೇಶ ತನ್ನ ತಾಯಿ ತೀರಿಕೊಂಡ ದಿನವೇ ಹುಟ್ಟಿರುವ ತನ್ನ ಚಿಕ್ಕ ತಂಗಿ ಪಾಪಳನ್ನು ತನ್ನ ಅಕ್ಕ ಪ್ರಭಾಳಿಗಿಂತ ಹೆಚ್ಚು ಪ್ರೀತಿಸುತ್ತಿದ್ದ. ಪ್ರಭಾಳ ಮದುವೆಯ ಅನಂತರ ಮಹೇಶನ ತಂದೆ ಮರುಮದುವೆ ಮಾಡಿಕೊಂಡಿದ್ದರು. ಪಾಪಾಳಿಗೆ ಹನ್ನೊಂದು ವರ್ಷ ತುಂಬುವ ಮೊದಲೇ ತಂದೆ-ತಾಯಿಯರಿಲ್ಲದ ಸೋದರತ್ತೆಯ ಮಗನಿಗೆ ಕೊಟ್ಟು ವಿವಾಹ ಮಾಡಲಾಯಿತು. ಮದುವೆಯಾದ ವರ್ಷ ಮೆಟ್ರಿಕ್ ಪಾಸಾದ ಅಳಿಯನ ಕಾಲೇಜು ಶಿಕ್ಷಣದ ಜವಾಬ್ದಾರಿ ಹಾಗೂ ಮುಂದೆ ಎಂ.ಎ. ಮಾಡಲು ಆಕ್ಸ್‌ಫರ್ಡ್‌ಗೆ ಕಳುಹಿಸುವ ಜವಾಬ್ದಾರಿಯನ್ನು ಅದರ ಖರ್ಚನ್ನೆಲ್ಲಾ ಪಾಪಾಳ ತಂದೆ ಹೊತ್ತರು. ಗಂಡ ಎಂದರೇನು ಎಂದು ತಿಳಿಯದಂತಹ ಪಾಪ ಗಂಡ ಬಂದಾಗ ನಾಚಿಕೆಯಿಂದ ಓಡಿ ಹೋಗಿ

ಅವಿತುಕೊಳ್ಳುತ್ತಿದ್ದಳು. ಗಂಡನೆದುರು ಎಂದೂ ಸುಳಿಯದಿರುವಂತಹ ಪಾಪ ಇಂಗ್ಲೆಂಡಿಗೆ ಹೋಗುವ ಮೊದಲು ಅವಳಾಗಿಯೇ ಅವನ ರೂಮಿಗೆ ಹೋಗಿ, ಅತ್ತು ಕಣ್ಣು ಕೆಂಪಾಗಿಸಿಕೊಂಡು ಹೊರಗೆ ಬಂದಾಗ, ಬಹುಶಃ ಗಂಡ ವಿದೇಶಕ್ಕೆ ಹೋಗುವುದೂ ಅದೂ ಸತ್ಯಾಗ್ರಹವೂ ಜೋರಾಗಿ, ಪ್ರತಿಯೊಬ್ಬರು ದೇಶಕ್ಕಾಗಿ ಬೇರೆಲ್ಲವನ್ನು ತೊರೆಯಲು ಸಿದ್ಧವಾದ ಸಮಯದಲ್ಲಿ ಅವಳಿಗೆ ತನ್ನ ಗಂಡ ಇಂಗ್ಲೆಂಡಿಗೆ ಹೋಗುವುದು ಇಷ್ಟವಿಲ್ಲವೇನೋ ಎಂದು ಭಾವಿಸಿದ ಮಹೇಶ. ಅವನು ವಿಲಾಯಿತಿಗೆ ಹೊರಟು ನಿಂತಾಗ ಮಾತ್ರ ಪಾಪ ಹೊರಗೆ ಬಾರದೆ ರೂಮಿನ ಬಾಗಿಲು ಹಾಕಿಕೊಂಡು ಅಳುತ್ತಿದ್ದಳು.

ಅವನು ಹೋಗಿ ಒಂದೆರಡು ತಿಂಗಳಾದರೂ ಸಹ ಪಾಪ ಇಂದಲ್ಲದಿದ್ದರೆ ನಾಳೆ ಸಮಾಧಾನ ಹೊಂದುವಳು ಎಂದು ಭಾವಿಸಿದ ಮಹೇಶನ ಎಣಿಕೆ ತಪ್ಪಾಯ್ತು. ದಿನ ಕಳೆದಂತೆ ಪಾಪ ಬತ್ತಿ ಹೋದಳು. ತಾಯಿಯ ಸ್ನೇಹ ಮಮತೆಗಳನ್ನರಿಯದೆ, ಹುಡುಗನಾದ ಮಹೇಶನೊಡನೆ ಹುಡುಗತನದಲ್ಲಿ ಬೆಳೆದಂತಹವಳು. ಆಕೆಯ ಸ್ಥಿತಿಯನ್ನು ನೋಡಲಾರದೆ ತಂದೆ 'ಏನೋ ಕಾಯಿಲೆ; ಔಷಧಿ ಮಾಡಬೇಕು' ಎಂದರೆ ಚಿಕ್ಕಮ್ಮ 'ಸುಮ್ಮನೆ ಕೂತಲ್ಲೇ ಕೂತು ಸದಾ ಓದುತ್ತಿದ್ದರೆ ಕಾಯಿಲೆ ಬರದೆ ಏನಾದೀತು' ಎಂದು ಗೊಣಗುವರು. ಮಹೇಶನಿಗೆ ಮಾತ್ರ ಪಾಪಳಿಗೆ ಯಾವುದೇ ರೀತಿಯ ಶಾರೀರಿಕ ಕಾಯಿಲೆ ಇಲ್ಲ ಎಂದು ಅರಿತಿದ್ದನು. ಎಲ್ಲಾ ವಿಷಯವನ್ನು ಪಾಪ ಮುಚ್ಚುಮರೆ ಇಲ್ಲದೆ ತನ್ನ ಅಣ್ಣ ಮಹೇಶನಿಗೆ ಹೇಳುತ್ತಿದ್ದವಳು, ತನ್ನ ಚಿಂತೆಯ ವಿಷಯವನ್ನು ಹೇಳದೇ ತನ್ನಷ್ಟಕ್ಕೆ ತಾನೇ ಕೊರಗುವಳು. ಅವಳನ್ನೇ ನೇರವಾಗಿ ತನ್ನ ನೋವನ್ನು ಹೇಳೆಂದು ಕೇಳುವುದು ಹೇಗೆಂದು ಯೋಚಿಸುತ್ತಿದ್ದ. ಪಾಪ ಗಂಡನಿಗೆ ಬರೆದ ಪತ್ರಗಳೊಂದಕ್ಕೂ ಪ್ರತ್ಯುತ್ತರವಿಲ್ಲ. ಅವನ ಔದಾಸೀನ್ಯವೇ ಪಾಪಳ ಮನೋವ್ಯಥೆಗೆ ಕಾರಣವೆಂದು ಅರಿತಿದ್ದ. ಅವಳಿಂದಾಗಿ ಯಾವಾಗಲೂ "ಮನೆ ನಗು, ಆನಂದ, ಉತ್ಸಾಹಗಳಿಂದ ತುಂಬಿ ತುಳುಕುತ್ತಿದ್ದ ಆ ನಮ್ಮ ಮೊದಲಿನ ಜೀವನ ಹೊರಟೇ ಹೋಯ್ತು". ಅಂತೂ ಎರಡು ವರ್ಷಗಳು ಕಳೆದವು. ಎರಡು ವರ್ಷಗಳ ತರುವಾಯ ಪಾಪಳ ಗಂಡ ಉಚ್ಚಶ್ರೇಣಿಯಲ್ಲಿ ಉತ್ತೀರ್ಣನಾಗಿ ಸ್ವದೇಶಕ್ಕೆ ಮರಳಿದ. ಅಂದಿನ ದಿನ ಮನೆಯವರಿಗೆಲ್ಲಾ ಖುಷಿ. ಪಾಪಳ ಮುಖದ ಮೇಲೂ ನಗೆ ಮೂಡಿತ್ತು. ತಂದೆ ಹಾಗೂ ಮಹೇಶ ಅವನನ್ನು ಕರೆತರಲು ಸ್ಟೇಷನ್ನಿಗೆ ಹೋದರೂ, ಆದರೆ ಅವನು ಬಂದಿರಲಿಲ್ಲ. ಅವನು ಸ್ವದೇಶಕ್ಕೆ ಬಂದರೂ ಮನೆಗೆ ಬಾರದೆ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ ನಿಯೋಜಿತನಾಗಿರುವ ವಿಷಯವನ್ನು ಪೇಪರ್ ನೋಡಿ ತಿಳಿಯಿತು. ಪಾಪಳ ತಂದೆ ಅವನಿಗೆ ಹೆಂಡತಿಯನ್ನು ಕರೆದುಕೊಂಡು ಹೋಗೆಂದು ಬರೆದ ಪತ್ರಕ್ಕೆ ಈಗ ಸಮಯವಿಲ್ಲ. ಮುಂದಿನ ರಜೆಯಲ್ಲಿ ಬರಲು ಪ್ರಯತ್ನಿಸುತ್ತೇನೆ ಎಂಬ ಉತ್ತರ ಅವನಿಂದ ಬಂತು. ಆ ಕಾಗದ ಪಾಪಳ ತಂದೆಯ ಮೇಲೆ ಎಲೆಕ್ಟ್ರಿಕ್ ಶಾಕ್‌ನಂತಹ ಪರಿಣಾಮವನ್ನುಂಟು ಮಾಡಿತು. ತನ್ನ ಹೆಂಡತಿ ಸತ್ತಾಗಲೂ ಸಹ ಅವರ ಮುಖ ಹಾಗಿರಲಿಲ್ಲ. ತಂದೆ-ತಾಯಿಯರಿಲ್ಲದ ತಬ್ಬಲಿಯನ್ನು ಸಾಕಿ ವಿದ್ಯಾವಂತ ಮನುಷ್ಯನನ್ನಾಗಿ ಮಾಡಿ, ತಮ್ಮ ಪ್ರೀತಿಯ ಮಗಳನ್ನು ಕೊಟ್ಟು ಪುರಸ್ಕರಿಸಿದವರಿಗೆ ಈ ರೀತಿಯ ಪ್ರತಿಫಲ ಸಿಗುವುದೆಂದು ಅವರು ಕನಸಿನಲ್ಲಿಯೂ ಸಹ ಎಣಿಸಿರಲಿಲ್ಲ.

ತುಂಬಾ ಪ್ರೀತಿಸುತ್ತಿದ್ದ ಪಾಪಳನ್ನು ನೆನೆಸಿಕೊಂಡು "ಎಂದೂ ಅಳದಿದ್ದ ನಾನು ಆ ದಿನ ಚಿಕ್ಕ ಮಕ್ಕಳಂತೆ ಬಿಕ್ಕಿ ಬಿಕ್ಕಿ ಅತ್ತೆ. ತಲೆ ತಲೆ ಹೊಡೆದುಕೊಂಡೆ. ಅವಳ ಗಂಡನನ್ನು ಕೊಂದೇ ಬಿಡುತ್ತೇನೆ ಎಂದು ಕೊಂಡೆ".[೨] ಪಾಪ ಮಾತ್ರ ಆ ಕಾಗದ ನೋಡಿ ಆಶ್ಚರ್ಯವೇನೂ ಆಗಲಿಲ್ಲ. ಆದರೆ ಮಹೇಶ ತನ್ನ ತಂಗಿ ಎಲ್ಲಾದರೂ ಆತ್ಮಹತ್ಯೆ ಮಾಡಿಕೊಂಡರೆ ಹೇಗೆ ಎಂದೂ ಭಾವಿಸಿ ಅವಳ ಹಿಂದೆಯೇ ಇರುತ್ತಿದ್ದ ಮಹೇಶ ಅವಳ ಹಿಂದೆ ಇರುವುದನ್ನು ಕಂಡು 'ಏನಣ್ಣಾ, ಎಲ್ಲಾದರೂ ಬಾವಿಗೀವಿ ಬಿದ್ದು ಬಿಟ್ಟೇನು ಅಂತ ಭಯವೇನೋ?' ಎಂದು ಒಣ ನಗುನಕ್ಕಳು. 'ಹಾಗೇನೂ ಇಲ್ಲ ಪಾಪ ನೀನೊಬ್ಬಳೇ ಇದ್ದರೆ ಸುಮ್ಮನೆ ಆ ವಿಷಯದ ಬಗ್ಗೆ ಚಿಂತಿಸಿ ನೊಂದುಕೊಳ್ಳುವೆ' ಎಂದು ಹೇಳಿದರೆ ಅಷ್ಟರಲ್ಲಿ ಪಾಪ "ನೊಂದರೇ ಏನು ಬಂತು, ಹಾಗೇನಾದರೂ ಫಲ ಸಿಗುವುದಾಗಿದ್ದರೆ, ಈ ಎರಡು ವರ್ಷಗಳಲ್ಲಿ ಸಿಗಬೇಕಾಗಿತ್ತು" ಎಂದಳು. ಅದೂವರೆಗೂ ತನ್ನ ಕೊರಗಿಗೆ ಕಾರಣವಾದ ವಿಷಯವನ್ನು ಯಾರ ಬಳಿಯೂ ಹೇಳದಿದ್ದ ಪಾಪ ಅಂದು ತನ್ನ ಅಣ್ಣ ಮಹೇಶನಿಗೆ ಹೇಳುವಳು. ಪಾಪಳನ್ನು ಮದುವೆಯಾದ ಗಂಡು ಆಕೆಯನ್ನು ಮದುವೆಯಾದದ್ದೇ ಇಂಗ್ಲೆಂಡಿಗೆ ಹೋಗಬೇಕೆಂದು, ಆತನ ಖರ್ಚನ್ನೆಲ್ಲಾ ಮಾವ ಹೊತ್ತಿರುವುದರಿಂದ ಆತನ ಓದಿಗೆ ಸುಲಭದ ದಾರಿಯಾಯಿತೆಂದೂ ಭಾವಿಸಿ ಆಕೆಯೊಡನೆ ವಿವಾಹವಾದ.

ಕಾರಣವಿರಲಿ ಇಲ್ಲದಿರಲಿ ನಮ್ಮ ಸಮಾಜದಲ್ಲಿ ಪತಿಯಿಂದ ತಿರಸ್ಕೃತೆಯಾದ ಹೆಣ್ಣು ಎಂದರೆ ಎಲ್ಲರಿಗೂ ಸಂಶಯ. ಸಮಾಜದ ಕ್ರೂರ ನಾಲಗೆ ಪಾಪಳನ್ನು ಟೀಕಿಸದೇ ಇರಲಿಲ್ಲ. ಪಾಪ ತನ್ನ ಅಣ್ಣ ಮಹೇಶನಿಗೆ ಅವನ ಬಳಿ ಕರೆದುಕೊಂಡು ಹೋಗಿ ಅಲ್ಲಿ ಬಿಡುವಂತೆ ಹೇಳಿದಳು. ಆಕೆಯ ಮಾತುಗಳಿಂದ ಆಶ್ಚರ್ಯಗೊಂಡ ಮಹೇಶ "ಪಾಪಳನ್ನು ಒತ್ತಾಯದಿಂದ ಅವನೆಡೆಗೆ ನೂಕುವುದೇ! ಎಲ್ಲಾದರೂ ಬೇಕು ಬೇಕೆಂತಲೇ ನರಕಕ್ಕೆ ನೂಕುವುದೇ ಅವನಿಗವಳು ಬೇಡವಾದರೆ, ನಮಗೇನು ಹೆಚ್ಚಾಗಿರಲಿಲ್ಲ"[೩] ಎನ್ನುವನು. ತಂಗಿಯ ಹಠವೇ ಕೊನೆಗೆ ಜಯಸಾಧಿಸಿತು. ತಂಗಿಯ ಒತ್ತಾಯಕ್ಕೆ ಮಣಿದು ಅವಳನ್ನು ಗಂಡನ ಮನೆಗೆ ಕರೆದುಕೊಂಡು ಹೋದರೆ ಪಾಪಳ ಗಂಡ ನನಗೆ ಬುದ್ಧಿ ಬರುವ ಮೊದಲೇ ಒತ್ತಾಯದಿಂದ ಮಾಡಿದ ಮದುವೆಗೆ ನನ್ನ ಇಡೀ ಜೀವನವನ್ನೇ ಹಾಳು ಮಾಡಿಕೊಳ್ಳಲೇ? ನಿನ್ನ ತಂಗಿ ನಿಮ್ಮ ಮನೆಯಲ್ಲೇ ಇರಲಿ. ಅವಳ ಖರ್ಚನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದ. ಅಷ್ಟು ಹೊತ್ತೂ ತಡೆದುಕೊಂಡಿದ್ದಂತಹ ಕೋಪವನ್ನು ಮಹೇಶ ಪಾಪಳ ಖರ್ಚನ್ನು ಪೂರೈಸಲಾರದೆ ಅವಳನ್ನಿಲ್ಲಿ ಬಿಡಲು ಕರೆತರಲಿಲ್ಲ. ನಿನಗೆ ಅವಳು ಬೇಡವಾದರೆ, ಅವಳ ಹಣದಿಂದ ವಿದ್ಯೆಗಳಿಸಿ ಸಂಪಾದಿಸಿದ ನಿನ್ನ ಹಣವೂ ಅವಳಿಗೆ ಬೇಡ ಎಂದೂ, 'ಬಾ ಪಾಪ, ಇಲ್ಲಿ ನಮಗಿನ್ನೇನು ಕೆಲಸ?' ಎಂದು ಹೇಳಿ ತಂಗಿಯ ಕೈಯನ್ನು ಹಿಡಿದು ಹೊರಟ. ಪಾಪ ತನ್ನ ಅಣ್ಣನ ಕೈಯನ್ನು ಕೊಸರಿ ಬಿಡಿಸಿಕೊಂಡು ಅವನ ಕಾಲಿಗೆ ಬಿದ್ದು ಹೆಂಡತಿಯಾಗಿಯಿಲ್ಲದಿದ್ದರೂ ಸೇವಕಿಯಾಗಿ ಇರಲು ಸ್ಥಳ ಕೊಡಿ ಎಂದು ಬೇಡಿದಳು. ಇವಳ ಪ್ರಾರ್ಥನೆಗೆ ಕಲ್ಲು ಹೃದಯ ಕರಗುವ ಮೊದಲೇ ಅಲ್ಲಿ ಟೆನ್ನಿಸ್ ರಾಕೇಟ್ ಹಿಡಿದು ಬಂದ ನವೀನ ಉಡುಗೆ ತೊಡುಗೆಯ ಹೆಣ್ಣನ್ನು ತೋರಿಸಿ 'ಮಹೇಶ, ಇವಳು ನನ್ನ ಹೆಂಡತಿ

ಮಾಲತಿ' ಎಂದಾಗ ಭ್ರಾಂತಳಾದ ಪಾಪ ಹಿಂತಿರುಗಿ ಸಹ ನೋಡದೆ ಹೊರಗೆ ನಡೆದಳು. ಮಹೇಶ ಮರುಮಾತಾಡದೆ ಮುಗ್ಧನಾಗಿ ಅವಳನ್ನು ಹಿಂಬಾಲಿಸಿದ.

ಈ ಘಟನೆಯ ಆಘಾತದಿಂದ ಹೊರಬರಲು ಪಾಪಳಿಗೆ ಮೂರು ವರ್ಷಗಳೇ ಬೇಕಾದವು. ತನ್ನ ದುಃಖವನ್ನು ಯಾರಿಗೂ ತೋರಗೊಡದೆ, ಗಂಡನಿದ್ದರೂ ವಿಧವೆಯಂತೆ ಜೀವನ ಸಾಗಿಸುತ್ತಿದ್ದ ಪ್ರೀತಿಯ ಮಗಳ ಅವಸ್ಥೆ ಕಂಡು ಕೊರಗಿ ಕೊರಗಿ ಪಾಪಳ ತಂದೆ ಹಾಗೂ ಚಿಕ್ಕಮ್ಮ ಇಬ್ಬರೂ ತೀರಿ ಹೋದರು. ಪಾಪ ನೋಡಲು ಸುಂದರಿಯಲ್ಲ. ಆದರೆ ಎಲ್ಲರಂತೆ ಇದ್ದಾಳೆ. ಆಕೆಯ ಬುದ್ಧಿ, ಗುಣ, ನಡತೆಗಳಲ್ಲಿ ಅವಳನ್ನು ಸರಿಗಟ್ಟುವವರು ಅಪರೂಪ. ತನ್ನಿಂದಾಗಿ ತನ್ನ ಮನೆಯವರು ನೊಂದುಕೊಳ್ಳಬಾರದೆಂದು ತನ್ನ ದುಃಖ ಮರೆತು ಮನೆಯಲ್ಲಿ ಓಡಾಡುತ್ತಿದ್ದಳು. ಗೌರಮ್ಮ ಇಲ್ಲಿ ಶಾರೀರಿಕ ಸೌಂದರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡದೆ ಮಾನವೀಯತೆಗೆ ಹೆಚ್ಚು ಬೆಲೆ ಕೊಟ್ಟಿರುವರು. ಪಾಪಳ ಗಂಡನ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಾಲಕ್ಕೆ ಆಸ್ತಿಯೆಲ್ಲ ಮಾರಾಟವಾಯಿತು. ಸಮಾಜದ ಟೀಕೆಗಳಿಂದ ಪಾರಾಗಲೂ ಅವರು ತಮ್ಮ ಊರನ್ನು ಬಿಡಬೇಕೆಂದು ನಿರ್ಧರಿಸಿದರು. ಊರನ್ನು ಬಿಡುವ ಹಿಂದಿನ ದಿನ ಸಾರ್ವಜನಿಕರ ಸಭೆಯೊಂದರಲ್ಲಿ "ವಂದೇ ಮಾತರಂ" ಹಾಡುವ ಹುಡುಗಿ ಬಾರದೇ ಇದ್ದದ್ದರಿಂದ ಪಾಪ ಆ 'ವಂದೇ ಮಾತರಂ' ಹಾಡನ್ನು ಹಾಡಿದಳು. ಆ ಒಂದು ಘಟನೆ ಪಾಪಳ ಜೀವನವನ್ನೇ ಸಂಪೂರ್ಣವಾಗಿ ಮಾರ್ಪಡಿಸಿ ಸುಪ್ರಸಿದ್ಧ ಸಿನಿಮಾ ನಟಿ ಮಿಸ್ ಅರುಣಾದೇವಿ ಆಗುವಂತೆ ಮಾಡಿತು. ಇಡೀ ಭಾರತದ ಮೂಲೆ ಮೂಲೆಗಳಲ್ಲಿ ಸಹ ಅವಳ ಸ್ವರ್ಗೀಯ ಸಂಗೀತ ಕೇಳದ, ಅವಳ ಆ ಅಪೂರ್ವ ನಟನೆಯನ್ನು ನೋಡದ ಜನರಿಲ್ಲ. ಜನರ ದೃಷ್ಟಿಯಲ್ಲಿ ಅವಳು ಸುಖಿಯಾಗಿದ್ದರೂ, ಅವಳಿಗೆ ಸುಖವಾಗಲೀ, ಶಾಂತಿಯಾಗಲಿ ಇಲ್ಲ. ಈಗವಳ ಸುಖವೆಂದರೆ ಅಣ್ಣನ ಶಿಕ್ಷಣ. ಮೊದಲೇ ಗಂಡನಿಂದ ಪರಿತ್ಯಕ್ತೆ ಯಾಗಿದ್ದ ಪಾಪ. ಈಗ ಸಿನಿಮಾ ನಟಿ! ಜನರ ದೃಷ್ಟಿಯಲ್ಲಿ ಸಿನಿಮಾ ನಟಿ ಎಂದರೇ ಚರಿತ್ರಹೀನರು ಎಂದಾಗಿದ್ದು ಇದಕ್ಕಿಂತಲೂ ಆಕೆಯ ಜೀವನಕ್ಕೆ ಇನ್ನಾವುದಾದರೂ ದೊಡ್ಡ ಶಿಕ್ಷೆ ಬೇಕೆ? ಎನ್ನುವಂತಹ ಪ್ರಶ್ನೆಯನ್ನು ಮಹೇಶ ಓದುಗರ ಮುಂದಿಡುವನು.

ಹೀಗೆ ಕೀಳು ಚರಿತ್ರೆಯ ಹೆಣ್ಣೆಂಬ ಹಣೆಪಟ್ಟಿ ಹೊತ್ತಿರುವಂತಹ ಕಥಾನಾಯಕಿ ದುಡ್ಡಿನ ಮೇಲಿನ ಆಸೆಯಿಂದಾಗಿ ಮದುವೆಯಾದ ಗಂಡನಿಂದ ಅವಳ ಜೀವನ ದುರಂತವಾಗುವುದನ್ನು ಈ ಕಥೆಯಲ್ಲಿ ಕಾಣುತ್ತೇವೆ. ಈ ಕಥೆ ವರದಕ್ಷಿಣೆಯ ಇನ್ನೊಂದು ಬಗೆಯ ಚಿತ್ರಣವನ್ನು ನೀಡುತ್ತದೆ. ಇಬ್ಬರು ಸ್ನೇಹಿತರ ಪತ್ರಗಳ ಮೂಲಕ ಆರಂಭವಾಗುವ ಈ ಕಥೆಯಲ್ಲಿ ಕಥಾನಾಯಕಿ ದುರಂತಕ್ಕೆ ಒಳಗಾದರೂ ಸಹ ಜೀವನದ ಬಗ್ಗೆ ಜಿಗುಪ್ಸೆಯ ನಿಲುವು ತಾಳದೆ ಯಾರ ಹಂಗೂ ಇಲ್ಲದೆ ಸ್ವತಂತ್ರವಾಗಿ ಬದುಕುವ ಛಲ ತೊಟ್ಟಿರುವುದನ್ನು ಇಲ್ಲಿ ಗಮನಿಸಬಹುದು. ಈ ಕಥೆಯಲ್ಲಿ ಗೌರಮ್ಮನವರು ವರದಕ್ಷಿಣೆಯ ಆಸೆಗೆ ಒಳಗಾಗಿರುವ ಒಬ್ಬ ಯುವಕನಿಂದ ಒಬ್ಬ ಮುಗ್ಧ ಹೆಣ್ಣಿನ ಜೀವನ ದುರಂತಮಯ ವಾಗಿರುವುದನ್ನು ಸಮರ್ಥವಾಗಿ ಈ ಕಥೆಯಲ್ಲಿ ಎತ್ತಿಹಿಡಿದ್ದಾರೆ. ಗೌರಮ್ಮನವರು ಪಾಪಳ ಪಾತ್ರದ ಮುಖಾಂತರ ಒಬ್ಬ ಮಹಿಳೆಯ ಮನಸ್ಸಿನ ತುಡಿತಗಳನ್ನು ಕೊನೆಗೆ ಆಕೆಯ ಜೀವನದ

ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದ್ದಾರೆ. ಅದೇ ರೀತಿ ಮಹೇಶನ ಪಾತ್ರದ ಮೂಲಕ ಉತ್ತಮ ಗಂಡಿನ ರೀತಿ ನೀತಿಗಳನ್ನು ವಸಂತನ ಪಾತ್ರದ ಮುಖೇನ ಯಾವುದೇ ವಿಷಯವಾದರೂ ಕೂಡ ತಿಳಿಯದೇ ಮಾತನಾಡಬಾರದು ಎಂಬುದನ್ನು ತಿಳಿಸಿರುವರು. ಕೊನೆಗೆ 'ಯಾರು'? ಎಂಬ ಶೀರ್ಷಿಕೆಯ ಮೂಲಕ ಗೌರಮ್ಮನವರು ಹೆಣ್ಣಿನ ಪರಿಸ್ಥಿತಿಗೆ ಮುಖ್ಯವಾಗಿ ಯಾರು ಹೊಣೆ ಎನ್ನುವುದನ್ನು ಓದುಗರಿಗೆ ಪ್ರಶ್ನೆಯಾಗಿ ನೀಡುತ್ತಾರೆ. ಅದೇ ಅವರ ಕಥೆಯ ಪ್ರಧಾನ ಆಶಯವೂ ಸಹ ಆಗಿದೆ. ಕೊಡಗಿನ ಗೌರಮ್ಮನವರ 'ಮರದಗೊಂಬೆ' ಕಥೆಯು ಶಾಲೆಯಲ್ಲಿನ ಗೆಳತಿಯರ ಒಡನಾಟ ಮತ್ತವರ ಹಾಸ್ಟೆಲ್‌ನ ನಿಯಮಬದ್ಧ ವಾತಾವರಣದಲ್ಲೂ ತುಂಟತನದ ಅಲೆ ಎಬ್ಬಿಸಿ, ಅಂತಿಮವಾಗಿ ಅವರ ಜೀವನವನ್ನು ಸುಖಾಂತಗೊಳಿಸಿದ ಬಗೆಯನ್ನು ನವಿರಾದ ಚೇಷ್ಟೆ ಹಾಸ್ಯದೊಂದಿಗೆ ನಿರೂಪಿಸುವ ಕಥಾನಕವಾಗಿದೆ.

ಕಥೆಯ ಕೇಂದ್ರಬಿಂದು ಶೈಲೆ, ಸೀತೆಯು ಕಥೆಯ ನಿರೂಪಕಿಯಾಗಿದ್ದು ತನ್ನ ಗೆಳತಿಯ ತುಂಟಾಟ ಗಳನ್ನು ಅವಳ ವ್ಯಕ್ತಿತ್ವವನ್ನು ನಿರೂಪಿಸಿರುವಳು. ಹಳ್ಳಿ ಹುಡುಗಿ ಸೀತೆ ಬೋರ್ಡಿಂಗ್‌ನಲ್ಲಿದ್ದು ಪಟ್ಟಣದ ಶಾಲೆಯಲ್ಲಿ ಕಲಿಯುವಂಥ ಸಂದರ್ಭ ಬಂದಿತು. ಹಳ್ಳಿಗುಗ್ಗು ಎಂದು ತಮಾಷೆ ಮಾಡುತ್ತಿದ್ದ ಹುಡುಗಿಯರಿಂದಾಗಿ ಮತ್ತು ಇಂಗ್ಲೀಷ್ ಬರದೆ ಕೀಳರಿಮೆಯನ್ನು ಹೊಂದಿದ್ದ ಸೀತೆಗೆ ಯಾರೂ ಸ್ನೇಹಿತರಿರಲಿಲ್ಲ. ಇಂಥ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ಸ್ಕೂಲಿಗೆ ಹೋಗದೆ ತಲೆನೋವೆಂದು ಹೇಳಿ ರೂಮಿನಲ್ಲಿ ಕುಳಿತು ಅಳುತ್ತಿದ್ದಳು. ಶೈಲೆ ಶಾಲೆಯಲ್ಲಿ ತನ್ನ ತುಂಟಾಟಗಳ ಮೂಲಕ ಹೆಸರುವಾಸಿ ಯಾದವಳು. 'ಆಕೆ ಎಲ್ಲರ ಇದಿರಿನಲ್ಲೇ ಉಪಾಧ್ಯಾಯಿನಿ ಕೂಡುವ ಕುರ್ಚಿಯ ಮೇಲೆ ಸೂಜಿಯ ನ್ನಿಟ್ಟಿದ್ದರೂ ಶೈಲೆ ಆ ರೀತಿ ಮಾಡಿರುವಳೆಂದೂ ಯಾರು ಹೇಳುತ್ತಿರಲಿಲ್ಲ'. ಪ್ರತಿಯೊಬ್ಬ ಗುರುವಿಗೆ ಒಂದೊಂದು ಹೆಸರಿಡುವುದು ಅವಳ ರೂಢಿಯಾಗಿತ್ತು. ಆಕೆಯೆಂದರೆ ಪ್ರತಿಯೊಬ್ಬರಿಗೂ ಪ್ರೀತಿ, ಶಾಲೆಯಲ್ಲಿನ ಸ್ನೇಹಿತೆಯರನ್ನೆಲ್ಲ ನಗಿಸುತ್ತ ತಾನು ನಕ್ಕು ಸಂತೋಷಪಡುವಂತಹ ವ್ಯಕ್ತಿತ್ವವುಳ್ಳವಳು. ಅವಳು ಓದಿನಲ್ಲಿ ಮುಂದಿದ್ದರೂ, ಆಕೆಗೆ ಪಾಠಕ್ಕಿಂತ ಆಟದಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದವಳು. ಶೈಲೆ ಪಾಠದಲ್ಲಿ ಹಿಂದಾದರೂ ಆಟದಲ್ಲಿಯೂ ತಂಟೆ ಮಾಡುವುದರಲ್ಲಿಯೂ ಮುಂದಾಳು. ಅವಳನ್ನು ಹುಡುಗಿಯರು ಕ್ಲಾಸಿನಲ್ಲಿ ಹಾಸ್ಯ ಮಾಡುತ್ತಿದ್ದರೂ ಹೊರಗೆ ಹೊರಟ ಮೇಲೆ ಅವಳಿಗೆ ಎಲ್ಲರೂ ಹೆದರುತ್ತಿದ್ದರು.”[9] ಶೈಲೆ ಕೇವಲ ತುಂಟಿ ಮಾತ್ರ ಆಗಿರಲಿಲ್ಲ. ಜೊತೆಗೆ ಮಾನವೀಯತೆ, ಅಂತಃ ಕರಣವುಳ್ಳ ವ್ಯಕ್ತಿತ್ವವೂ ಅವಳದಾಗಿತ್ತು. ಶೈಲೆಯ ಈ ಗುಣಗಳು ಸೀತೆಗೆ ಬಹಳ ಇಷ್ಟವಾಗಿದ್ದವು. ಏಕೆಂದರೆ ತನ್ನ ವಿಷಯದಲ್ಲಿ ಆಕೆಯು ತೋರಿದ ಪ್ರೀತಿ ವಾತ್ಸಲ್ಯಗಳು ಶಾಲೆಯನ್ನು ಬಿಟ್ಟು ಹೋಗಬೇಕೆಂದಿದ್ದ ಅವಳಲ್ಲಿ ಧೈರ್ಯವನ್ನು, ಆತ್ಮವಿಶ್ವಾಸವನ್ನು ತುಂಬಿದ್ದವು.

ಸೀತೆ ಹಳ್ಳಿಯಿಂದ ನಗರಕ್ಕೆ ಓದಲು ಬಂದಾಗ ಹಲವಾರು ಸಮಸ್ಯೆಗಳನ್ನು ಎದುರಿಸುವ ಸಂದರ್ಭ ಬಂದಿತು. ಪಟ್ಟಣದ ಕೆಲವು ಆಚಾರ-ವ್ಯವಹಾರಗಳಿಗೆ ಆಕೆ ತನ್ನನ್ನು ಹೊಂದಿಸಿಕೊಳ್ಳಲಿಕ್ಕೆ ಕಷ್ಟವಾಯಿತು. ಪಟ್ಟಣದ ಹುಡುಗಿಯರಂತೆ ಚೆನ್ನಾಗಿ ತಲೆ ಬಾಚಿಕೊಳ್ಳಲು ಬರುತ್ತಿರಲಿಲ್ಲ. ಸೀತೆ ತೊಡುತ್ತಿದ್ದ ಬಟ್ಟೆಗಳು ಹಳೆಯ ಹಳ್ಳಿಯ ಮಾದರಿಯವು. ಹೀಗಾಗಿ ಆಕೆಯ ಇತರೆ ಗೆಳತಿಯರೆಲ್ಲಾರೂ

ಇವಳನ್ನು ಹಳ್ಳಿಗುಗ್ಗು ಎಂದು ಚೇಡಿಸುತ್ತಿದ್ದರು. ಬೋರ್ಡಿಂಗ್‌ನಲ್ಲಿ ಈ ವ್ಯವಸ್ಥೆಯಾದರೆ, ಇನ್ನೂ ಶಾಲೆಯಲ್ಲಿ ಇಂಗ್ಲೀಷ್ ಬರದ ಕಾರಣ ಉಪಾಧ್ಯಾಯಿನಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗದೆ ತರಗತಿಯ ಬಗ್ಗೆ ಆಕೆಗೆ ನಿರಾಸಕ್ತಿ ಮೂಡಿತು. ಹಳ್ಳಿಗಳ ಶಾಲೆಯಲ್ಲಿ ಇಂಗ್ಲೀಷ್ ಬಳಕೆ ಕಡಿಮೆಯಿದ್ದುದರಿಂದ ಪಟ್ಟಣದಲ್ಲಿ ಗೆಳತಿಯರೊಡನೆ ಇಂಗ್ಲೀಷ್‌ನಲ್ಲಿ ಮಾತನಾಡುವುದಾಗಲೀ, ಉಪಾಧ್ಯಾಯಿನಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದಾಗಲೀ ಆಕೆಯಿಂದ ಸಾಧ್ಯವಾಗುತ್ತಿರಲಿಲ್ಲ. ಆಕೆಗೆ ಒಂದು ಬಗೆಯ ಕೀಳರಿಮೆಯ ಭಾವನೆ ಆವರಿಸಿತು. ತನಗಾಗುತ್ತಿರುವ ತೊಂದರೆಯನ್ನು ಯಾರೊಟ್ಟಿಗೂ ಹೇಳಲಾಗದೇ ರೂಮಿನಲ್ಲಿ ತಾನೊಬ್ಬಳೆ ಅಳುತ್ತಿದ್ದಾಗ, ಅದನ್ನು ಗಮನಿಸಿದ ಶೈಲೆ ಅವಳಿಗೆ ಧೈರ್ಯ ಹೇಳಿ ಶಾಲೆಗೆ ಹೊಂದಿಕೊಳ್ಳುವ ಹಾಗೇ ಮಾಡಿದಳು. ಇಂಗ್ಲೀಷ್ ಬಗ್ಗೆ ಅವಳಲ್ಲಿದ್ದಂತಹ ಭಯವನ್ನು ದೂರ ಮಾಡಿ ಆಕೆಯಲ್ಲಿ ಆತ್ಮವಿಶ್ವಾಸವನ್ನು ತುಂಬಿದಳು. ಅಂದಿನಿಂದ ಇತರೆ ಹುಡುಗಿಯರೆಲ್ಲ ಅವಳ ಸ್ನೇಹ ಮಾಡಿದರು. ಶೈಲೆಯ ಸ್ನೇಹದಿಂದ ಸೀತೆಗೆ "ಮೊದಲಿನಂತೀಗ ನನಗೆ ಬೇಸರವಾಗುತ್ತಿರಲಿಲ್ಲ. ಶೈಲೆಯ ಸ್ನೇಹವಾದ ಬಳಿಕ ಹುಡುಗಿಯರು ನನ್ನಲ್ಲಿ ಪ್ರೀತಿಯಿಂದ ವರ್ತಿಸುತ್ತಿದ್ದರು. ಕಷ್ಟಪಟ್ಟು ಇಂಗ್ಲೀಷಿನಲ್ಲಿ ಹೆಚ್ಚಿನ ಜ್ಞಾನವನ್ನು ಪಡೆದಿದ್ದೆ. ಶಾಲೆ ಸುಖಮಯವಾಗಿ ತೋರಿತು"[೫] ಎಂದು ಹೇಳುವಳು.

ಒಂದು ದಿನ ಉಪಾಧ್ಯಾಯಿನಿ ಹೊರಗೆ ಹೋದಾಗ ಶೈಲೆ ಹಾಗೂ ಅವಳ ಗೆಳತಿಯರೆಲ್ಲರೂ ಓದುವುದನ್ನು ಬಿಟ್ಟು ಮಾತನಾಡತೊಡಗಿದರು. ಅವರು ಮಾತನಾಡುತ್ತಿದ್ದದ್ದು ಕಂಡು ಉಪಾಧ್ಯಾಯಿನಿ ಅವರಿಗೆ ಒಂದು ದಿನದ ಉಪವಾಸದ ಶಿಕ್ಷೆಯನ್ನು ವಿಧಿಸಿದರು. ಸಾಯಂಕಾಲದವರೆಗೂ ಹಸಿವೆಯನ್ನು ತಡೆದುಕೊಂಡಿದ್ದರು. ನಂತರ ಶೈಲೆ ತನ್ನ ಗೆಳತಿಯರ ಅಳುಮೊರೆಯನ್ನು ಕಂಡು ತನ್ನಿಂದಾಗಿ ತನ್ನ ಗೆಳತಿಯರೆಲ್ಲರೂ ಹಸಿವಿನಿಂದ ಬಳಲಬೇಕಾಯಿತಲ್ಲ ಎಂದು ನೊಂದುಕೊಂಡಳು. ಕೊನೆಗೆ ರಾತ್ರಿ ವೇಳೆಗೆ ಯಾರಿಗೂ ಗೊತ್ತಾಗದಂತೆ ಧೈರ್ಯದಿಂದ ಕಿಟಕಿಯಿಂದ ಸೀರೆಯನ್ನು ಕಟ್ಟಿ ಕೆಳಗಿಳಿದು ಪೇಟೆಗೆ ಹೋಗಿ ತಿಂಡಿಯನ್ನು ತಂದು ತನ್ನ ಸ್ನೇಹಿತರೆಲ್ಲರ ಹೊಟ್ಟೆಯನ್ನು ತುಂಬಿಸಿದಳು. ನಂತರ ಪೇಟೆಗೆ ಹೋಗುವಾಗ ನಡೆದ ಘಟನೆಯನ್ನು ತನ್ನ ಸ್ನೇಹಿತರಿಗೆ ಹೇಳಿದಳು. ಹಿಂದೆ ಬಿದ್ದ ಕುಡುಕರಿಂದ ಪಾರು ಮಾಡಿದ ವ್ಯಕ್ತಿಯೊಬ್ಬ ರಾತ್ರಿ ಒಬ್ಬಳೇ ಗಂಡುಬೀರಿಯಂತೆ ಎಲ್ಲಿಗೆ ಹೋಗುತ್ತಿರುವೆ? ಎಂದು ಕೇಳಿದಾಗ ನಿಜವನ್ನೇ ಹೇಳಿದಳು. ಅವರು ಆಕೆಯನ್ನು ಸ್ಕೂಲ್‌ಗೇಟ್‌ನವರೆಗೂ ಬಂದು ಬಿಟ್ಟು ಹೋಗಿದ್ದರೂ ಅವರ್ಯಾರೆಂದು ಶೈಲಾಳಿಗೆ ತಿಳಿದಿರಲಿಲ್ಲ. ಎಲ್ಲರೂ "ಕುಡುಕರಿಂದ ಪಾರು ಮಾಡಿದ ಧೀರನನ್ನೇ ನೀನು ಮದುವೆಯಾಗಬೇಕು. ಅದೀಗ ರೋಮಾನ್ಸ್"[೬] ಎಂದು ವಿನೋದ ಎಂಬಾಕೆ ಶೈಲೆಯನ್ನು ಹಾಸ್ಯ ಮಾಡಿದಳು. ಅದಕ್ಕೆ ಶೈಲೆ 'ಅವನನ್ನು ಪತ್ತೆ ಮಾಡು ಮದುವೆಯಾಗುತ್ತೇನೆ' ಎಂದು ನಗುತ್ತಲೇ ಹೇಳಿದಳು. ಶೈಲೆಯ ಮಾತು ಕೇಳಿ ಎಲ್ಲಾ ಗೆಳತಿಯರು ನಕ್ಕರು. ಹೀಗೆಯೇ ಶೈಲಾಳ ತುಂಟತನ ಒಂದಲ್ಲಾ ಒಂದು ರೀತಿಯಿಂದ ನಡೆಯುತ್ತಲೇ ಇತ್ತು.

ಇನ್ನೊಂದು ದಿನ ಟೀಚರ್ ಬರದಿದ್ದುದನ್ನು ನೋಡಿ ಶೈಲಾಳೆ ಹೊಸ ಟೀಚರ್ ಅಂತೆ ಬಂದು, ಸಿಸ್ಟರ್ ಕ್ಲಾಸಿನಲ್ಲಿ ನಿದ್ದೆ ಮಾಡುವಾಗ ರೆವ್ಹರೆಂಡ್‌ಮದರ್ ಕ್ಲಾಸಿಗೆ ಬಂದು ಅವರನ್ನೆಚ್ಚರಿಸಿದ

ಸಂಗತಿಯ ಬಗ್ಗೆ ಉಪನ್ಯಾಸ ಬರೆಯಿರಿ ಎಂದು ಎಲ್ಲರಿಗೂ ಹೇಳಿದಳು. ಎಲ್ಲರೂ ಬರೆದದ್ದನ್ನು ನೋಡಿ, ಸೀತೆ ಬರೆದ ಉಪನ್ಯಾಸ ತುಂಬಾ ಚೆನ್ನಾಗಿದೆಯೆಂದು ಓದತೊಡಗಿದಳು. 'ಕುರ್ಚಿಯ ಮೇಲೆ ಕುಳಿತು ಗೊರಕೆ ಹೊಡೆಯುತ್ತಿದ್ದ ನಮ್ಮ ಸಿಸ್ಟರ್.....' ಎಂದು ವಾಕ್ಯ ಪೂರೈಸುವುದರಲ್ಲಿಯೇ ಅಲ್ಲಿಗೆ ಹೊಸಬರೊಂದಿಗೆ ಬಂದ ರೆವ್ವರೆಂಡ್‌ಮದರ್‌ಗೆ ಟೀಚರ್ ಇಲ್ಲದ್ದರಿಂದ ಹುಡುಗಿಯರಿಗೆ ಪಾಠ ಹೇಳುತ್ತಿದ್ದೆ ಎಂದು ಹೇಳಿದಳು ಶೈಲಾ. ಅವಳು ಬರೆಸಿದ್ದನ್ನು ಓದಿದ ಹೊಸ ಟೀಚರ್ ಬಹಳ ಚೆನ್ನಾಗಿದೆ ಎಂದು ಹೇಳಿದಾಗ ಎಲ್ಲರಿಗೂ ಅಚ್ಚರಿಯಾಯಿತು. ಶೈಲಾಳನ್ನು ಸೀತೆ ಆ ವಿಷಯವಾಗಿ ಕೇಳಿದಾಗ ಪೇಟೆಗೆ ತಿಂಡಿ ತರಲು ಹೋದಾಗ ಅವಳನ್ನು ಹಿಂಬಾಲಿಸಿದ ಕುಡುಕರಿಂದ ತಪ್ಪಿಸಿ ಶಾಲೆಗೆ ಹಿಂದಿರುಗಲು ಸಹಾಯ ಮಾಡಿದ್ದ ಕೃಷ್ಣಮೂರ್ತಿಯೇ ಅವರ ಶಾಲೆಗೆ ಕನ್ನಡ ಮತ್ತು ಗಣಿತ ಕಲಿಸುವ ಗುರುವಾಗಿ ಆಯ್ಕೆಗೊಂಡಿದ್ದು ಎನ್ನುವ ವಿಷಯವನ್ನು ತಿಳಿಸಿದಳು. ಆಗುತ್ತಿದ್ದ ಶಿಕ್ಷೆಯನ್ನು ತಪ್ಪಿಸಿದ ಕೃಷ್ಣಮೂರ್ತಿ ಹಾಗೂ ಶೈಲೆಯರ ನಡುವೆ ಒಂದು ಬಗೆಯ ಬಾಂಧವ್ಯ ಬೆಸೆದುಕೊಂಡಿತು. ಕೃಷ್ಣಮೂರ್ತಿ ಬಿ.ಎ. ಮಾಡಿ ಒಂದು ವರ್ಷ. ಈ ಸ್ಕೂಲ್‌ನಲ್ಲಿ ಕೆಲಸ ಮಾಡಿ ಮುಂದೆ ಲಾ ಮಾಡುವ ಉದ್ದೇಶವನ್ನು ಹೊಂದಿದ್ದ. ಕೃಷ್ಣಮೂರ್ತಿ ಒಳ್ಳೆಯ ಉಪಾಧ್ಯಾಯನಾಗಿದ್ದರೂ ಪಾಠ ಮಾಡುವಾಗ ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಬೋರ್ಡಿನ ಮೇಲೆ ಒಂದೆರಡು ಲೆಕ್ಕಗಳನ್ನು ಮಾಡಿ ಅದನ್ನು ಬೋರ್ಡಿನ ಕಡೆಯೇ ಮುಖ ಮಾಡಿ ಹೇಳಿಕೊಟ್ಟು ಅದರಂತೆ ಉಳಿದ ಲೆಕ್ಕಗಳನ್ನು ಮಾಡಲು ಹೇಳಿ ಕುಳಿತು ಬಿಡುತ್ತಿದ್ದ. ಹಾಗೆಯೇ ಕನ್ನಡ ತರಗತಿಯಲ್ಲಿ ಪ್ರಶ್ನೆ ಕೇಳುವಾಗಲೂ ಹುಡುಗಿಯರನ್ನು ಹೆಸರಿಸಿ ಪ್ರಶ್ನೆ ಕೇಳುತ್ತಿರಲಿಲ್ಲ. ಆಗ ಯಾರು ಉತ್ತರ ಕೊಡದಿದ್ದಾಗ, 'ಇಷ್ಟು ಜನರಲ್ಲಿ ಯಾರಿಗೂ ಉತ್ತರ ಗೊತ್ತಿಲ್ಲವೇ? ಎಂತಹ ನಾಚಿಕೆಗೇಡು?' ಎಂದಾಗ ಶೈಲಾ ಎದ್ದು ನಿಂತು 'ಎಲ್ಲರಿಗೂ ಉತ್ತರ ಗೊತ್ತಿದೆ ಎಲ್ಲರೂ ಹೇಳಬೇಕೇನು?' ಎಂದಳು. "ಕೃಷ್ಣಮೂರ್ತಿಯ ಮುಖವು ಸಿಟ್ಟಿನಿಂದ ಕೆಂಪಾಯಿತು. 'ನಿಮ್ಮಲ್ಲಿ ಒಬ್ಬರು ಜವಾಬು ಕೊಡಬಾರದೇ?' ಎಂದು ಕೇಳಿದ. 'ನಮಗೆಲ್ಲರಿಗೂ ಹೆಸರಿದೆ. ಒಬ್ಬರು ಎಂದರೆ ಗೋಡೆಯೇ?' ಎಂದು ಶೈಲೆ ಜವಾಬು ಹೇಳಿದಳು. ಅದಕ್ಕವನು 'ಹಾಗಾದರೆ ಅದರ ಉತ್ತರವನ್ನು ನೀನೇ ಹೇಳು ಅಧಿಕ ಪ್ರಸಂಗಿ' ಎಂದ. 'ನನ್ನ ಹೆಸರು ಶೈಲಾ' ಎಂದು ಹೇಳಿ, ಶೈಲೆಯು ಆ ಪ್ರಶ್ನೆಗೆ ಪ್ರತ್ಯುತ್ತರವಿತ್ತಳು."[೭]

ಅಂದಿನ ಸಾಯಂಕಾಲ ಹುಡುಗಿಯರೆಲ್ಲರೂ ಶೈಲೆಯ ನೇತೃತ್ವದಲ್ಲಿ ಸಭೆ ಸೇರಿದರು. ಸಭಾಧ್ಯಕ್ಷಳಾದ ಶೈಲಾ ಕೃಷ್ಣಮೂರ್ತಿಗೆ "ಮರದ ಬೊಂಬೆ" ಎಂದು ನಾಮಕರಣ ಮಾಡಿ, ಅಂದಿನಿಂದ ಕೃಷ್ಣಮೂರ್ತಿಗೆ 'ಮರದ ಬೊಂಬೆ' ಎಂತಲೇ ಸಂಬೋಧಿಸುತ್ತಿದ್ದರು. ಯಾರೊಡನೆಯೂ ಮಾತಾಡದಿದ್ದ ಕೃಷ್ಣಮೂರ್ತಿಯ ಬಾಯಿಂದ ಮಾತು ಹೊರಡಿಸಿದ್ದಕ್ಕಾಗಿ ಎಲ್ಲರೂ ಶೈಲಾಳನ್ನು ಹೊಗಳಿದರು. ಮರದ ಬೊಂಬೆಯ ಈ ಕ್ರಮವನ್ನು ತಿದ್ದಿ ಅವನಿಗೆ ಮನುಷ್ಯ ವ್ಯವಹಾರವನ್ನು ಕಲಿಸಲು ಶೈಲಾಳೆ ಸರಿ ಎಂದು ಅಂದಿನ ಸಭೆಯಲ್ಲಿ ತೀರ್ಮಾನಿಸಿದರು. ಶೈಲೆಗೆ ಈ ಜವಾಬ್ದಾರಿಯು ಅವಳ ಜಾಣ್ಮೆಗೆ, ದಿಟ್ಟತನಕ್ಕೆ ಒಡ್ಡಿದ ಸವಾಲಾಗಿತ್ತು. ತನ್ನನ್ನು ಗಂಡುಬೀರಿ, ಅಧಿಕಪ್ರಸಂಗಿ ಎಂದೆಲ್ಲಾ ಬೈಯುತ್ತಿದ್ದ ಕೃಷ್ಣಮೂರ್ತಿಯನ್ನು ತಿದ್ದುವುದು ಅಷ್ಟು ಸುಲಭದ ಮಾತಾಗಿರಲಿಲ್ಲ. ಕೃಷ್ಣಮೂರ್ತಿ

ಯಾವಾಗಲೂ ನೋಡುತ್ತಾ ಕುಳಿತಿರುತ್ತಿದ್ದ ಪುಸ್ತಕದಲ್ಲಿ ಏನಿರಬಹುದೆಂದು ತಿಳಿಯುವ ಸಲುವಾಗಿ ಆಕೆ ಸದ್ದಾಗದಂತೆ ತನ್ನ ಪುಸ್ತಕವನ್ನು ಹಿಡಿದುಕೊಂಡು 'ಈ ಲೆಕ್ಕ ನನಗೆ ಗೊತ್ತಾಗಲಿಲ್ಲ' ಎಂದು ಹೇಳಿ ಅವನ ಕುರ್ಚಿಯ ಬಳಿ ಹೋದಳು. ಅದನ್ನು ಕಂಡು ಕೃಷ್ಣಮೂರ್ತಿ ತಾನು ಓದುತ್ತಿದ್ದಂತಹ ಪುಸ್ತಕವನ್ನು ಟೇಬಲ್ ಮೇಲಿಟ್ಟು, ಯಾವ ಲೆಕ್ಕ ಎಂದು ನೋಡತೊಡಗಿದನು. ತಕ್ಷಣ ಶೈಲಾ ಟೇಬಲ್ ಮೇಲಿರುವ ಪುಸ್ತಕ ತೆಗೆದುಕೊಂಡು ನೋಡಿದಾಗ ಶೈಲಾಳ ಮುಖ ಕೆಂಪಗಾಯಿತು. ಶೈಲಾ ಆ ಪುಸ್ತಕವನ್ನು ಮೇಜಿನ ಮೇಲಿಟ್ಟ ತಕ್ಷಣ ಅವನು ಅದನ್ನು ತನ್ನ ಜೇಬಿನಲ್ಲಿಟ್ಟು ಶೈಲಾಳ ಮುಖ ನೋಡಿದ. ಇಬ್ಬರ ಮುಖವು ಕೆಂಪಾಯಿತು. 'ಮರದ ಬೊಂಬೆ' ಮೇಲುನೋಟಕ್ಕೆ ಶೈಲೆಯನ್ನು 'ಗಂಡುಬೀರಿ, ಅಧಿಕ ಪ್ರಸಂಗಿ' ಎಂದು ಬೈದರೂ ಆಂತರ್ಯದಲ್ಲಿ ಅವಳ ಬಗ್ಗೆ ಪ್ರೀತಿಯಿತ್ತು. ಅವನು ತಾನು ದಿನಾ ಓದುವ ಪುಸ್ತಕದಲ್ಲಿ ಅವಳ ಫೋಟೋ ಇಟ್ಟುಕೊಂಡು ನೋಡುತ್ತಿದ್ದದ್ದು ತಿಳಿಯಿತು. ಇದರಿಂದಾಗಿ ಮುಂದೆ ಅವಳ ಕೆಲಸ ಸುಲಭವಾಯಿತು. ಒಂದು ದಿನ ಶೈಲಾ ಮಧ್ಯಾಹ್ನ ಎಲ್ಲರಿಗಿಂತ ಬೇಗ ಬಂದು ಉಪಾಧ್ಯಾಯರ ಕುರ್ಚಿಯ ಕೆಳಗೆ ಅಡಿಕೆಯನ್ನಿಟ್ಟು ಮರದ ಬೊಂಬೆ ಬೀಳಲು ಕಾರಣವಾದ್ದರಿಂದ "ನಾನು ಮಾಡಿದ್ದು ತಪ್ಪು" ಎಂದು ಸಾವಿರ ಸಾರಿ ಬರೆಯಲು ಕೃಷ್ಣಮೂರ್ತಿ ಹೇಳಿದನು. ಅದಕ್ಕೆ ಶೈಲಾ "ಮರದ ಬೊಂಬೆಗೆ ಮನುಷ್ಯ ವ್ಯವಹಾರವನ್ನು ಕಲಿಸುವುದು ಕಷ್ಟ"[೮] ಎಂದು ಬರೆದು ತೋರಿಸಿದಾಗ ಹಾಗೆಂದರೇನು? ಎಂದು ಕೋಪದಿಂದ ಕೇಳಿದ ಕೃಷ್ಣಮೂರ್ತಿ.

'ಬೇರೆಯವರ ಚಿತ್ರವನ್ನು ಕೇಳದೆಯೇ ತೆಗೆದಿಟ್ಟುಕೊಂಡು ನೋಡುವಾತನು ಮರದ ಬೊಂಬೆ, ಅವನನ್ನು ಮದುವೆಯಾಗಿ ಮನುಷ್ಯ ವ್ಯವಹಾರವನ್ನು ಕಲಿಸುವಳು ನಾನು" ಎಂದು ವಿವರಿಸಿದಳು ಶೈಲಾ. ಅರ್ಧಗಂಟೆಯ ನಂತರ ಕಾಯುತ್ತಿದ್ದ ಸ್ನೇಹಿತರ ಬಳಿ ಬಂದ ಶೈಲಾ 'ಬರೆದುದಾಯಿತು, ಕೆಲಸವೂ ಸಿಕ್ಕಿತು' ಎಂದಳು. ಸೀತೆ ಯಾವ ಕೆಲಸ ಎಂದು ಕೇಳಿದಾಗ ಮರದ ಬೊಂಬೆಗೆ ಮನುಷ್ಯ ವ್ಯವಹಾರ ವನ್ನು ಕಲಿಸುವ ಕೆಲಸ ಎಂದು ತಾನು ಕೈಗೊಂಡ ಕೆಲಸವನ್ನು ಪೂರ್ತಿಮಾಡಿದೆನೆನ್ನುವ ಸಂತೋಷದಿಂದ ಹೇಳಿದಳು ಶೈಲಾ. ಈ ರೀತಿಯಾಗಿ ಅವರಿಬ್ಬರ ಮನದ ಮಾತುಗಳು ಹೊರಹೊಮ್ಮಿ ಅವರಿಬ್ಬರ ನಡುವೆ ಪ್ರೇಮವಂಕುರಿಸಿ ಅವರನ್ನು ಪ್ರೇಮಿಗಳನ್ನಾಗಿಸಿತು. ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಮೆಚ್ಚಿಕೊಂಡು ಮದುವೆಯಾದರು. ಕೊನೆಗೂ ಶೈಲೆ ಸವಾಲಿನಲ್ಲಿ ವಿಜಯಿಯಾಗಿದ್ದಳು.

ಈಗ ಶೈಲಾ ಕೃಷ್ಣಮೂರ್ತಿ ಮೂರು ವರ್ಷದ ಮಗ ಪ್ರಭಾತನೊಂದಿಗೆ ಸಂತೋಷದಿಂದ ಜೀವನ ಸಾಗಿಸುತ್ತಿರುವ ಆದರ್ಶ ದಂಪತಿಗಳು. ಶೈಲಾಳನ್ನು ಮಾತಾಡಿಸಿಕೊಂಡು ಹೋಗಲು ಮಗ ವಸಂತನೊಂದಿಗೆ ಬಂದ ಸೀತೆಯನ್ನು ಅರ್ಧಗಂಟೆಯವರೆಗೂ ಕೃಷ್ಣಮೂರ್ತಿ ಮಾತಾಡಿಸಿದ್ದು ಶೈಲಾ ಮರದ ಬೊಂಬೆಗೆ ಮನುಷ್ಯ ವ್ಯವಹಾರ ಕಲಿಸಿದ್ದಕ್ಕೆ ಸಾಕ್ಷಿಯಾಗಿತ್ತು. ಮರವ ಬೊಂಬೆ ಕಥೆಯಲ್ಲಿ ಅತೀ ತುಂಟತನ ಸ್ವಭಾವವನ್ನುಳ್ಳ ಹುಡುಗಿ ಹಾಗೂ ದಿಟ್ಟ ಹುಡುಗಿಯೊಬ್ಬಳು ತುಂಟತನದಿಂದಲೇ ತನ್ನ ಜೀವನ ಸಂಗಾತಿಯನ್ನು ಪಡೆದು ಉತ್ತಮವಾದ ಗೃಹಿಣಿಯಾಗಿ ಪರಿವರ್ತನೆಗೊಳ್ಳುವ ಚಿತ್ರಣವನ್ನು ಈ ಕಥೆ ನಮಗೆ ಮುಖ್ಯವಾಗಿ ಕಟ್ಟಿಕೊಡುತ್ತದೆ. ಅದು ಕಥೆಯ ಆಶಯವು ಆಗಿದೆ.

ಮತಾಂತರದ ಸಮಸ್ಯೆ ಎನ್ನುವುದು ದುಡಿಯುವ ವರ್ಗಕ್ಕೆ ಎಂದೂ ಕಾಡಿಯೇ ಇಲ್ಲ. ಅವರಿಗೆ ಹೊಟ್ಟೆಯನ್ನು ತುಂಬಿಸುವಂತಹ ಯಾವುದೇ ಧರ್ಮವಾದರೂ ಸರಿಯೇ. ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ ಎನ್ನುವಂತಹ ವಿಷಯವನ್ನು ತಮ್ಮ ಕಥೆಯ ವಸ್ತುವನ್ನಾಗಿಟ್ಟುಕೊಂಡು ಅದರ ನೈಜ ಚಿತ್ರವನ್ನು ಗೌರಮ್ಮನವರು 'ಮುನ್ನಾದಿನ' ಕಥೆಯಲ್ಲಿ ಬಹು ಮಾರ್ಮಿಕವಾಗಿ ತೋರಿಸಿರುವುದು ಅವರ ಕಥೆಯ ಪ್ರಮುಖ ಆಶಯವಾಗಿದೆ.

ಇದು ಗೌರಮ್ಮ ಹೊಳೆಯಲ್ಲಿ ಈಜಲು ಹೋಗಿ ತಮ್ಮ ಇಹಯಾತ್ರೆ ಅಂತ್ಯಗೊಳ್ಳುವ ಮುನ್ನಾದಿನ ಬರೆದದ್ದು. ಅದಕ್ಕೆ ಅವರು ಯಾವುದೇ ರೀತಿಯ ಹೆಸರನ್ನು ಇಟ್ಟಿರಲಿಲ್ಲ. ಹಾಗಾಗಿ ಆ ಕಥೆ ಅದು ಅವರ ಸಾವಿನ ಮುನ್ನಾದಿನ ಬರೆದಿದ್ದರಿಂದ ಆ ಕಥೆ 'ಮುನ್ನಾದಿನ' ಎಂಬ ಹೆಸರನ್ನೇ ಪಡೆಯಿತು. "ಕಾರ್ಮಿಕರ ಸರಳ ಮತ್ತು ಮುಗ್ಧ ನಿರ್ಮಲ ಮನಸ್ಸಿಗೆ ಮತದ ಪ್ರಶ್ನೆ ಅಷ್ಟಾಗಿ ಮುಖ್ಯವೆನಿಸುವುದೇ ಇಲ್ಲ. ದುಡಿಯುವ ಜನರದೇ ಒಂದು ಧರ್ಮ, ಅವರಿಗೆ ಜಾತಿ, ಮತ ಇಲ್ಲ ಎಂಬ ನಿಲುವನ್ನು ಈ ಕಥೆ ಪ್ರತಿಪಾದಿಸುತ್ತದೆ" ಎನ್ನುವ ಆಧುನಿಕ ವಿಮರ್ಶಕರ ಮೆಚ್ಚುಗೆ ಅನುರೂಪವಾಗಿದೆ. ಕಾರ್ಮಿಕರ ಬದುಕಿನ ಬವಣೆಗಳು, ಅವರ ಬಡತನದ ದಾರುಣ ಸತ್ಯಗಳು ಅಂದಿನ ಕಾಲದ ಲೇಖಕಿಯರ ಕಥೆಯ ವಸ್ತುಗಳಾಗಿ ಮಾರ್ಪಾಡುಗೊಂಡವು.

ಮಹಾತ್ಮಾಗಾಂಧೀಜಿಯವರು ಹಿಂದೂ-ಮುಸ್ಲಿಂ ಐಕ್ಯತೆಯನ್ನು ಬೋಧಿಸಿದ್ದರೆ ಅದನ್ನು ಕಾರ್ಯತಃ ಆಚರಣೆಗೆ ತಂದವನು ಕಾಡಮೇಸ್ತ್ರೀ. ಅವನದು ವಿಚಿತ್ರ ಕಥೆ ಎನ್ನುವುದರ ಮೂಲಕ ಆರಂಭವಾಗುವ ಈ ಕಥೆ ಸಮಾಜದಲ್ಲಿರುವಂತಹ ಜಾತಿ ಪದ್ಧತಿಯನ್ನು ಕುರಿತು ಕಟುವಾಗಿ ಟೀಕಿಸಿದ್ದಾರೆ. ತನ್ನ ಒಂಬತ್ತನೇ ವಯಸ್ಸಿನಲ್ಲಿ ತನ್ನ ತಂದೆಯನ್ನು ಕಳೆದುಕೊಂಡ ಕಾಡ ತಾಯಿ ಪುನಃ ಮದುವೆಯಾದಾಗ ಚಿಕ್ಕಪ್ಪನೊಂದಿಗೆ ಇರಲು ಸರಿ ಬರದೆ ಮನೆಯನ್ನು ಬಿಟ್ಟು ಹೋದ. ಒಂದೆರಡು ತಿಂಗಳು ಅಲ್ಲಲ್ಲಿ ಸುತ್ತಾಡಿ ಅವರಿವರ ಮನೆಯಲ್ಲಿ ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ. ಕೊನೆಗೊಂದು ದಿನ ಸಾಲ ಕೇಳದೆ ಹಿಡಿ ಕೂಳಿಗಾಗಿ ದುಡಿಯುವ ಕಾಡನಿಗೆ ಕಾಫಿ ಎಸ್ಟೇಟ್‌ನ ಮೇಸ್ತ್ರಿಯೊಬ್ಬ ಕೆಲಸ ಕೊಟ್ಟ. ಇವನ ಚುರುಕುತನದ ಚಟುವಟಿಕೆಯಿಂದಾಗಿ ದೊರೆಯ (ಕಾಫಿ ತೋಟದ ಯುರೋಪಿಯನ್ ಪ್ಲಾಂಟರ್‌ಗೆ ದೊರೆ ಎನ್ನುತ್ತಾರೆ) ಬಂಗಲೆಯಲ್ಲಿ ನಾಯಿಗಳನ್ನು ಸಾಕುವ ಬಾಯ್ ಆಗಿ ಪರಿವರ್ತನೆಗೊಂಡ. ಕಾಡನ ಚಟುವಟಿಕೆ, ಕಾರ್ಯತತ್ಪರತೆ, ವಿನಯ ಇವುಗಳು ದೊರೆಯ ಪ್ರೀತಿಯನ್ನು ಗಳಿಸಿಕೊಡುವಲ್ಲಿ ಸಹಾಯಕವಾಯಿತು. ಇದರ ಪರಿಣಾಮವಾಗಿ ಕಾಡನಾಯಿಗಳ ಕೆಲಸದಿಂದ ವಿಮುಕ್ತನಾಗಿ ದೊರೆಯ ಸ್ವಂತ ಬಾಯ್ ಆಗಿ ನೇಮಕಗೊಂಡ. ಇಷ್ಟಲ್ಲದೆ, ದೊರೆಯ ಪ್ರೀತಿ ಕ್ರೈಸ್ತ ಧರ್ಮಕ್ಕೂ ಮತಾಂತರ ಹೊಂದುವಂತೆ ಮಾಡಿತು.

ಕಾಡ, ಜೋಸೆಫ್‌ಕಾಡ ಆಗಿ ಪರಿವರ್ತನೆಗೊಂಡ. ಜಾತಿ-ನೀತಿಗಳ ವಿಷಯದ ತಿಳಿವಳಿಕೆ ಇಲ್ಲದೆ, ಹುಟ್ಟುವುದು ಕೆಲಸ ಮಾಡಲು ಹೊಟ್ಟೆ ಹೊರೆಯಲು ಎಂಬ ಒಂದೇ ಒಂದು ಭಾವನೆಯಿಂದ

ಬೆಳೆದಂತವನಿಗೆ ತನ್ನ ಜಾತಿಯನ್ನು ತ್ಯಜಿಸಿ ವಿಧರ್ಮಿಯಾಗಬಾರದೆಂದು, ಯಾವ ಜಾತಿಯಾದರೇನು, ಯಾವ ಮತವಾದರೇನು, ಹೊಟ್ಟೆ ತುಂಬ ಅನ್ನ, ಮೈ ತುಂಬಾ ಬಟ್ಟೆ, ಜೊತೆಗೆ ತಿಂಗಳಿಗೆ ಎರಡು ರೂಪಾಯಿ ಸಂಬಳ ಬೇರೆ. ಇಷ್ಟೆಲ್ಲಾ ಸವಲತ್ತುಗಳಿರಬೇಕಾದರೆ ಜಾತಿ ನೀತಿ ಎಂದು ಸುಮ್ಮನೆ ಏಕೆ ಪೇಚಾಡಬೇಕು. ಇಂತಹ ಮುಗ್ಧ ಜೀವಿಯ ಬಾಳಿನಲ್ಲಿ ಆಗುವ ಬದಲಾವಣೆಗಳು ಮತ್ತು ಜಾತಿ-ಮತಗಳ ಯಾವುದೋ ಕಟ್ಟುಪಾಡು ಪ್ರೀತಿಗೆ ಇರಬಾರದು ಎನ್ನುವುದೇ ಈ ಕಥೆಯ ಪ್ರಮುಖ ಆಶಯವಾಗಿದೆ. ಮುಗ್ಧ ಜನರನ್ನು ಈ ಕ್ರೂರ ಸಮಾಜ ಹೇಗೆ ಜಾತಿ ಎಂಬ ಬಂಧನಕ್ಕೆ ತಳ್ಳಿಬಿಡುವುದು ಎನ್ನುವುದನ್ನು ಈ ಕಥೆ ಸೂಚಿಸುತ್ತದೆ.

ಹೀಗೆ ಜಾತಿ-ನೀತಿಯ ಗೊಡವೆ ಇಲ್ಲದೆ ಜೀವನದಲ್ಲಿ ಮುಂದುವರೆದ 'ಜೋಸೆಫ್‌ಕಾಡ' ಬದಲಾದ ಒಡೆಯನ ಕುದುರೆ ಚಾಕರಿಯಲ್ಲದೆ ತೋಟದಿಂದ ಮೂರು ಮೈಲಿ ದೂರವಿದ್ದ ಊರಿಗೆ ದಿನಕ್ಕೆರಡು ಬಾರಿ ಹೋಗಿ ಟಪ್ಪಾಲು ತರುವ ಕೆಲಸವನ್ನೂ ಅವನೇ ಮಾಡುತ್ತಿದ್ದನು. ಅವನಿಗೆ ಬೀಡಿ ಸೇದುವ ಅಭ್ಯಾಸವಿದ್ದುದರಿಂದ ಊರಿಗೆ ಹೋಗಿ ಬರುವ ದಾರಿಯ ಮಧ್ಯದಲ್ಲಿದ್ದ ಅಂಗಡಿಯಲ್ಲಿ ಬೀಡಿಕೊಳ್ಳುವಾಗ, ತೆಳ್ಳಗೆ-ಬೆಳ್ಳಗೆ ಲಕ್ಷಣವಾಗಿದ್ದ 'ಹುಸೇನ್‌ಬೀಬಿ'ಯ ರೂಪಕ್ಕೆ, ಸೌಂದರ್ಯಕ್ಕೆ ಮರುಳಾಗುತ್ತಾನೆ. ಹುಸೇನ್‌ಬೀಬಿಯು ದಿನಾ ಬೀಡಿಯ ವ್ಯಾಪಾರಕ್ಕೆ ಬರುತ್ತಿದ್ದ ಕಾಡನಿಗೆ ಬರೆ ಬೀಡಿಯನ್ನಲ್ಲದೆ ತನ್ನ ಹೃದಯವನ್ನೂ ಸಹ ಕೊಟ್ಟಳು. ಇವರಿಬ್ಬರ ನಡುವೆ ಬೆಳೆಯುತ್ತಿದ್ದ ಪ್ರಣಯದ ವಿಷಯ ಹುಸೇನ್‌ಬೀಬಿಯ ಮನೆಯವರಿಗೆ ತಿಳಿಯಿತು. ಮಗಳ ಹಾಗೂ ತಂಗಿಯ ಸುಖಕ್ಕೆ ಅಡ್ಡಿಬರಲು ಇಷ್ಟವಿಲ್ಲದೆ ಕಾಡ ಮುಸಲ್ಮಾನನಾದರೆ ಮದುವೆಗೆ ಅಡ್ಡಿಯಿಲ್ಲ ಎಂದನು. ಕಾಡನಿಗೆ ಜಾತಿಯ ಬಗ್ಗೆ ಅವನ ದೃಷ್ಟಿಯಲ್ಲಿ ಯಾವುದೇ ಮೌಲ್ಯವಿಲ್ಲ. ಎಷ್ಟು ಸುಲಭವಾಗಿ ಕ್ರಿಶ್ಚಿಯನ್ ಆಗಲು ಒಪ್ಪಿದ್ದನೋ ಅಷ್ಟೇ ಸುಲಭವಾಗಿ ಮುಸಲ್ಮಾನನಾಗಲೊಪ್ಪಿದ. ಈ ಹಿಂದೆ ಹಿಡಿ ಕೂಳಿಗಾಗಿ ತನ್ನ ಜಾತಿಯನ್ನು ತ್ಯಜಿಸಿದ್ದರೆ, ಈಗ ಜಾತಿ ತ್ಯಜಿಸಲು ತನ್ನ ಪ್ರೇಮ ಕಾರಣವಾಗಿತ್ತು. ಹುಸೇನ್‌ಬೀಬಿಗಾಗಿ ಜೀವ ಬಿಡಲು ಸಿದ್ಧನಿದ್ದ. ಅವನಿಗೆ ಬೆಲೆಯಿಲ್ಲದ ಜಾತಿಯನ್ನು ಬಿಟ್ಟ ಮಾತ್ರಕ್ಕೆ ತನ್ನ ಪ್ರೀತಿ ಲಭಿಸುವುದೆಂದಾದ ಮೇಲೆ ಎರಡನೇ ಬಾರಿಗೆ ಜಾತಿ ಬದಲಾಯಿಸಿಕೊಂಡು 'ಇಸ್ಮಾಯಿಲ್ ಕಾಡಕಾಕ' ಆಗಿ ಹುಸೇನ್‌ಬೀಬಿಯನ್ನು ನಿಕಾ ಮಾಡಿಕೊಂಡ.

ಈ ರೀತಿಯಾಗಿ ಕೊನೆಗೆ ಜಾತಿಗೆ ಯಾವುದೇ ಬಗೆಯ ಬೆಲೆಯನ್ನು ಕೊಡದೇ ಮುಗ್ಧ ಪ್ರೀತಿಗೆ ಗೆಲುವನ್ನು ಕೊಡುತ್ತಾರೆ. ಈ ಕತೆಯಲ್ಲಿ ಮತಾಂತರದ ಪ್ರಶ್ನೆ ಜೊತೆಗೆ ಇನ್ನೊಂದು ಹೊಸ ಆಯಾಮ ಮೂಡಿದೆ. ಪ್ರೀತಿಗೆ ಜಾತಿ, ಭೇದ, ಯಾವುದೇ ಬಗೆಯ ಕಟ್ಟುಪಾಡುಗಳು ಇಲ್ಲ. ಅದು ನಿರ್ಮಲವಾದುದು ಎನ್ನುವುದನ್ನು 'ಕಾಡ' ಎಂಬ ಪಾತ್ರದ ಮೂಲಕ ಗೌರಮ್ಮನವರು ತೋರಿಸಿ ಕೊಟ್ಟಿದ್ದಾರೆ.

ಸಮಾಜದ ಪರಿತ್ಯಕ್ತ ಹೆಣ್ಣೊಬ್ಬಳ ಜೀವನದ ಕತೆಯನ್ನು 'ಅಪರಾಧಿ ಯಾರು?' ಎಂಬ ಕಥೆಯಲ್ಲಿ ಪ್ರತಿಬಿಂಬಿತವಾಗಿದೆ. ಸಮಾಜವು ಪಾರ್ವತಿಯನ್ನು ಒಬ್ಬ ಅಪರಾಧಿ ಮಹಿಳೆ ಎಂದು

ಬಹಿಷ್ಕಾರ ಹಾಕಿತು. ಆದರೆ ಆ ಪ್ರಕ್ರಿಯೆಯಲ್ಲಿ 'ಅಪರಾಧಿ ಯಾರು?' ಎಂದು ಲೇಖಕಿ ಪ್ರಶ್ನೆ ಮಾಡುತ್ತಾರೆ.

'ಅಪರಾಧಿ ಯಾರು'? ಕಥೆಯ ಕೇಂದ್ರಬಿಂದು ಪಾರ್ವತಿ. ಅಪರಾಧಿ ಯಾರು? ಕಥೆಯು ಪತ್ರಗಳ ರೂಪದಲ್ಲಿ ಬಿಚ್ಚಿಕೊಳ್ಳುವಂತಹದ್ದು. ಈ ಕಥೆಯಲ್ಲಿ ತನ್ನದಲ್ಲದ ತಪ್ಪಿಗೆ ಬಹಿಷ್ಕೃತಳಾಗಿ, ಶಿಕ್ಷೆ ಅನುಭವಿಸಿ, ರಕ್ಷಣೆ ಕೋರಿ ಮುಸ್ಲಿಂ ಮತಕ್ಕೆ ಸೇರಿಕೊಂಡರೂ ಸಮಾಜ ನಿಂದಿಸುವುದು ಮುಸ್ಲಿಂಳಾದ ಪಾರ್ವತಿಯನ್ನೇ ಹೊರತು ಅಂತಹದೊಂದು ಸ್ಥಿತಿಗೆ ಆಕೆಯನ್ನು ದೂಡಿದ ನಾಗೇಶರಾಯರನ್ನಲ್ಲ. ಈ ರೀತಿ ಸಮಾಜದ ಇಬ್ಬಗೆಯ ನೀತಿಯನ್ನು ಪ್ರಶ್ನಿಸುವ ಕತೆಗಾರ್ತಿ. ಅದಕ್ಕೆ ಉತ್ತರವನ್ನು ಓದುಗರೇ ನಿರ್ಧರಿಸಲು ಲೇಖಕಿ ಕಥೆಯ ಶೀರ್ಷಿಕೆಯಲ್ಲಿಯೇ 'ಅಪರಾಧಿ ಯಾರು?' ಎನ್ನುವ ಪ್ರಶ್ನೆ ಹಾಕುತ್ತಾರೆ.

ಸಂಪ್ರದಾಯ ಕುಟುಂಬ ಪಂಡಿತರ ಮಗಳು ಪಾರ್ವತಿಗೆ ಮದುವೆಯಾಗುವುದು. ತಂದೆ-ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಚಿಕ್ಕ ವಯಸ್ಸಿನಲ್ಲಿಯೇ ತನ್ನ ಗಂಡನನ್ನು ಸಹ ಕಳೆದುಕೊಳ್ಳುತ್ತಾಳೆ. ಸೌಂದರ್ಯ, ಗುಣ, ನಡತೆಗಳಲ್ಲಿ ಎಲ್ಲರ ಮೆಚ್ಚಿಕೆಯನ್ನು ಪಡೆದಿದ್ದ ಪಾರ್ವತಿ ವಿಧವೆಯಾಗಿದ್ದೂ, ನಾಗೇಶರಾಯರ ಮನೆಯಲ್ಲಿ ಕೆಲಸ ಮಾಡಿಕೊಂಡು ತನ್ನ ಜೀವನವನ್ನು ಸಾಗಿಸುತ್ತಿದ್ದಳು. ತನ್ನ ಮಗುವಿಗಾಗಿ ವಿಧಿ ಇಲ್ಲದೇ, ಆ ಕ್ರೂರಿ ನಾಗೇಶರಾಯರ ಅತ್ಯಾಚಾರಗಳನ್ನೆಲ್ಲಾ ಸಹಿಸುತ್ತಾ ಬರುವಳು. ನಾಗೇಶರಾಯ ಆಕೆಯ ಮೇಲೆ ಸುಳ್ಳು ಅಪವಾದ ಹೊರೆಸಿ ಅವಳಿಗೆ ಜಾತಿಯಿಂದ ಬಹಿಷ್ಕಾರ ಹಾಕಿಸಿ ಮನೆಯಿಂದ ಹೊರಹಾಕುತ್ತಾನೆ. ಬೇರೆ ದಾರಿ ಕಾಣದೇ ಪಾರ್ವತಿ ತನ್ನ ಮಗುವನ್ನು ಕರೆದುಕೊಂಡು ಬಾವಿಯ ಬಳಿ ನಿಂತಿದ್ದಳು. 'ಗೈಬಿ' ಎಂಬ ಮುಸ್ಲಿಂ ವ್ಯಕ್ತಿ ತನ್ನ ತಪ್ಪಿಸಿಕೊಂಡ ದನವನ್ನು ಹಿಡಿದು ತರಲು ಹೋದಾಗ ಆಕೆಯನ್ನು ಬಲವಂತದಿಂದ ಕರೆದು ತಂದು ಉನ್ನೀಸಾಳಿಗೆ ಒಪ್ಪಿಸಿದನು. ಆ ವ್ಯಕ್ತಿ ಅವರಿಬ್ಬರನ್ನು ಕರೆದು ತರದೆ ಇದ್ದಿದ್ದರೆ ಮರುದಿನ ತಾಯಿ ಮಗುವಿನ ಶವ ಬಾವಿಯಲ್ಲಿ ತೇಲಾಡುತ್ತಿತ್ತು ಎನ್ನುವ ವಿಷಯವನ್ನು ಉನ್ನೀಸಾ ತನ್ನ ಅಣ್ಣನಿಗೆ ಕಾಗದದಲ್ಲಿ ಬರೆದಳು. ಪಾರ್ವತಿಯನ್ನು ಶಾಸ್ತ್ರೋಕ್ತವಾಗಿ ಮುಸ್ಲಿಂ ಧರ್ಮದಲ್ಲಿ ಸೇರಿಕೊಳ್ಳಲ್ಲಿಕ್ಕೆ ಉನ್ನೀಸಾ ತನ್ನ ಅಣ್ಣನ ಸಹಾಯವನ್ನು ಕೋರಿ ಕಾಗದ ಬರೆದಳು. ಪಾರ್ವತಿ ಮುಸ್ಲಿಂರ ಆಶ್ರಯದಲ್ಲಿಯೇ ಇರುತ್ತಾಳೆ. ಇದು ಸಾಮಾಜಿಕ ಜೀವನದಲ್ಲಿ ಕೋಲಾಹಲವನ್ನುಂಟು ಮಾಡುತ್ತದೆ. ಎಲ್ಲರೂ ಪಾರ್ವತಿಯನ್ನೇ ದೂಷಿಸುವವರೇ. ಈ ಪ್ರಸಂಗ ಕುರಿತು ಪತ್ರ ಲೇಖನಗಳನ್ನು ಒಳಗೊಂಡ ಕತೆ 'ಅಪರಾಧಿ ಯಾರು'?.

ಪಾರ್ವತಿಯ ದುರವಸ್ಥೆಯಲ್ಲಿ ಎಳ್ಳಷ್ಟು ಮರುಕ ತೋರದ ಜಾತಿ ಬಾಂಧವರು ಆಕೆ ಮತಾಂತರಗೊಂಡಾಗ ಸಭೆ ಸೇರಿ ಅದನ್ನು ಖಂಡಿಸುವ ಮನೋಭಾವ ನಮ್ಮವರಲ್ಲಿ ಜಾತಿಯ ಬಗ್ಗೆ ಇರುವ ಅಸಾಮಾನ್ಯ ಕ್ರೌರ್ಯವನ್ನು ಕುರಿತು ವಿಡಂಬಿಸುತ್ತದೆ. ಹೆಸರನ್ನು ಸೂಚಿಸದೆ ಸೀತಮ್ಮನಿಗೆ ಪಾರ್ವತಿಯನ್ನು ಕುರಿತು ದೂಷಿಸಿ ಬರೆದಂತಹ ಪತ್ರ ಸಮಾಜದಲ್ಲಿ ವಿಚಾರ ಮಾಡದೆ ಸುಮ್ಮನೆ ದೂಷಿಸುವವರ ಗುಂಪನ್ನು ಪ್ರತಿಬಿಂಬಿಸುತ್ತದೆ. ಈ ಕಥೆಯಲ್ಲಿ ಲಕ್ಷ್ಮಿಯು ಹೇಳುವಂತಹ ಮಾತುಗಳು ಹೀಗಿವೆ. "ನಮ್ಮವರ ಹೃದಯದಲ್ಲಿ ಜಾತಿಗಲ್ಲದೆ ದಯೆಗೆ ಎಡೆಯಿಲ್ಲ. ಅದೂ ಜಾತಿ ನಿಯಮಗಳು

ಹೆಂಗಸರಿಗೆ ಮಾತ್ರ. ಗಂಡಸರು ಆ ನಿಯಮಕ್ಕೆ ಒಳಪಡಬೇಕಾಗಿಲ್ಲ. ಇವೇ ನೋಡು, ನಮ್ಮ ದೊಡ್ಡತನದ ಕುರುಹು."[೧೦] ಸಮಾಜದಲ್ಲಿರುವ ಜನರು ತಮ್ಮ ಜಾತಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದರೆ ಹೊರತು, ಆ ನೊಂದ ಪಾರ್ವತಿಯ ಪರವಾಗಿ ಯಾವುದೇ ರೀತಿಯ ಒಳ್ಳೆಯ ಭಾವನೆಯನ್ನು ಹೊಂದಲಾರದೇ ಹೋದುದು ವಿಷಾದದ ಸಂಗತಿ. ಜಾತಿ, ಲಿಂಗ, ವರ್ಗ ಇವುಗಳು ಹೂಡಬಹುದಾದ ಸಂಕುಚಿತ ಚೌಕಟ್ಟುಗಳನ್ನು ಮೀರಿ ಹೋಗಬೇಕೆಂಬ ಬಯಕೆ ಗೌರಮ್ಮನವರ ಕಥೆಗಳ ಪಾತ್ರಗಳೆಲ್ಲವೂ ತೋರಿದಾಗ ಅದರ ಹಿನ್ನೆಲೆಯಲ್ಲಿರುವ ಲೇಖಕಿಯ ಹೃದಯ ವೈಶಾಲ್ಯವನ್ನು ಕಂಡುಕೊಳ್ಳಬಹುದಾಗಿದೆ. ಲಕ್ಷ್ಮೀ ಹೇಳುವಂಥ ಮಾತು ಇಡೀ ಕಥೆಯೂ ಪಡೆದುಕೊಳ್ಳುವ ಧ್ವನಿಯೂ ಆಗುವ ವಿಧಾನ ಹೆಚ್ಚು ಗಮನಾರ್ಹವಾದದ್ದು.

ಪಾರ್ವತಿಯನ್ನು ನಾವು ಬಾಳಗೊಡಲಿಲ್ಲ, ಅವಳಿಗೆ ನಮ್ಮ ಧರ್ಮ ತೋರಿದ ದಾರಿ ಬಾವಿ, ಅವಳು ರಜಿಯಾ ಆಗಿಯಾದರೂ ಸುಖವಾಗಿರಲಿ. 'ಊರವರೆಲ್ಲರೂ ಪಾರ್ವತಿಯನ್ನು ಮುಸಲ್ಮಾನ ಜಾತಿಗೆ ಸೇರಿದಳೆಂದು ತಿರಸ್ಕರಿಸುತ್ತಿದ್ದು, ಮೊದಲೇ ನಮಗೆ ಅವಳು ಹಾಗಾಗುವಳೆಂದು ಗೊತ್ತಿತ್ತು ಎನ್ನುವರು. ಇಷ್ಟೆಲ್ಲಾ ತಿಳುವಳಿಕೆ ಇದ್ದಂತಹ ಜನರು ಆಕೆಯ ಸ್ಥಿತಿಯ ಹಾಗಾಗದಿರುವಂತೆ ಮಾಡಲು ಯಾವ ಪ್ರಯತ್ನವೂ ಕೂಡ ಮಾಡಲಿಲ್ಲ' ಎಂದು ಲಕ್ಷ್ಮೀ ಕೇಳುವ ಪ್ರಶ್ನೆ ಮುಖ್ಯವಾಗುತ್ತದೆ. ಜನರು ಗೊತ್ತಿದ್ದರೂ ತಡೆಯಲು ಮುಂದಾಗುವುದಿಲ್ಲ. ಎಲ್ಲವೂ ಮುಗಿದ ನಂತರ ಅದರ ದುರವ್ಯವಸ್ಥೆಯ ಬಗ್ಗೆ ಆಡಿಕೊಳ್ಳುವವರೇ ಹೆಚ್ಚು ಎನ್ನುವುದನ್ನು ಈ ಮೇಲಿನ ಲಕ್ಷ್ಮಿಯ ಮಾತುಗಳಿಂದ ಸ್ಪಷ್ಟವಾಗುತ್ತದೆ. ಆಕೆ ಹೀಗಾಗಲು 'ಹೊಣೆ ಯಾರು? ಅವಳೇ? ನಾಗೇಶರಾಯರೆ? ಅಥವಾ ನಮ್ಮ ಈ ಕ್ರೂರ ಕಠೋರ ಸಮಾಜವೇ?' ಎಂದು ಪ್ರಶ್ನಿಸಿ ನಳಿನಿಗೆ ಬರೆದ ಪತ್ರ ಅಧರ್ಮಿಗಳ ವಿರುದ್ಧ ಸಿಡಿದೇಳುವ ಧೈರ್ಯವಿಲ್ಲದಿದ್ದರೂ ಅಧರ್ಮವನ್ನು ಸಹಿಸದ ಜನರನ್ನು ಕುರಿತು ಪ್ರತಿಬಿಂಬಿಸು ವಂಥದ್ದು.

ಅಂದಿನ ಪತ್ರಿಕೆಯೊಂದರಲ್ಲಿ ಹಿಂದೂ ರಮಣಿಯೊಬ್ಬಳು ಮುಸಲ್ಮಾನ ಧರ್ಮ ಸ್ವೀಕರಿಸಿದ ಘಟನೆಯ ಹಿನ್ನೆಲೆಯಲ್ಲಿ ಈ ರೀತಿಯ ಘಟನೆಗಳು ಮುಂದೆ ಸಂಭವಿಸದಂತೆ ಮಾಡಲು ಮತ್ತು ಧರ್ಮರಕ್ಷಣೆಯನ್ನು ಮಾಡಲು ತೀರ್ಮಾನವನ್ನು ತೆಗೆದುಕೊಂಡ ನಾಗೇಶರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ವಿವರಣೆ ಪ್ರಕಟವಾಗಿತ್ತು. ಪಾರ್ವತಿಯ ದುರಂತಕ್ಕೆ ಕಾರಣನಾದ ನಾಗೇಶರಾಯ ತನ್ನ ಮತದ ಸಾಂಸ್ಕೃತಿಕತೆಯನ್ನು ಕಾಯ್ದುಕೊಳ್ಳುವ ಹುನ್ನಾರದಲ್ಲಿ ಸಮಾಜದ್ರೋಹಿಯಾಗುವುದು ಈ ವಿಷಾದದ ಧ್ವನಿಯನ್ನು ಮಡುಗಟ್ಟಿಸುತ್ತದೆ. ಇಲ್ಲಿ ಹಿಂದೂ-ಮುಸ್ಲಿಂ ಎನ್ನುವ ಸರಳೀಕರಣಕ್ಕಿಂತ ಒಂದು ಜೀವಿಯ ಬದುಕುವ ಸಂದರ್ಭ ಮುಖ್ಯವಾಗುತ್ತದೆ. ವೈದಿಕ ಧರ್ಮದ ಕಪಿಮುಷ್ಟಿಯಲ್ಲಿ ಬಳಲುವ ಧಾರ್ಮಿಕ ನಂಬಿಕೆಗಳಿಂದ ಸುಖರಹಿತ ಬದುಕಲ್ಲಿ ಜೀವಚ್ಛವದಂತೆ ಕಂಡುಬರುವ ಮಹಿಳೆಯ ಪಾತ್ರಗಳು ಕೊಡಗಿನ ಗೌರಮ್ಮನವರ ಕಥೆಗಳಲ್ಲಿವೆ. ಪ್ರಗತಿಪರ ಆಲೋಚನೆಗಳಿಲ್ಲದ, ಬದಲಾವಣೆಗೊಳಪಡದ, ಇದ್ದ ಸ್ಥಿತಿಯಲ್ಲಿ ತೃಪ್ತಿಪಡುವ, ಕರ್ಮದ ಮೊರೆ ಹೋಗುವ ಪಾತ್ರಗಳ ಸಂಯೋಜನೆಯ ಹಿಂದೆ

ಕಥೆಗಾರ್ತಿಯ ಪ್ರಗತಿಶೀಲವಾದ, ಸಂಯಮಪೂರ್ಣ ಆದರೆ ದ್ವಂದ್ವವಿಲ್ಲದ ನಿಲುವನ್ನು ಗುರುತಿಸಲಿಕ್ಕೆ ಸಾಧ್ಯ.

ಗೌರಮ್ಮನವರ 'ನಾಲ್ಕು ಘಟನೆಗಳು' ಎನ್ನುವ ಕತೆ ಕಾಗದಗಳ ಮಾದರಿಯಲ್ಲಿರುವ ಕಥೆಯಾಗಿದೆ. ಈ ಕಥೆಯ ಪ್ರಮುಖ ಆಶಯ ರಾಮು ತಾನು ತೆರೆದ ಹೃದಯದಿಂದ ಕಂಡ ಸಮಾಜದ ವಿಶೇಷ ಘಟನೆಗಳನ್ನು ಕುರಿತು ಹೇಳುವುದಾಗಿದೆ. ನಾಲ್ಕು ವಿಶೇಷ ಘಟನೆಗಳನ್ನು ನಾಲ್ಕು ಪತ್ರಗಳಲ್ಲಿ ತನ್ನ ಪ್ರೀತಿಯ ಸೀತೆಗೆ ಬರೆಯುವುದೇ ಈ ಕತೆ.

ಮೊದಲನೆ ಪತ್ರದಲ್ಲಿ ಪುರುಷನ ಶ್ರೇಯಸ್ಸಿನ ಹಿಂದೆ ಮಹಿಳೆ ಇರುತ್ತಾಳೆ ಎನ್ನುವುದಕ್ಕೆ ಸಾಕ್ಷಿ ನಿನ್ನ ಪ್ರೋತ್ಸಾಹದಿಂದಲೇ ನಾನು ಹಿಂದಿ ಭಾಷೆಯನ್ನು ಕಲಿಯುತ್ತಿರುವುದು. ಬಿರುದುಗಳಿಗಾಗಿ ಹೊಡೆದಾಡುವ ಈ ಕಾಲದಲ್ಲಿ ಕಷ್ಟಪಡದೆ ನನಗೆ ಬಿರುದುಗಳನ್ನು ಕೊಡುತ್ತಿರುವುದು ನನ್ನ ಅದೃಷ್ಟ. ಆದರೆ ನೀನೆ ಬಂದು ಬಿರುದನ್ನು ದಯಪಾಲಿಸು ಕಾಗದದ ಮೂಲಕ ಬೇಡ ಎಂದು ಬರೆಯುತ್ತಾನೆ. ಈ ಮೊದಲನೆಯ ಕಾಗದದಲ್ಲಿ ಬರುವ ಸನ್ನಿವೇಶ ಗಂಡು-ಹೆಣ್ಣಿನ ನವಿರಾದ ಪ್ರೇಮವನ್ನು ಕುರಿತು ವರ್ಣಿಸುತ್ತದೆ. ಎರಡನೆಯ ಪತ್ರದಲ್ಲಿ ನೆನ್ನೆ ಹೊಡೆದಾಡಿದ ಗಂಡ-ಹೆಂಡತಿಯರು ಬೆಳಗ್ಗೆ ಪ್ರೀತಿಯಿಂದ ಒಂದಾಗಿ ತಮ್ಮ ಮಗುವಿನೊಡನೆ ಸಂತೋಷವಾಗಿರುವ ಸಂದರ್ಭವನ್ನು ಕುರಿತು ಹೇಳುತ್ತಾನೆ. ಸ್ತ್ರೀಯರ ಸಹನಶೀಲತೆ, ಪ್ರೇಮ, ಭಕ್ತಿ-ವಿಶ್ವಾಸಗಳ ಆಳವನ್ನು ಕಂಡು ಹಿಡಿಯುವುದು ಸುಲಭದ ಕೆಲಸವಲ್ಲ ಎನ್ನುವುದನ್ನು ಕಛೇರಿಯ ಜವಾನ ತನ್ನ ಹೆಂಡತಿಯನ್ನು ರಾತ್ರಿ ಬೀದಿಯಲ್ಲಿ ಬೆತ್ತದಿಂದ ಹೊಡೆದರೂ, ಅವನ ಹೆಂಡತಿ ಮರುದಿನ ತಿಮ್ಮ ತನ್ನ ಮನೆಯ ಮುರಿದ ಬೇಲಿಯನ್ನು ಸರಿ ಮಾಡಿ ಕಟ್ಟುತ್ತಿರುವ ಸಂದರ್ಭದಲ್ಲಿ ಅವಳ ಮಗನೊಡನೆ ನಗುತ್ತಾ ಮಾತಾಡುತ್ತಿದ್ದುದನ್ನು ಕಂಡು ತಿಳಿದುಕೊಂಡಿದ್ದನ್ನು ತನ್ನ ಸೀತೆಗೆ ವಿವರಿಸುತ್ತಾನೆ.

ಮೂರನೆಯ ಘಟನೆಯಲ್ಲಿ ವಿಧವೆಯರ ಬಗೆಗೆ ಸಮಾಜ ಹಾಗೂ ಗಂಡನ ಮನೆಯವರು ತೋರುವ ತಾತ್ಸಾರ, ಅನಾದರಗಳನ್ನು ಕುರಿತು ವಿಶ್ಲೇಷಿಸುತ್ತಾನೆ. ಎಲ್.ಎ.ನಲ್ಲಿ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲು ಸಿಗುವ ಹಾಗೇ ಮಸೂದೆಯನ್ನು ಹೊರತರಬೇಕೆಂಬುದು ರಾಮುವಿನ ಮುಖ್ಯ ಆಶಯ. ಈ ಪತ್ರದಲ್ಲಿ ತನ್ನ ಹೇಳಿಕೆಗೆ ಪೂರಕವಾಗಿ ಒಂದು ಘಟನೆಯನ್ನು ವಿವರಿಸುತ್ತಾನೆ. ಕತ್ತಲೆಯಲ್ಲಿ ಒಂದು ಮರದ ಕೆಳಗೆ ಅನಾಥ ವಿಧವೆ ತಾಯಿಯೊಬ್ಬಳು ತನ್ನ ಮಗುವನ್ನು ಅದಕ್ಕೆ ಚಳಿಯಾಗದಂತೆ ತಬ್ಬಿ ಕುಳಿತಿರುವುದನ್ನು ನೋಡುತ್ತಾನೆ. ಆಕೆಯನ್ನು ಅವಳ ಅತ್ತೆ ಜಗಳ ಮಾಡಿ ಮಧ್ಯರಾತ್ರಿಯಲ್ಲಿ ಮಗುವಿನೊಂದಿಗೆ ಮನೆಯಿಂದ ಹೊರಗೆ ಓಡಿಸಿರುತ್ತಾರೆ. ಇಂತಹ ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯ ಎಷ್ಟು ಮುಖ್ಯ ಎನ್ನುವುದನ್ನು ತನ್ನ ಪತ್ರದಲ್ಲಿ ಹೇಳಿರುತ್ತಾನೆ. ಸ್ತ್ರೀ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಿದ್ದೇ ಆದರೆ ತನ್ನ ಜೀವನವನ್ನು ತನಗೆ ಬೇಕಾದ ಹಾಗೆ ರೂಪಿಸಿಕೊಂಡು ಬದುಕನ್ನು ಸಾಗಿಸಬಹುದು ಎಂಬುದನ್ನು ತಮ್ಮ ಅಭಿಪ್ರಾಯವನ್ನು ರಾಮುವಿನ ಪಾತ್ರದ ಮೂಲಕ ಹೇಳಿಸಿದ್ದಾರೆ ಲೇಖಕಿ.

ನಾಲ್ಕನೇ ಘಟನೆಯಲ್ಲಿ ತಾನು ಕಂಡ ಒಂದು ಹೆಣ್ಣಿನ ಆಕಸ್ಮಿಕ ದುರಂತ ಸಾವನ್ನು ಕುರಿತು ಹೇಳಿರುವನು. ಸಂತಸದಿಂದ ತುಂಬಿ ತುಳುಕುತ್ತಿದ್ದಂತಹ ಮನೆ ಕ್ಷಣಾರ್ಧದಲ್ಲಿ ದುಃಖದ ಬೀಡಾಗುವುದನ್ನು ಕುರಿತು ಹೇಳುತ್ತಾ ಜೀವನದ ನಿಜವಾದ ಮೌಲ್ಯವನ್ನು ಕುರಿತು ತಿಳಿಸುತ್ತದೆ. ಬಾಣಂತಿತನಕ್ಕೆ ಹೋದ ಸೊಸೆಯನ್ನು ಮಗ ಕರೆದುಕೊಂಡು ಬಂದಾಗ ಗೋವಿಂದರಾಯರ ಹೆಂಡತಿ ಸೊಸೆ ಮೊಮ್ಮಗುವನ್ನು ಇದಿರುಗೊಂಡು ಮಗುವಿಗೆ ದೃಷ್ಟಿತಾಗದಂತೆ ಕಪ್ಪು ಚುಕ್ಕೆಯನ್ನಿಟ್ಟು ಬರಮಾಡಿಕೊಂಡರು. ಹಿತ್ತಲ ಜಗುಲಿಯಲ್ಲಿ ಹಾಸಿದ ಚಾಪೆಯ ಮೇಲೆ ಕುಳಿತು ಅತ್ತೆ ತಂದಿಟ್ಟ ಹಾಲನ್ನು ಮಗುವಿಗೆ ಕುಡಿಸುತ್ತಾ ಕುಳಿತಿರುವಾಗ ಕಾಗೆಂದು ಗುರಿಯಿಟ್ಟು ಹೊಡೆದ ಗುಂಡು ನಾಮಕರಣಕ್ಕಾಗಿ ಅತ್ತೆಯ ಮನೆಗೆ ಬಂದಿದ್ದ ಆಕೆಯ ಎದೆಯನ್ನು ಹೊಕ್ಕಿತು. ಅವಳು ರಕ್ತದ ಮಡುವಿನಲ್ಲಿ ಬಿದ್ದು ಅಲ್ಲಿಯೇ ಅಸುನೀಗುತ್ತಾಳೆ. ಸಡಗರ-ಸಂಭ್ರಮಗಳಿಂದ ತುಂಬಿದಂತಹ ಮನೆಯಲ್ಲಿ ಕ್ಷಣಮಾತ್ರದಲ್ಲಿ ಸ್ಮಶಾನದ ಮೌನ ಆವರಿಸುತ್ತದೆ. ಮನುಷ್ಯ ಮುಂದೆ ಏನಾಗುತ್ತದೆಂದು ಅರಿಯದೆ ಹೊಡೆದಾಡುವ ಜೀವನದ ರಹಸ್ಯ ಇದೇ ಏನು? ತಿಳಿದವರಾರು! ಎನ್ನುವ ಪ್ರಶ್ನೆಯೊಂದಿಗೆ ರಾಮು ತನ್ನ ಪತ್ರಗಳನ್ನು ಮುಗಿಸುತ್ತಾನೆ.

ಪ್ರತಿಯೊಂದು ಪತ್ರದಲ್ಲಿಯೂ ಕೂಡ ಸಮಾಜದ ಆಗು-ಹೋಗುಗಳ ಕುರಿತು, ಜೀವನದ ಕ್ಷಣಿಕತೆ ಕುರಿತು, ಸಮಾಜದಲ್ಲಿ ಮುಂದೆ ಆಗಬೇಕಾಗಿರುವ ಸುಧಾರಣೆಗಳನ್ನು ಕುರಿತು ಲೇಖಕಿ ಘಟನೆಗಳೊಂದಿಗೆ ಉದಾಹರಣೆಗಳನ್ನು ನೀಡುವುದರ ಮೂಲಕ ಸಮಾಜದ ಎದುರು ಪ್ರಶ್ನೆಗಳನ್ನು ಹಾಕುತ್ತಾರೆ.

"ಸುಳ್ಳು ಸ್ವಪ್ನ" ಕಥೆಯಲ್ಲಿ ಭಗ್ನ ಪ್ರೇಮಿಯೊಬ್ಬಳ ದಿನಚರಿ ಪುಸ್ತಕದಿಂದ ಆಯ್ದ ತುಣುಕುಗಳು. ಕಥೆಯ ಪ್ರಮುಖ ಆಶಯ ಅಯೋಚಿತವಾಗಿ ಪ್ರಾರಂಭವಾಗಿ ಬೆಳೆದ ಪ್ರೇಮ ಹಿರಿಯರ ಅನಾದರದ ದೌರ್ಜನ್ಯಕ್ಕೆ ಸಿಲುಕಿ ನಲುಗಿದಂತಹ ಸನ್ನಿವೇಶವನ್ನು ಕುರಿತು ಹೇಳುವುದಾಗಿದೆ. ಅನಾದರದಿಂದಾಗಿ ಹೆಣ್ಣಿನ ಮನದ ಮೇಲಾಗುವ ಘೋರ ಪರಿಣಾಮವನ್ನು ಮನದಾಳಕ್ಕೆ ಕೈಯಿಕ್ಕಿ ತೆಗೆದುಕೊಂಡು ಚಿತ್ರಿಸಿರುವರು. ಪ್ರೇಮದ ಆರಂಭಿಕ ಹಂತ, ಅದರ ನಿರಾಕರಣೆ ಕೊಡುವ ನೋವು, ಆ ಎರಡರ ಜೊತೆಗೆ ನಂತರದ ಮಾನಸಿಕ ಪರಿಣಾಮಗಳನ್ನು ಕುರಿತು ಈ ಕಥೆ ವಿಶಿಷ್ಟ ಬಗೆಯಲ್ಲಿ ತೆರೆದಿಟ್ಟಿರುವುದು.

ಹದಿಹರೆಯ ವಯಸ್ಸಿನ ಯುವತಿ ಸರಸ ಪಕ್ಕದ ಮನೆಯ ಹುಡುಗನ ಪ್ರೀತಿಯ ಸೆಳೆತಕ್ಕೆ ಸಿಕ್ಕಿ ಅವಳ ಮನಸ್ಸಿನಲ್ಲುದಿಸಿದ ಭಾವನೆಗಳ ಮಿಡಿತವನ್ನು ಅವಳದೇ ದಿನಚರಿಯಲ್ಲಿ ಅವಳೇ ವ್ಯಕ್ತಪಡಿಸುವಂತೆ ಈ ಕಥೆಯನ್ನು ಹೆಣೆಯಲಾಗಿದೆ. ೨೬.೦೫.೨೮. ಪುಸ್ತಕದ ಜೊತೆಗೆ ತನ್ನ ಹೃದಯವನ್ನು ಸಹ ಅವನ ಮನೆಯಲ್ಲಿ ಬಿಟ್ಟು ಬಂದ ಸರಸಳಿಗೆ ತನ್ನ ಗೆಳತಿ ಶಾಂತಾಳ ಪತ್ರವೂ ಸಂತೋಷವನ್ನುಂಟು ಮಾಡುವುದಿಲ್ಲ. ಮನೆಯ ಸುತ್ತಲಿನ ಪ್ರಕೃತಿ ಸೌಂದರ್ಯದ ವೀಕ್ಷಣೆಯೂ ಸಹ ಆಕೆಗೆ ರುಚಿಸುವುದಿಲ್ಲ. ಪುಸ್ತಕವನ್ನು ಹಿಡಿದುಕೊಂಡು ಓದಲು ಕುಳಿತರು ಕೂಡ ಮನಸ್ಸು ಎಲ್ಲಿಯೋ ಓಡುವುದು.

ಮನುಷ್ಯನಾದವನು ತನ್ನ ಜ್ಞಾಪಕಗಳ ಬಂಧನದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಸರಸಳ ಮೂಲಕ ಹೇಳಲಾಗಿರುವುದು. ೩.೬.೨೮ : ಎಲ್ಲರೂ ಊರಿಗೆ ಹೋಗಿರುವುದರಿಂದ ಸರಸ ಅವಳ ಅಕ್ಕ ಇಬ್ಬರೆ ಮನೆಯಲ್ಲಿದ್ದಾರೆ. ನಿನ್ನೆ ಬಂದ ಅವನ ಪತ್ರದ ಯೋಚನೆಯಲ್ಲಿ ಮುಳುಗಿದ್ದ ಸರಸಳಿಗೆ ಪ್ರೀತಿಯ ಅಕ್ಕನ ಕರೆ ಎಚ್ಚರಿಸುತ್ತದೆ. ನಾಲ್ಕು ಗಂಟೆಗೆ ಬರುವ ಕೃಪಾಳಿಂದ ಅವನ ವಿಷಯವನ್ನು ಕೇಳಿ ತಿಳಿದುಕೊಂಡಳು. ಕೃಪಾ ಕೊಟ್ಟ ಅವನ ಕಾಗದದಿಂದ ಅವನ ನಾಳೆಯ ಬರುವನ್ನು ತಿಳಿದ ಸರಸಳ ಹೃದಯ ಸಂತೋಷದಿಂದ ನಾಳೆಯ ಬರುವಿಕೆಗಾಗಿ ಕಾತರಿಸಿತು. ೬.೬.೨೮ : ಅವನಿದ್ದುದರಿಂದ ಎರಡು ದಿನಗಳು ನಿಮಿಷಗಳಂತೆ ಉರುಳಿದವು. ಅವನ ನೆನಪಿನ ಸುಖದಲ್ಲೆ ಐದು ಗಂಟೆಗೆ ಮೊದಲೇ ಎದ್ದ ಸರಸ ಮುಖ ತೊಳೆದು, ಬಿಡಿಸಿದ ಮಲ್ಲಿಗೆಯ ಹೂಗಳನ್ನು ಬೊಗಸೆಯಲ್ಲಿ ಹಿಡಿದು ಬರುವಾಗ ಎದುರಾದ ಅವನು 'ಬೆಳಗಾಗುವ ಮೊದಲೇ ಏಕೆ ಎದ್ದೆ' ಎಂದು ಕೇಳಿದ. ಏನೂ ತೋಚದೇ ಆಗಲೆ ಕೊಯ್ದ ಮೊಗ್ಗುಗಳನ್ನು ಅವನ ಮುಖದ ಮೇಲೆರಚಿ ಓಡಿ ಹೋದಳು. ಸಂಜೆಯ ಸಮಯದಲ್ಲಿ ಅಕ್ಕ, ಕೃಪಾ ಮತ್ತು ಅವನ ಜೊತೆ ತಿರುಗಾಡಲು ಹೋದಾಗ ಇವರಿಬ್ಬರೇ ಹಿಂದೆ ಉಳಿದರು. ಸರಸಳ ಬೆಳಗಿನ ನಡವಳಿಕೆಯಿಂದ ಉತ್ತೇಜಿತನಾಗಿದ್ದ ಅವನು ಸರಸಳನ್ನು ಹತ್ತಿರ ಬರಸೆಳೆದು ಮುತ್ತಿನ ಮಳೆಗೆರೆದ. ತನ್ನ ಆ ಬಗೆಯ ವರ್ತನೆಗೆ ಕ್ಷಮೆಯಾಚಿಸಿದ ಅವನಿಗೆ 'ಅಪರಾಧ ಮಾಡಿದರಲ್ಲವೇ ಕ್ಷಮೆ?' ಎಂದು ಹೇಳಿ ಅವನ ಬಗೆಗಿನ ತನ್ನ ಪ್ರೀತಿಯನ್ನು ಹೊರಹಾಕುವಳು. ಅವನು ಹೊರಡುವ ವಿಷಯ ತಿಳಿದು ದುಃಖಿತಳಾದ ಸರಸಳನ್ನು ಸಮಾಧಾನಪಡಿಸಿ ಪತ್ರ ಬರೆಯಲು ಹೇಳಿ ಆತನು ಊರಿಗೆ ಹೊರಡವನು. ೮.೧೦.೩೦: ಅವನಲ್ಲದೆ ಅಣ್ಣ ನಿಶ್ಚಯಿಸಿರುವ ವರನೊಂದಿಗೆ ಮದುವೆಯಾಗುತ್ತಿರುವ ಸರಸಳಿಗೆ ಸಾಯುವುದಕ್ಕಿಂತಲೂ ಕಷ್ಟವಾಗಿ ತೋರುತ್ತದೆ. ಪ್ರತಿಯೊಂದು ಶಬ್ದದಲ್ಲೂ ಪ್ರೇಮ ಉಕ್ಕುತ್ತಿರುವ ಹಿಂದಿನ ದಿನ ಬಂದ ಅವನ ಕಾಗದವನ್ನು ಓದಿದ ಸರಸ 'ನನಗೇಕೆ ಹುಚ್ಚು ಹಿಡಿಯುವುದಿಲ್ಲ' ಎಂದುಕೊಂಡಳು. ೯.೪.೩೧ : 'ನೀನೆಂಥ ಕ್ರೂರಿ ಸರಸಿ, ನನ್ನ ಕಾಗದಗಳೊಂದಕ್ಕೂ ಪ್ರತ್ಯುತ್ತರವನ್ನೇ ಬರೆಯುತ್ತಿಲ್ಲವೇಕೆ?' ಎಂದು ಬರೆದ ಅವನ ಕಾಗದವನ್ನೋದಿದಾಗ ಸರಸಳಿಗೆ ಸಂಕಟದಿಂದ ಸಾಯುವ ಯೋಚನೆ ಸುಳಿಯಿತು. ಆದರೆ, ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವ ಅಕ್ಕ, ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವ ಆಕೆಯ ಪತಿ ಅವಳ ಕಣ್ಮುಂದೆ ಸುಳಿದರು. ತನ್ನ ಸರ್ವಸ್ವವನ್ನೆಲ್ಲಾ ಅವನಿಗರ್ಪಿಸಿದ್ದ ಸರಸಳಿಗೆ ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಪತಿಗೆ ಕೊಡಲು ಇನ್ನೇನೂ ಇರಲಿಲ್ಲ. ಮುಖ್ಯವಾದದ್ದನ್ನು ಬಿಟ್ಟು ಪತಿಯ ಉಳಿದ ಎಲ್ಲಾ ಕೆಲಸಗಳನ್ನು ಭಕ್ತಿಯಿಂದ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಳು. ತನ್ನ ಅಸಹಾಯಕ ಸ್ಥಿತಿಯನ್ನು ಯಾರಿಗೂ ಹೇಳದೆ ಪರದಾಡಿದಳು.

೧೮.೧೧.೩೧ : ಅವನ ಮದುವೆಯ ವಿಷಯವನ್ನು ತಿಳಿದ ಸರಸಿಯ ಮನದಾಳದಲ್ಲಿ ನೋವಿನ ಅಲೆಯೆದ್ದರೂ ಅವನ ಸಂಸಾರ ಸುಖವಾಗಿರಲಿ ಎಂದು ಆಶಿಸುತ್ತಾಳೆ. ೨೧.೩.೩೪ : ಹೆಂಡತಿ ಮಗುವಿನೊಂದಿಗೆ ನಾಳೆ ಅವನು ಬರುವನೆಂದು ತಿಳಿದ ಸರಸಿ ಇನ್ನೂ ಅವನ ಬಗೆಗಿರುವ ಅವಳ ಪ್ರೀತಿಯನ್ನು ತನ್ನ ಕಣ್ಣುಗಳು ಹೊರಗೆಡವದಂತೆ ಕಾಪಾಡೆಂದು ದೇವರಲ್ಲಿ ಪ್ರಾರ್ಥಿಸಿದಳು. ೨೨.೩.೩೪: ಸುಖ-ಸಂತೋಷ ತುಂಬಿದ ನಗುಮುಖದ ಅವನು ಅವನ ಹೆಂಡತಿ ಮಗುವಿನೊಂದಿಗೆ ಮನೆಗೆ ಬಂದಾಗ

ಪ್ರೀತಿಯಿಂದ ಮಾತಾಡಿಸಿದಳು. ಅವನನ್ನೇ ಹೋಲುವ ಅವನ ಮಗಳು ಪ್ರಭಾಳನ್ನು ಎತ್ತಿ ಮುದ್ದಾಡಿದಳು. ಅವನಿಗೆ ಅನುರೂಪಳಾದ ಪತ್ನಿ ಎಂದುಕೊಂಡು ಅವಳನ್ನು ಮಗುವನ್ನೂ ಚೆನ್ನಾಗಿಟ್ಟಿರೆಂದು ದೇವರಲ್ಲಿ ಪ್ರಾರ್ಥಿಸಿದ ಸರಸಿ ತನಗೆ ಮಾತ್ರ ಸುಖ ಪಡೆಯುವ ಅಧಿಕಾರ ಇಲ್ಲವೆಂದು ಭಾವಿಸಿದ್ದಳು. ಆದರೆ ಪ್ರಯತ್ನಿಸಿದಷ್ಟೂ ಚಿಗುರುವ ಹಿಂದಿನ ಜ್ಞಾಪಕದಿಂದ ಮಾತ್ರ ತನ್ನನ್ನು ಪಾರುಮಾಡೆಂದು ದೇವರಲ್ಲಿ ಬೇಡಿಕೊಂಡಳು.

ಸಂಪ್ರದಾಯಸ್ಥ ಮನಸ್ಸಿನ ಹೆಣ್ಣೊಬ್ಬಳ ಭಾವನೆಗಳನ್ನು ಎಳೆ-ಎಳೆಯಾಗಿ ಬಿಡಿಸಿ ಈ ಕತೆಯನ್ನು ರಚಿಸಿದ್ದಾರೆ. ವಿರಹ-ವಿಯೋಗಗಳ ಸಾಮಾನ್ಯ ಸ್ತರಗಳಿಂದ ಪಾತ್ರಗಳನ್ನು ಬಿಡಿಸಿ ಕಥೆ ಕಟ್ಟಿರುವ ಗೌರಮ್ಮನ ಪ್ರತಿಭೆ ಇಲ್ಲಿ ಪೂರ್ಣವಾಗಿ ಅರಳಿಕೊಂಡಿರುವುದು. ಸಾಂಪ್ರದಾಯಿಕ ಕುರುಡು ನಂಬಿಕೆಗಳ, ಲಿಂಗ, ಜಾತಿ, ವರ್ಗ ಅಸಮಾನತೆಗಳ, ಮೂರ್ಖತನ, ಅಪ್ರಬುದ್ಧತೆಗಳ ಮಿತಿಗಳನ್ನು ದಾಟಿದ ಅರ್ಥಪೂರ್ಣ ಗಂಡು-ಹೆಣ್ಣಿನ ಸಂಬಂಧ ಸಫಲ ಸಾಮಾಜಿಕ ವ್ಯವಸ್ಥೆಗಾಗಿ ಕನಸು ಕಂಡ ಕನ್ನಡದ ಮೊದಲ ಮುಖ್ಯ ಕಥೆಗಾರ್ತಿಯಾಗಿದ್ದಾರೆ ಗೌರಮ್ಮ.

ನಾವು ಇಲ್ಲಿಯ ಕತೆಗಳನ್ನು ನೋಡಿದರೆ ಕಥೆಗಳ ಆಶಯ ಮತ್ತು ಈ ಆಶಯವನ್ನು ಕೇಂದ್ರೀಕರಿಸುವ ಅಥವಾ ನಿಯಂತ್ರಿಸುವ ಕಥನಕ್ರಮಗಳು ನಮಗೆ ತಿಳಿದಂತಾಗುತ್ತದೆ. ಗೌರಮ್ಮನ ಕತೆಗಳ ಆಶಯ ಸ್ವಾತಂತ್ರ್ಯಪೂರ್ವದ ಸಾಮಾಜಿಕತೆಯ ಕಾಲ ಸಂದರ್ಭವನ್ನು ಕುರಿತಿದೆ. ಆಗ ಮೈಸೂರಿನ ಕಡೆ ಮಾಸ್ತಿ ಮೊದಲಾದವರು ಕತೆಗಳನ್ನು ಬರೆಯುತ್ತಿದ್ದರು. ದಕ್ಷಿಣ ಕನ್ನಡದತ್ತ ಸರಸ್ವತಿಬಾಯಿ ರಾಜವಾಡೆ ಮೊದಲಾದವರು ಕತೆಗಳನ್ನು ಬರೆಯುತ್ತಿದ್ದರು. ಮೈಸೂರು ಪ್ರಾಂತ್ಯಕ್ಕೆ ಸೇರಿದ ಕೊಡಗಿನಲ್ಲಿ ಗೌರಮ್ಮ ಬರೆಯುತ್ತಿದ್ದರು. ಮೈಸೂರಿನ ನಂಜನಗೂಡು ತಿರುಮಲಾಂಬಾ ಮುಂತಾದವರು ಬರೆಯುತ್ತಿದ್ದ ಕಥನಕ್ರಮಕ್ಕೂ ಗೌರಮ್ಮನ ಕಥನಕ್ರಮಗಳಿಗೂ ವ್ಯತ್ಯಾಸ ಇದ್ದುದನ್ನು ನಾವು ಮರೆಯುವಂತಿಲ್ಲ.

ಗೌರಮ್ಮನ ಕಥೆಗಳು ಸರಳವೂ ಆಕರ್ಷವೂ ಸಾಂದರ್ಭಿಕವೂ ಆದ ಕಥಾಶಯಗಳನ್ನು ಹೊಂದಿದ್ದವು. ಇದಕ್ಕೆ ಅನುಗುಣವಾದ 'ಕಥನ'ಗಳ ಹೆಣಿಗೆ ಜತೆಜತೆಗೆ ಸೇರಿದ್ದುದನ್ನು ಪ್ರಸ್ತುತ ಅಧ್ಯಯನದಲ್ಲಿ ಗಮನಿಸಲಾಗಿದೆ.

ಟಿಪ್ಪಣಿಗಳು

೧. ಕೊಡಗಿನ ಗೌರಮ್ಮ, ಕಂಬನಿ, ಪು. ೬೮.

೨. ಕೊಡಗಿನ ಗೌರಮ್ಮ, ಕಂಬನಿ, ಪು. ೭೦.

೩. ಅದೇ..., ಪು. ೭೨.

೪. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಪು. ೨೨೦.

೫. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಪು. ೨೩೦.

೬. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಪು. ೨೩೩.

೭. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಪು. ೨೩೭.

೮. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಪು. ೨೪೨.

೯. ಇಂದಿಗೂ ಪ್ರಸ್ತುತವಾಗುವ ಗೌರಮ್ಮ, ಸುಚೇತನ ಸ್ವರೂಪ, (ಪ್ರಜಾವಾಣಿ, ಅಕ್ಟೋಬರ್, ೧೯೮೮).

೧೦. ಕೊಡಗಿನ ಗೌರಮ್ಮ, ಕಂಬನಿ, ಪು. ೧೦೬.

• • •

ಅಧ್ಯಾಯ ೬

ಕೊಡಗಿನ ಗೌರಮ್ಮನವರ ಆಯ್ದ ಕಥೆಗಳ ಮುಖಾಂತರ ಕಥಾ-ಕಥನದ ವಿಶ್ಲೇಷಣೆ

೧. ಪುನರ್ವಿವಾಹ

೨. ಆಹುತಿ

೩. ನನ್ನ ಮದುವೆ

೪. ಒಂದು ಪುಟ್ಟ ಚಿತ್ರ

೫. ಮನುವಿನ ರಾಣಿ

ಅಧ್ಯಾಯ ೬

ಕೊಡಗಿನ ಗೌರಮ್ಮನವರ ಆಯ್ದ ಕಥೆಗಳ ಮುಖಾಂತರ ಕಥಾ-ಕಥನದ ವಿಶ್ಲೇಷಣೆ

ಈ ಭಾಗದಲ್ಲಿ ಗೌರಮ್ಮನವರ ಕಥೆಗಳಲ್ಲಿ ಕೆಲವೊಂದನ್ನು ಆಯ್ಕೆ ಮಾಡಿಕೊಂಡು ಆ ಕಥೆಗಳ ಮೂಲಕ ಕಥಾ-ಕಥನದ ವಿಶ್ಲೇಷಣೆಯನ್ನು ಮಾಡಲಾಗುವುದು. ಈ ಆಯ್ದ ಕಥೆಗಳಲ್ಲಿ ಯಾವ ಬಗೆಯ ಆಕೃತಿಗಳು ನಿರ್ಮಾಣಗೊಂಡಿವೆ ಎನ್ನುವುದನ್ನು ಪರಿಶೀಲಿಸಲಾಗುವುದು.

೧. ಪುನರ್ವಿವಾಹ

ಗೌರಮ್ಮನವರ ಮೊದಲ ಕಥೆ 'ಪುನರ್ವಿವಾಹ' ವಿಧವಾ ಸಮಸ್ಯೆ ಕುರಿತದ್ದಾಗಿದೆ. ಪುನರ್ವಿವಾಹದ ಕಥೆಯ ನಾಯಕಿ ರಾಜಿಯ ಪಾತ್ರ ಓದುಗರಲ್ಲಿ ಬಾಲ ವಿಧವೆಯರ ಬಗ್ಗೆ ಅನುಕಂಪವನ್ನು ಹುಟ್ಟಿಸಿ, ಅವರನ್ನು ವಿಚಾರಕ್ಕೆ ಹಚ್ಚುತ್ತದೆ. ಈ ಕಥೆಯ ನಾಯಕ ವಿಧುರ, ತಾಯಿಯ ಒತ್ತಾಯಕ್ಕೆ ಮಣಿದು ಮತ್ತು ವ್ಯಕ್ತಪಡಿಸಲಾರದ ತನ್ನ ಮನಸ್ಸಿನ ಒತ್ತಡಕ್ಕೆ ಒಳಗಾಗಿ ಮರುಮದುವೆಗೆ ಸಿದ್ಧನಾಗುತ್ತಾನಷ್ಟೆ. ಹದಿನೈದು ವರ್ಷದವಳಾದ ರಾಜಿ ಎಂಬ ಹುಡುಗಿಯನ್ನು ಮದುವೆಯಾಗಲು ಮುಂದಾಗುತ್ತಾನೆ. ಶ್ರೀಮಂತನಾದ ಅವನು ತನ್ನ ಐಶ್ವರ್ಯದಲ್ಲಿ ತನ್ನ ವಯಸ್ಸನ್ನು, ತನ್ನ ಎಲ್ಲಾ ನ್ಯೂನತೆಗಳನ್ನು ಮರೆಮಾಚಿ ತಾನು ಆ ನಿರ್ಗತಿಕಳನ್ನು ಮದುವೆಯಾಗಿ ಉದ್ಧರಿಸುತ್ತೇನೆಂದು ವಿಚಾರದ ಬಣ್ಣವನ್ನು ತನ್ನ ನಡತೆಗೆ ಲೇಪಿಸಿಕೊಳ್ಳುತ್ತಾನೆ. ಕಥಾ ನಾಯಕಿ 'ರಾಜಿ' ಬಾಲವಿಧವೆಯಾದರೂ ಅವನ ಮೋಹಕ್ಕೆ ಒಳಗಾಗದೇ ವಿವಾಹವಾಗಲು ನಿರಾಕರಿಸುವ ಹೆಣ್ಣೊಬ್ಬಳ ಸುತ್ತ ಈ ಕಥೆಯನ್ನು ಹೆಣೆಯಲಾಗಿದೆ. ಗೌರಮ್ಮನವರು ಸಮಾಜವು ವಿಧವೆಯರ ಮೇಲೆ ಹೇರಿರುವ ಅಮಾನವೀಯ ಆಚಾರ-ವಿಚಾರಗಳನ್ನು ಪ್ರಶ್ನಿಸುವುದಲ್ಲದೇ ಅವರದ್ದೇ ಆದ ಪರಿಹಾರದ ಕಲ್ಪನೆಯನ್ನೂ ಸಹ ಈ ಕಥೆಯಲ್ಲಿ ಕೊಟ್ಟಿದ್ದಾರೆ. 'ರಾಜಿ' ಬಾಲವಿಧವೆ ಎನ್ನುವುದನ್ನು ತಿಳಿಯದೇ ಅವಳನ್ನು ಕಥಾನಾಯಕ ಪ್ರೀತಿಸುತ್ತಾನೆ. ಮದುವೆಯಾಗಲೂ ಕೂಡ ಮುಂದಾಗುತ್ತಾನೆ. ನಿನಗಾಗಿ ನಾನು ಎಲ್ಲವನ್ನು ಬಿಡಲು ಸಿದ್ಧವೆಂದು ಹೇಳುವ ಆ ಗಂಡಿಗೆ ರಾಜಿ ಹೀಗೆ ಹೇಳುತ್ತಾಳೆ.

> "ನನಗಾಗಿ ನೀವು ನಿಮ್ಮ ಸಮಾಜದ ಕಟ್ಟುಗಳನ್ನು ಮುರಿಯಲಾರಿರಿ, ನನಗೆ ಹದಿನೈದೇ ವರ್ಷ. ನಾನು ನಿಮ್ಮ ಮಗಳಾಗಬಹುದು. ಪ್ರೇಮವೆಂದರೇನೆಂದು

> ನನಗೆ ತಿಳಿಯದೆಂದಿರಿ. ನನಗೆ ತಿಳಿದಿರುವುದರಿಂದಲೇ ನಾನು ನಿಮ್ಮ ಮಡದಿ ಯಾಗಲು ಇಚ್ಛಿಸುವುದಿಲ್ಲ. ಏಕೆಂದರೆ: ನಿಮ್ಮ ಮೇಲೆ ನನಗೆ ಪ್ರೇಮವಿಲ್ಲ. ನೀವೂ ನನ್ನನ್ನು ಪ್ರೀತಿಸುತ್ತಿಲ್ಲ. ನಿಮಗೆ ನನ್ನಲ್ಲಿರುವುದು ಮೋಹ"[೧]

ಈ ರೀತಿಯಾಗಿ 'ರಾಜಿ'ಯು ಕಥಾನಾಯಕನಿಗೆ ಪ್ರೀತಿಯ ಒಂದೊಂದೇ ಮಗ್ಗುಲನ್ನು ತೋರ್ಪಡಿಸುತ್ತಾ ಹೋಗುತ್ತಾಳೆ. ಪ್ರೀತಿ ಎನ್ನುವ ಪದದ ಬಗ್ಗೆ ಪುರುಷರು ನೀಡುವ ವ್ಯಾಖ್ಯಾನವನ್ನು ತುಂಬಾ ನಯವಾಗಿ ಟೀಕಿಸುತ್ತಾ ಮುಂದುವರಿಯುತ್ತಾಳೆ.

> "ನೀವು ನಿಜವಾಗಿಯೂ ನಿಮ್ಮ ಹೆಂಡತಿಯನ್ನು ಪ್ರೀತಿಸುತ್ತಿದ್ದರೆ, ಅವಳು ಸತ್ತು ಆರು ತಿಂಗಳು ಕಳೆಯುವ ಮೊದಲೇ ಅವಳನ್ನು ಮರೆತು ಮರುಮದುವೆ ಯಾಗುತ್ತಿರಲಿಲ್ಲ. ಅವಳು ಜೀವಂತವಾಗಿರುವಾಗ ಇದೇ ಮಾತು ಅವಳಿಗೂ ಹೇಳಿದ್ದೀರಿ. ಕಣ್ಮರೆಯಾದ ತಕ್ಷಣ ಪ್ರೀತಿಯ ಬಣ್ಣ ಬೇರೆಯಾಗುತ್ತದೆ. ನೀವು ನಿಜವಾಗಿಯೂ ನನ್ನನ್ನು ಪ್ರೀತಿಸುವುದಾದರೆ ಧೈರ್ಯವಿದ್ದರೆ, ನೀವು ನನಗಾಗಿ ಏನು ಬೇಕಾದರೂ ಮಾಡುವ ಶಕ್ತಿಯಿದ್ದರೆ, ನನ್ನನ್ನು ಮದುವೆಯಾಗಿ ನಾನು ಬಾಲ ವಿಧವೆ"[೨] ಎಂದು ಬರಸಿಡಿಲು ಸಿಡಿಸಿದಳು.

ಈ ಕಹಿಯಾದ ಸತ್ಯವನ್ನು ಅರಗಿಸಿಕೊಳ್ಳಲಾರದೆ, ಮಡಿವಂತ ಗಂಡು ರಾಜಿಯನ್ನು ಮದುವೆಯಾಗಲು ನಿರಾಕರಿಸುವನು. ರಾಜಿಯೂ ತಾನು ಬಾಲವಿಧವೆ ಎಂಬ ವಿಷಯ ತಿಳಿಸಿದಾಗ ಕಥಾನಾಯಕ ಬೆಳಗಿನ ಹೊತ್ತಿನಲ್ಲಿ ವಿಧವೆಯರನ್ನು ನೋಡಿದರೆ ಅಮಂಗಲಕರ ಎಂದು ಹೇಳಿದಾಗ, ಕಥಾನಾಯಕಿ ರಾಜಿಯೂ ವಿಧುರನೊಬ್ಬ ಮರುಮದುವೆಯಾಗುವುದು ತಪ್ಪಲ್ಲವೆಂದಾಗ, ವಿಧವೆಯು ಮರುಮದುವೆಯಾಗುವುದು ಹೇಗೆ ತಪ್ಪಾದೀತು? ಎಂದು ಎತ್ತುವ ಪ್ರಶ್ನೆಯೂ, ಕಥೆ ಕೇಳುವ ಪ್ರಶ್ನೆಯೂ ಆಗಿದೆ.

ಗೌರಮ್ಮನವರು ಈ ಕಥಾನಾಯಕಿ 'ರಾಜಿ'ಯ ಪಾತ್ರದ ಮುಖಾಂತರ ಸಮಾಜದ ರೀತಿ-ನೀತಿಗಳನ್ನು ಕುರಿತು ಪ್ರಶ್ನಿಸುತ್ತಿದ್ದಾರೆ. ವಿಧವೆಯರನ್ನು ನೋಡಿದರೆ, ಅಮಂಗಲಕರ ಸರಿ, ಅದೇ ವಿಧುರರನ್ನು ನೋಡಿದರೆ? ಹೆಂಡತಿ ಸತ್ತು ಆರು ತಿಂಗಳ ಒಳಗೆ ಇನ್ನೊಂದು ಮದುವೆ ಆಗಲು ಬಯಸುವುದು ಪ್ರೀತಿಯೆನಿಸುತ್ತದೆ. ಆದರೆ ಅದೇ ಹೆಣ್ಣು ಬುದ್ಧಿ ಬರುವುದಕ್ಕಿಂತ ಮೊದಲೇ ಮದುವೆಯಾಗಿ, ಗಂಡ ಸತ್ತರೇ, ಆಕೆ ಇಡೀ ಜೀವನ ಪರ್ಯಂತ ಅಮಂಗಳ, ವಿಧವೆಯಾಗಿಯೇ ಕಳೆಯಬೇಕೆ? ಎಂದು ಗೌರಮ್ಮ ಸಮಾಜ ನಿಯಮಗಳನ್ನು ಕುರಿತು ಟೀಕಿಸುತ್ತಾರೆ. ಸಮಾಜದ ಅನ್ಯಾಯಕ್ಕೆ ಒಳಗಾಗಿರುವ ಮಹಿಳೆಯರಿಗಾಗಿ ದುಡಿಯುತ್ತೇನೆ. ಯಾವ ಪುರಾಣ-ಶಾಸ್ತ್ರಗಳಲ್ಲೂ ವಿಧವೆಯ 'ಪುನರ್ವಿವಾಹ' ತಪ್ಪು ಎಂದೂ ಹೇಳಿಲ್ಲ. ಧರ್ಮದ ಅವನತಿಯಾಗುತ್ತಿರುವುದು ನಿಮ್ಮಂತಹ ಅಜ್ಞಾನಿಗಳಿಂದ ಎಂದು ಸಮಾಜದ ಅನ್ಯಾಯವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಕೊನೆಗೂ ರಾಜಿಯ ಮಾತುಗಳನ್ನು ಕೇಳಿ ಪರಿವರ್ತನೆಗೊಂಡ ವಿಧುರನು ಅವಳ ಕಾಲ ಮೇಲೆ ಬಿದ್ದು -

> "ನಿನ್ನ ಪವಿತ್ರ ಚರಣಗಳ ಆಣೆಯಿಟ್ಟು ಇನ್ನೂ ಮುಂದೆ ವಿಧವೆಯರ ಹಿತಸಾಧನೆ
> ಗಾಗಿಯೇ ನನ್ನ ತನುಮನಧನಗಳನ್ನು ಧಾರೆ ಎರೆಯುತ್ತೇನೆ"[೩]

ಎಂದು ಹೇಳುತ್ತಾನೆ. ಈ ರೀತಿಯಾಗಿ ಗೌರಮ್ಮನವರು ವಿಧವೆಯರ ಮನಸ್ಸಿನ ಭಾವನೆಗಳಿಗೆ ಉನ್ನತ ಸ್ಥಾನಮಾನ ಕೊಡಿಸುತ್ತಾರೆ. ಕಥಾನಾಯಕಿಯು ಮಂಡಿಸುವ ತರ್ಕಬದ್ಧವಾದ ವಿದಗ್ಧತೆಯಿಂದ ಕೂಡಿದ ವಾಗ್ವೈಖರಿಯನ್ನು ಗಮನಿಸಿದರೆ ಕೇವಲ ಹದಿನೈದು ವರ್ಷದ ಹುಡುಗಿ ಇಂಥ ವೈಚಾರಿಕ ಪ್ರಬುದ್ಧತೆ ಹೊಂದಿರಲು ಸಾಧ್ಯವೇ? ಎಂಬ ಕುತೂಹಲ ನಮ್ಮಲ್ಲಿ ಮೂಡುವುದು. ಇಲ್ಲಿ ಭಾವಾವೇಶ ತೀವ್ರವಾಗಿದ್ದು, ಕಥೆಯ ಕೊನೆಯ ಭಾಗದಲ್ಲಿ ನಾಯಕ ರಾಜಿಯ ಕಾಲು ಹಿಡಿದು ಕ್ಷಮೆ ಕೇಳುವುದಕ್ಕೆತ್ನಿಸಿದಾಗ -

> "ಅಣ್ಣಾ ನನ್ನ ಕಾಲನ್ನು ಹಿಡಿಯುವುದೇಕೆ? ಸಾಮಾನ್ಯಳಾದ ಒಬ್ಬ ವಿಧವೆಯ
> ಕಾಲಿಗೆ ಬೀಳುವುದು ಭೂಷಣವಲ್ಲ"

ಎನ್ನುವುದು ಇದೆಲ್ಲ ಲೇಖಕಿಯ ಮೊದಲ ಕಥೆ ಎನ್ನುವುದನ್ನು ತೋರಿಸುತ್ತದೆ.

ಕಳೆದ ಶತಮಾನದ ಮೂವತ್ತರ ದಶಕದಲ್ಲಿಯೇ ವಿಧವಾ ಪುನರ್ವಿವಾಹಕ್ಕೆ ಗೌರಮ್ಮ ತಮ್ಮ ಕಥೆಯ ನಾಯಕಿಯ ಮೂಲಕ ದನಿಯೆತ್ತಿದ್ದು ವಿಶಿಷ್ಟವಾಗಿದೆ. ಕಥೆಯು ಹೇಳುವ ಹಾಗೆ ಗಂಡಿನ ಪುನರ್ವಿವಾಹಕ್ಕೆ ಐಶ್ವರ್ಯ ಒಂದೇ ಪ್ರೇರಕವಲ್ಲ. ಈ ಹಿನ್ನೆಲೆಯಿಂದ ಬಡವನೂ ಸಹ ನಮ್ಮ ವ್ಯವಸ್ಥೆಯಲ್ಲಿ ಮರುಮದುವೆಯಾಗಲು ಸಾಧ್ಯವಿದೆ. ಆದರೆ ಹೆಣ್ಣು ತನ್ನ ಹೊಣೆಗಾರಿಕೆ ಸ್ವಲ್ಪವೂ ಇಲ್ಲದ ಸಂದರ್ಭದಲ್ಲಿ ಬಾಲವಿಧವೆಯೆಂಬ ಪಟ್ಟ ಹೊರುವುದು ಕ್ರೂರವಾಗಿದೆ. ಬಾಲವಿಧವೆಯರ ಬದುಕಿನ ಗತಿಯನ್ನು ಈಗಾಗಲೇ ವಿವಾಹೇತರ ಘಟಕದಲ್ಲಿ ಇರಿಸಲು ಸಮಾಜ ನಿರ್ಧರಿಸಿದೆ. ಏಕೆಂದರೆ, ಅವಳನ್ನು ಮದುವೆಯಾಗಲು ಈ ಸಮಾಜದ ಯಾವ ಗಂಡಸು ಇಷ್ಟಪಡುವುದಿಲ್ಲ. ವ್ಯವಸ್ಥೀಕೃತ ಆಶಯಗಳಲ್ಲಿ ಬದುಕು ಚಲನಸ್ಥಿತಿಯನ್ನು ಕಳೆದುಕೊಂಡಾಗ, ಅದಕ್ಕೆ ವಿರುದ್ಧವಾಗಿ ಹೋಗುವ ಛಲವನ್ನು ಯಾರೂ ಕೂಡ ತೋರಬಲ್ಲರು. ಇಂತಹ ಸಂದರ್ಭದಲ್ಲಿ ಜಡವಾಗಿ ಬಿಟ್ಟಿರುವ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಸಮಸ್ಯೆಗಳನ್ನು ಕುರಿತು ಗೌರಮ್ಮನವರು ಕೆಣಕುತ್ತಾರೆ. ಈ ಕಥೆಯೂ ಅಸಹಜತೆಯನ್ನು ಮೀರಲಾಗದಿದ್ದರೂ ವೈಚಾರಿಕವಾಗಿ ಗಮನಸೆಳೆಯುತ್ತದೆ.

೨. ಆಹುತಿ

ವರದಕ್ಷಿಣೆ ಪಿಡುಗು ಇಂದು ನೆನ್ನೆಯದಲ್ಲ, ನಾಗರಿಕತೆಯೊಂದಿಗೆ ಇದೂ ಸಹ ಬೆಳೆಯುತ್ತಿದೆ. ಆದರೆ ಅವುಗಳ ಮುಖವಾಡಗಳು ಬೇರೆ ಬೇರೆಯಾಗಿವೆ ಅಷ್ಟೆ. ಹುಟ್ಟಿನಿಂದ ಹೆಣ್ಣಾದ ತಪ್ಪಿಗೆ ವರದಕ್ಷಿಣೆ ಯೆಂಬ ಅನಿಷ್ಟವನ್ನು ತನ್ನ ಜೊತೆಯಲ್ಲಿ ಇಟ್ಟುಕೊಂಡು ಬಂದವರು ಅದಕ್ಕೆ ಆಹುತಿಯಾಗುವುದರಲ್ಲಿಯೇ ತಮ್ಮ ಜೀವನದ ಅಂತ್ಯವನ್ನು ಸಾರುತ್ತಿದ್ದಾರೆ. ಇಂತಹ ಸಾಮಾಜಿಕ ಸಮಸ್ಯೆಯಾದ ವರದಕ್ಷಿಣೆಯನ್ನು ಆಧರಿಸಿ ಗೌರಮ್ಮನವರು 'ಆಹುತಿ' ಎನ್ನುವ ಕಥೆಯನ್ನು ರಚಿಸಿದ್ದಾರೆ. ಇದು ಕುತೂಹಲಕರವೂ ಸಾಮಾಜಿಕ ವಿಸಂಗತಿಯಿಂದ ಕೂಡಿರುವುದೂ ಆಗಿದೆ.

ಬಡತನ, ಮಹತ್ವಕಾಂಕ್ಷೆ, ಆದರ್ಶ, ಡಿಗ್ರಿಗಳು ಹೇಗೆ ಮನುಷ್ಯನ ಬದುಕಿನ ಸುತ್ತಲೂ ಸುತ್ತಿ ಮನುಷ್ಯನ ಮೌಲ್ಯಗಳು ಪಕ್ಕಕ್ಕೆ ಸರಿದು ಹೇಗೆ ಮನುಷ್ಯನನ್ನು ಮಾರಾಟ ಮಾಡುತ್ತಿವೆ ಎನ್ನುವ ಚಿತ್ರಣವನ್ನು 'ಆಹುತಿ' ಕಥೆಯಲ್ಲಿ ಗೌರಮ್ಮನವರು ಸಹಜ ರೀತಿಯಲ್ಲಿ ಕಣ್ಣಿಗೆ ಕಟ್ಟುವಂತೆ ಕಟ್ಟಿ ಕೊಟ್ಟಿರುವರು. ಎಂ.ಎ. ಪದವೀಧರನಾದ ಕಥಾನಾಯಕನಿಗೆ, ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ ಪದವಿಯನ್ನು ಪಡೆಯಬೇಕು ಎನ್ನುವ ನಾಯಕನಿಗೆ ಬಡತನವೊಂದು ಅಡ್ಡಿಯಾಗಿದೆ. ಇಂಗ್ಲೆಂಡಿಗೆ ಹೋಗಬೇಕಾದರೇ ಸಾಕಷ್ಟು ಹಣ ವ್ಯಯ ಮಾಡಬೇಕಿತ್ತು. ಆದರೆ ಅವನ ತಂದೆ ಅಷ್ಟೊಂದು ಅನುಕೂಲಸ್ಥ ನಾಗಿರಲಿಲ್ಲ. ಆದ್ದರಿಂದ ಶ್ರೀಮಂತರ ಮನೆಯ ಹುಡುಗಿಯನ್ನು ಮದುವೆಯಾದರೆ ಇಂಗ್ಲೆಂಡಿಗೆ ಸುಲಭವಾಗಿ ಹೋಗಬಹುದು ಎಂದು ಭಾವಿಸುತ್ತಾನೆ. ತನ್ನ ಆಸೆ ಕೈಗೂಡಬೇಕಾದರೇ ತನ್ನನ್ನು ಮಾರಿಕೊಳ್ಳುವುದು ಎನ್ನುವುದನ್ನು ಅರಿಯದ ಕಥಾನಾಯಕ ವರದಕ್ಷಿಣೆ ಎನ್ನುವ ಬಣ್ಣವನ್ನು ಬಳಿದುಕೊಳ್ಳುತ್ತಾನೆ. ತಂಗಿ ವಿಜಯ ಅಣ್ಣನ ಡಿಗ್ರಿಯನ್ನು ಜ್ಞಾಪಿಸುತ್ತ ನಿನ್ನಂಥ ವಿದ್ಯಾವಂತ ಮಾಡುವ ಕೆಲಸವೇನು ಇದು ಎಂದು ಕೋಪದಿಂದಲೇ ಹೇಳಿ ಹೊರಟು ಹೋಗುತ್ತಾಳೆ. ಮನೆಯಿಂದ ಹೊರಬಂದ ಕಥಾನಾಯಕ ನಿರುದ್ಯೋಗಿಯಾಗಿ ಅಲೆಯಬೇಕಾಗುತ್ತದೆ. ಸ್ವಾಭಿಮಾನಕ್ಕೆ ಕಟ್ಟುಬಿದ್ದ ಕಥಾನಾಯಕ ಮನೆಪಾಠ ಹೇಳಿಕೊಟ್ಟು ತನಗೊಂದು ಬದುಕಲು ದಾರಿ ಮಾಡಿಕೊಳ್ಳುತ್ತಾನೆ. ಮನೆಪಾಠ ಹೇಳಿಕೊಡುವ ಇಬ್ಬರು ಹುಡುಗಿಯರಲ್ಲಿ ಒಬ್ಬಳ ಸೌಂದರ್ಯ, ಸೌಂದರ್ಯವನ್ನಾರಿಸಿದ ದುಃಖ, ವಿದ್ಯೆಯಲ್ಲಿ ಅವಳಿಗಿದ್ದಂತಹ ಆಸಕ್ತಿ, ಮಿತವಾದ ಮಾತು ಇವೆಲ್ಲಾ ಅಂಶಗಳು ನಾಯಕನಿಗೆ ಆಕೆಯತ್ತ ಅಕರ್ಷಣೆಯನ್ನು ಉಂಟುಮಾಡುತ್ತದೆ. ಕಥಾನಾಯಕ ಶಾಂತಿಯನ್ನು ಪ್ರೀತಿಸತೊಡಗುತ್ತಾನೆ. ಅಂದಿನಿಂದ ಅವನ ಅಂತರಾತ್ಮ ಹಣಕ್ಕಾಗಿ ಪ್ರೇಮವನ್ನು ಬಲಿ ಕೊಡಬೇಡವೆಂದು ಹೇಳುತ್ತದೆ. ಶಾಂತಿಯ ತಂದೆ ಆಕೆಯ ಮದುವೆ ಮಾಡಲು ಕರೆದುಕೊಂಡು ಹೋದಾಗ ತಾನು ಶಾಂತಿ ಇಲ್ಲದೇ ಇರಲಾರೆನೆಂಬ ವಿಷಯ ಅವನು ಅರಿತುಕೊಳ್ಳುತ್ತಾನೆ. ಮರುದಿನ ಪಾಠದ ಸಮಯದಲ್ಲಿ ಸೀತೆ ಆತನಿಗೊಂದು ಕಾಗದ ಕೊಡುತ್ತಾಳೆ. ಅದು ಶಾಂತಿ ಸೀತೆಗೆ ಬರೆದಂತಹ ಪತ್ರ. ವರದಕ್ಷಿಣೆಯನ್ನು ಕೊಡಲು ಶಕ್ತಿ ಇಲ್ಲದ್ದರಿಂದ ತನಗೆ ಮೊದಲು ನಿಶ್ಚಿತವಾದ ವರನು ಮದುವೆಯಾಗಲು ಒಪ್ಪಲಿಲ್ಲ. ಆದ್ದರಿಂದ ಇವಳ ತಂದೆ ನಾಲ್ಕು ಜನ ಮೊಮ್ಮಕ್ಕಳಿರುವ ವಯಸ್ಸಾದ ವರನ ಜೊತೆ ಮದುವೆ ನಿಶ್ಚಯ ಮಾಡಿರುವನು. ವಯಸ್ಸಾದ ವರನ ಮೂರನೇ ಮಡದಿಯಾಗಿರುವುದಕ್ಕಿಂತ ಆತ್ಮಹತ್ಯೆಯೇ ಲೇಸು ಎಂದು ಸೀತೆಗೆ ಕಾಗದ ಬರೆದಿರುತ್ತಾಳೆ. ನೀನಾದರೂ ಆತ್ಮಹತ್ಯೆ ಮಾಡಿಕೊಂಡ ಪಾಪಿಯೆಂದು ಜರಿಯುವುದಿಲ್ಲವೆಂದು ನಿನಗೆ ಈ ಕಾಗದ ಬರೆಯುತ್ತಿರುವೆನು ಎಂದು ಶಾಂತಿ ಬರೆದ ಕಾಗದವನ್ನು ಓದಿ ಹಿಂದೊಂದು ಬಾರಿ ತಾನು ಬಡವರ ಮಗಳನ್ನು ಮದುವೆಯಾಗಲು ತಿರಸ್ಕರಿಸದ್ದನ್ನು ಮರೆತು ವರದಕ್ಷಿಣೆ ಕೇಳಿದ ನೀಚನನ್ನು ಶಪಿಸುತ್ತಾನೆ. ತನ್ನ ದುರಾಸೆಯನ್ನು ಬಿಟ್ಟು ಶಾಂತಿಯನ್ನು ತಾನೇ ಮದುವೆಯಾಗಿದ್ದರೆ ಆ ಬಾಲೆಯ ಜೀವವಾದರೂ ಉಳಿಯುತ್ತಿತ್ತು ಎಂದು ತನ್ನನ್ನು ತಾನೇ ಹಳಿದುಕೊಳ್ಳುತ್ತಾನೆ. ವರದಕ್ಷಿಣೆ ಎಂಬ ಪಿಶಾಚಿಯೂ ಎಷ್ಟೆಷ್ಟು ಸುಕುಮಾರಿಯನ್ನು ಬಲಿ ತೆಗೆದುಕೊಳ್ಳುವುದೋ ದೇವರೇ ಬಲ್ಲ. ಆದರೆ ಕಥಾನಾಯಕನಿಗೆ ತಾನು ಪ್ರೀತಿಸಿದ ಹುಡುಗಿ ದೂರವಾದ ನಂತರ ಆ ವರದಕ್ಷಿಣೆಯೆಂಬ ಭೂತದ ನಿಜ ಸ್ವರೂಪ

ಅರಿತುಕೊಳ್ಳುತ್ತಾನೆ. ಅಂದಿನ ರಾತ್ರಿಯೇ ಊರಿಗೆ ಹೊರಟು, ಮನೆಗೆ ಬಂದಾಗ ತಂಗಿ ಚಿತ್ರ ನೋಡುತ್ತಾ ನಿಂತವಳು ಆತನನ್ನು ನೋಡಿ ಅದನ್ನು ಬಚ್ಚಿಡುವಳು. ಏನು ನೋಡುತ್ತಿದ್ದೀಯಾ ವಿಜಯಾ? ಎಂದಾಗ ತಾನು ನೋಡುತ್ತಿದ್ದಂತಹ ಪೇಪರ್ ಅನ್ನು ಆತನ ಮುಂದೇ ಎಸೆದು "ನೋಡುತ್ತಿದ್ದದ್ದು ನೀನು ಕೊಂದ ಹುಡುಗಿಯನ್ನು" ಎಂದು ಹೇಳಿದಾಗ ಶಾಂತಿಯೇ ತಾನು ಮೊದಲು ಕೈಕೊಟ್ಟ ಕನ್ಯೆ! ಎಂದು ಯಾವ ವರದಕ್ಷಿಣೆಗಾಗಿ ಬಡವರ ಹೆಣ್ಣನ್ನು ನೋಡದೆ ತಿರಸ್ಕರಿಸಿದ್ದನೋ ಅದೇ ಹೆಣ್ಣನ್ನು ಪ್ರೀತಿಸಿದ್ದು ಆಕೆಯೆ ಆತ್ಮಹತ್ಯೆ ಮಾಡಿಕೊಂಡದ್ದು ಎನ್ನುವ ನಿಜವನ್ನು ತನ್ನ ಒಡಲಲ್ಲಿಟ್ಟುಕೊಂಡು ದಹಿಸುತ್ತಾನೆ.

ಈ ಕಥೆಯಲ್ಲಿ ಸಮಾಜ ವ್ಯವಸ್ಥೆಯಿಂದ ಉಂಟಾದಂತಹ ದುರಂತವನ್ನು ನಾವು ನೋಡಬಹುದು. ನಿರುದ್ಯೋಗದಿಂದಾಗಿ ವಿದ್ಯಾವಂತ ಯುವಕರ ಆದರ್ಶಗಳು, ಅವರ ಬದುಕಿನ ಬಯಕೆಗಳು ಹೇಗೆ ಬಲಿಯಾಗುತ್ತಿವೆ, ಯಾವ ಬಗೆಯಲ್ಲಿ ಅಧಃಪತನಗೊಳ್ಳುತ್ತಿವೆ ಎನ್ನುವುದರ ಜೊತೆಗೆ, ಸಾಮಾಜಿಕ ವ್ಯವಸ್ಥೆಯ ನಿಯಮಗಳಿಗೆ ಯುವಕರು ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು, ಕೊನೆಗೆ ತಾವೇ ಅದಕ್ಕೆ ಹೇಗೆ ಬಲಿಪಶುಗಳಾಗುವರು ಎನ್ನುವುದನ್ನು ಗೌರಮ್ಮನವರು ಇಲ್ಲಿ ತುಂಬಾ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. 'ಆಹುತಿ' ಕಥೆಯನ್ನು ಓದಿ ಮುಗಿಸಿದಾಗ ಓದುಗರಲ್ಲಿ ಸಹಜವಾಗಿ ಕಥಾನಾಯಕಿ ಶಾಂತಿಯ ಬಗ್ಗೆ ಸಹಾನುಭೂತಿ, ಆಕೆಯನ್ನು ವರದಕ್ಷಿಣೆಯ ಸಲುವಾಗಿ ಮದುವೆಯಾಗದ ನಾಯಕನ ಬಗ್ಗೆ ಅಸಹ್ಯ ಭಾವನೆ ಮೂಡುತ್ತದೆ. ಅಂದರೆ, ನಮ್ಮ ಮೌಲ್ಯಗಳು ಯಾವ ಬಗೆಯಲ್ಲಿ ನೆಲಕಚ್ಚುತ್ತಿವೆ ಎನ್ನುವುದರ ಜೊತೆಗೆ ವರದಕ್ಷಿಣೆಯ ಪದ್ಧತಿಯ ಹಿಂದಿನ ಕ್ರೌರ್ಯ ಮನವರಿಕೆಯಾಗುತ್ತದೆ. ಒಬ್ಬ ಮುದುಕನ ಮೂರನೆಯ ಮದುವೆಗೆ ವಧುವಾಗಲು ಒಪ್ಪದ ಶಾಂತಿ ಆತ್ಮಹತ್ಯೆ ಮಾಡಿಕೊಳ್ಳುವ ಮುಂಚೆ ಬರೆದ ಪತ್ರದಲ್ಲಿ ಲೇಖಕಿಯ ಧೋರಣೆಯೂ ಕೂಡ ಸೂಚಿತಗೊಳ್ಳುತ್ತದೆ.

> "ಆ ಮದುಕನ ಮಡದಿಯಾಗಿ ಸತ್ತ ಹೆಣದಂತೆ ಜೀವನವನ್ನು ಕಳೆಯು ವುದಕ್ಕಿಂತಲೂ ನನಗೆ ಸಾವೇ ಲೇಸೆಂದು ತೋರುವುದು. ಲೇಸಾದ ಕಾರ್ಯವನ್ನೇಕೆ ಮಾಡಬಾರದು? ಆತ್ಮಹತ್ಯೆಯು ಪಾಪವೆಂದು ಜನರೆನ್ನುವರು. ಮುದುಕನ ಕೊರಳಿಗೆ ಚಿಕ್ಕ ಬಾಲಿಕೆಯನ್ನು ಕಟ್ಟುವುದು ಪುಣ್ಯವಾದರೆ ನನಗಾ ಪುಣ್ಯಕ್ಕಿಂತಲೂ ಆತ್ಮಹತ್ಯೆಯ ಪಾಪವೇ ಲೇಸೆಂದು ತೋರುವುದು"[9]

ತುಂಬಾ ಸರಳವಾಗಿ, ಆವೇಷರಹಿತವಾದ, ಅಬ್ಬರಗಳಿಲ್ಲದೆಯೇ ಮಂಡಿತವಾಗುವಂತಹ ವಾದ, ರೂಢಿಗತ ವಾಗಿರುವಂತಹ ಮೌಲ್ಯ ವ್ಯವಸ್ಥೆಯನ್ನು ತಗ್ಗಿದ ದನಿಯಲ್ಲೇ ಎದುರಿಸುವ ಬಂಡಾಯ ಮನೋಧರ್ಮ ಗೌರಮ್ಮನ ಕಥೆಗೆ ಒಂದು ವೈಶಿಷ್ಟ್ಯತೆಯನ್ನು ಒದಗಿಸಿದೆ. 'ಆಹುತಿ' ಕಥೆಯ ವಸ್ತು ನಮ್ಮ ಸಮಾಜದಲ್ಲಿ ಅಷ್ಟೇನೂ ಅಪರಿಚಿತವಲ್ಲದ ಒಂದು ಘಟನೆಯನ್ನು ತಮ್ಮ ವಿಶಿಷ್ಟವಾದ ಶೈಲಿಯಲ್ಲಿ ನಿರ್ವಹಿಸಿ, ಅದನ್ನು ಮಂಡಿಸಿರುವ ಬಗೆ ಓದುಗರಿಗೆ ಆಕರ್ಷಿಸುವುದು. ಈ ಕಥೆಯಲ್ಲಿ 'ಕಥಾ-ಕಥನ'ದ ವಿಶಿಷ್ಟತೆಯನ್ನು ಗೌರಮ್ಮನವರು ಹಲವು ರೀತಿಗಳಲ್ಲಿ ಪ್ರತಿಮಿಸಿದ್ದಾರೆ. ಇಲ್ಲಿರುವ ಕಥೆಯೊಳಗೆ ಆಶಯ ರೂಪಿಯಾಗಿರುವ 'ಕಥನ'ವು ಪ್ರತಿಯೊಂದು ಘಟ್ಟದಲ್ಲೂ ಮುಂದುವರಿಯುತ್ತ ಹೋಗುವುದು.

೩. ನನ್ನ ಮದುವೆ

ಗೌರಮ್ಮನವರು 'ನನ್ನ ಮದುವೆ' ಎಂಬ ಕಥೆಯಲ್ಲಿ ಬಡತನ ಹೇಗೆ ಮನುಷ್ಯನ ಆಸೆ-ಆಕಾಂಕ್ಷೆಗಳನ್ನು ಹೊಸಕಿ ಹಾಕುತ್ತದೆ ಎನ್ನುವುದನ್ನು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ. ಮದುವೆಯಂಥ ವೈಯಕ್ತಿಕ ವಿಷಯದಲ್ಲಿ ಸಮಾಜ, ತಂದೆ, ತಾಯಿಗಳು ಹೇಗೆ ಕೈಹಾಕುತ್ತಾರೆ. ಅದನ್ನು ವಿರೋಧಿಸಿ, ಅದರಿಂದ ತಪ್ಪಿಸಿಕೊಂಡು ಅಥವಾ ವಿರೋಧಿಸಿ ಬದುಕುವ ಛಲ ಇರದ ಯುವಕರು ಒಳಗೊಳಗೆ ಬಳಲುತ್ತಿರುತ್ತಾರೆ. ಈ ಕಥೆಯಲ್ಲಿ ಬರುವ ಕಥಾನಾಯಕ ಆದರ್ಶಗಳ ಬೆನ್ನತ್ತಿದವ. ತನ್ನ ಬುದ್ಧಿಯ ಬಲದಿಂದ ಹೊರದೇಶಕ್ಕೆ ಹೋಗಿ ಉನ್ನತ ಶಿಕ್ಷಣ ಪಡೆದು, ಒಳ್ಳೆಯ ಹುದ್ದೆಯನ್ನು ಸಂಪಾದಿಸಿ, ಸುಂದರ ಹುಡುಗಿಯನ್ನು ವರದಕ್ಷಿಣೆ ತೆಗೆದುಕೊಳ್ಳದೆ ಮದುವೆ ಆಗಿ ಆದರ್ಶ ಜೀವನವನ್ನು ನಡೆಸಬೇಕೆಂಬ ಬಯಕೆಯನ್ನು ಹೊಂದಿದವನು. ಆದರೆ ಬಡತನ ಆತನ ಆಸೆಗಳಿಗೆ, ಆದರ್ಶಗಳಿಗೆ ಸವಾಲೆಸೆದು ಅವನನ್ನು ಜೀವನದಲ್ಲಿ ವಾಸ್ತವವನ್ನು ಮೀರುವಂತೆ ಮಾಡುತ್ತದೆ. ವ್ಯವಸ್ಥೆಯಲ್ಲಿ ಬೆಳೆದ ಮಕ್ಕಳ ಬದುಕಿನ ಬಗ್ಗೆ ಸಂಪೂರ್ಣವಾಗಿ ಜವಾಬ್ದಾರಿಯನ್ನು ತೋರಿಸುವುದಾಗಲಿ ಅಥವಾ ಅದನ್ನು ತಿಳಿಸುವ ಯಾವ ಒಂದು ವ್ಯವಸ್ಥೆಯಾಗಲಿ ಇಲ್ಲ. ಅಲ್ಲದೆ ಹಿರಿಯರು ಬದಲಾಗುತ್ತಿರುವ ಕಾಲಕ್ಕೆ ತಕ್ಕಂತೆ ವಿಚಾರಿಸುವ ಒಂದು ವ್ಯವಧಾನವೂ ಉಳಿಸಿಕೊಂಡಿಲ್ಲ. ಅದಕ್ಕೆ ಬದಲಾಗಿ ಎಲ್ಲದರ ಮೇಲೆ ತಮ್ಮ ನಿಯಂತ್ರಣವನ್ನು ಹೇರುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವರು. ಇಲ್ಲಿ ತನ್ನ ಮದುವೆಯಲ್ಲಿ ಅವನು ತೋರಬೇಕಾದ ಸ್ವಂತಿಕೆ ಆದರ್ಶ ಎಲ್ಲವನ್ನೂ ಬದಿಗೊತ್ತಿ ಹಣಕ್ಕಾಗಿ ಕುರುಡಿಯನ್ನು ಕೈ ಹಿಡಿಯುತ್ತಾನೆ. ಯುವಕರು ತಮ್ಮತನವನ್ನು ಬದಿಗೊತ್ತಿ ಜೀವನದುದ್ದಕ್ಕೂ ನಿರಾಶೆಯನ್ನು ಅನುಭವಿಸುತ್ತಿರುತ್ತಾರೆ. ಈ ಒಂದು ದುರಂತವನ್ನು ಗೌರಮ್ಮನವರು ಒಬ್ಬ ವಿದ್ಯಾವಂತ ಯುವಕನ ಮೂಲಕ ತೋರಿಸುತ್ತಾರೆ. ಇಲ್ಲಿ ವಸ್ತುವಿಗೆ ಪೂರಕವಾಗಿ ಘಟನೆಗಳನ್ನು ನಿರ್ಮಿಸುವಲ್ಲಿ ಕಥೆಗಾರ್ತಿ ತೋರಿದ ಜಾಣ್ಮೆಯನ್ನು ನಾವು ಗಮನಿಸಬಹುದು. ಕಥೆಯ ಗಂಭೀರತೆಗೆ ಇಲ್ಲಿಯ ಘಟನೆಗಳು ತುಂಬಾ ಸಹಾಯಕಾರಿಯಾಗಿವೆ.

ಕಥಾನಾಯಕ ಚಿಕ್ಕಂದಿನಿಂದಲೇ ಕಟ್ಟಿಕೊಂಡು ಬಂದ ಕನಸು, ಇಟ್ಟುಕೊಂಡಿರುವ ಗುರಿ ಮುಟ್ಟಲು ಸಾಧ್ಯವಾಗದೇ ಇದ್ದಾಗ ವ್ಯಕ್ತಿ ಎಂತಹ ನಿರಾಶೆಯ ಆಳದಲ್ಲಿ ಬೀಳುತ್ತಾನೆ ಎನ್ನುವುದಕ್ಕೆ 'ನನ್ನ ಮದುವೆ' ಕಥೆಯ ನಾಯಕ ರಾಮು ಸಾಕ್ಷಿಯಾಗಿದ್ದಾನೆ. ಮಧ್ಯಮವರ್ಗದ ಜನರ ಆದರ್ಶಗಳು, ಭ್ರಮೆಗಳು ಕಾಲಾಂತರದಲ್ಲಿ ಎದುರಿಗೆ ಬಂದು ನಿಂತಾಗ ಅಸಹಾಯಕತೆ ಉಂಟಾಗುತ್ತದೆ. ಆದ್ದರಿಂದ ಬಿಡುಗಡೆ ಹೊಂದುವ ಸಲುವಾಗಿ ಮತ್ತೊಮ್ಮೆ ಭ್ರಮನಿರಸನವಾಗುತ್ತದೆ. 'ನನ್ನ ಮದುವೆ' ಕಥೆಯಲ್ಲಿ ಬರುವ ರಾಮು ಚಿಕ್ಕ ವಯಸ್ಸಿನಲ್ಲಿಯೇ ಮಹತ್ವಾಕಾಂಕ್ಷೆ ಇಟ್ಟುಕೊಂಡು ಬೆಳೆದಿರುವಂತವನು. ಜೊತೆಗೆ ಪ್ರತಿಭೆಯನ್ನು ಉಳ್ಳವ, ಎಲ್ಲದರಲ್ಲಿಯೂ ಮುಂದು. ಚಿಕ್ಕಂದಿನಲ್ಲಿ ನಡೆದಂತಹ ಒಂದು ಘಟನೆ ಅವನ ಮನಸ್ಸಿನಲ್ಲೊಂದು ಆಸೆಯನ್ನು ಮೂಡಲು ಕಾರಣವಾಯಿತು. ತಮ್ಮ ಊರಿನ ವ್ಯಕ್ತಿಯೊಬ್ಬ ಇಂಗ್ಲೆಂಡಿಗೆ ಹೋಗಿ ಉನ್ನತ ವ್ಯಾಸಂಗವನ್ನು ಮುಗಿಸಿಕೊಂಡು ಹಿಂತಿರುಗಿದಾಗ ಆತನಿಗೆ ಊರಿನ ಜನರು ಗೌರವಿಸಿದ್ದು ಮತ್ತು ಆತನ ನಡೆ-ನುಡಿಗಳಿಗೆ ರಾಮು ಮಾರು ಹೋಗಿ ಅವನಂತೆಯೇ ತಾನು ಕೂಡ

ಇಂಗ್ಲೆಂಡಿಗೆ ಹೋಗಿ ಉನ್ನತ ಶಿಕ್ಷಣ ಪಡೆದು ಅಧಿಕಾರಿಯಾಗಬೇಕೆಂದು ಆಸೆಪಟ್ಟ. ಅದು ಅವನು ಬೆಳೆದಂತೆ ಅದು ಇನ್ನೂ ದೃಢವಾಗುತ್ತಾ ಹೋಯಿತು. ಇಂಗ್ಲೆಂಡಿಗೆ ಹೋಗಬೇಕೆಂಬ ಆಸೆಯಿಂದಲೇ ಅವನು ಸ್ಕೂಲಿನಲ್ಲಿ ಪ್ರಥಮ ಮತ್ತು ಮಾದರಿಯೂ ಆಗಿದ್ದ. ಶ್ರಮಪಟ್ಟು ಓದಿ ಮೊದಲ ದರ್ಜೆಯಲ್ಲಿ ಬಿ.ಎ. ಪಾಸು ಮಾಡಿದ. ಒಂದು ಘಟ್ಟ ಮುಗಿಯುತ್ತದೆ. ಇದರ ನಂತರ ಮುಂದೇನು ಎಂಬ ಸಮಸ್ಯೆ ಎದುರಾದಾಗ ಮನೆಯ ಆರ್ಥಿಕ ಪರಿಸ್ಥಿತಿಯೂ ಸಹ ಎದುರಾಗುತ್ತದೆ. ಎಂ.ಎ.ನೋ ಅಥವಾ ಬಿ.ಎಲ್.ಗೆ ಹೋಗುವಂತಹ ವಿಚಾರವನ್ನು ರಾಮುವಿನ ತಂದೆ ಅವನ ಮುಂದಿಡುತ್ತಾರೆ. ರಾಮು ತನ್ನಾಸೆಯನ್ನು ಹತ್ತಿಕ್ಕಿಕೊಳ್ಳಲಾರದೇ ಹೇಳುತ್ತಾನೆ.

"ಇಂಗ್ಲೆಂಡಿಗೆ ಹೋಗಬೇಕೆಂಬ ಆಸೆ ಅಣ್ಣ"[೫]

ಎಂದ. ರಾಮುವಿನ ಮಾತಿನಲ್ಲಿ ಒಂದು ಬಗೆಯ ಅಸಹಾಯಕತೆ ತೋರುತ್ತದೆ. ಇದಕ್ಕೆ ಕಾರಣ ಅವನು ಬೆಳೆದು ಬಂದಿರುವಂತಹ ಪರಿಸರ, ಪರಿಸ್ಥಿತಿ ಪ್ರಮುಖ ಕಾರಣವಾಗಿದೆ. ಇಲ್ಲಿರುವ ಕಥಾ-ಕಥನವು ಕೇವಲ ತಾಂತ್ರಿಕವಾಗಿ ಮಾತ್ರ ಬರದೆ ಕಥಾ ಆಶಯಕ್ಕೆ ಪೂರಕವಾಗಿ ಬಂದಿದೆ. ಈ ಸಂಗತಿಯನ್ನು ಇಲ್ಲಿರುವ ಮಾತುಗಳಿಂದ ತಿಳಿಯಬಹುದು.

> "ಪ್ರತಿಯೊಬ್ಬ ತಂದೆಗೂ ತನ್ನ ಮಗನು ದೊಡ್ಡ ಪರೀಕ್ಷೆಯನ್ನು ಪಾಸಾಗಿ ದೊಡ್ಡ ನೌಕರಿ ಸಂಪಾದಿಸಿ ಕೈತುಂಬ ಸಂಬಳ ತರಬೇಕೆಂದಿರುವ ಆಸೆಯೇನೋ ಸಹಜವೇ. ಆದರೆ ಅಣ್ಣನಿಗೆ ನನ್ನನ್ನು ಇಂಗ್ಲೆಂಡಿಗೆ ಕಳುಹಿಸುವಷ್ಟು ಅನುಕೂಲತೆಗಳಿರಲಿಲ್ಲ. ಅಷ್ಟರವರೆಗೂ ಅವರ ಮುಖದಲ್ಲಿ ಮಿನುಗುತ್ತಿದ್ದ ಮುಗುಳು ನಗೆಯು ಮಾಯವಾದಾಗ ನನಗದು ತಿಳಿಯಿತು"[೬]

"ನಿನ್ನನ್ನು ಇಂಗ್ಲೆಂಡಿಗೆ ಕಳುಹಿಸಬೇಕೂಂತ ನಿನಗಿಂತಲೂ ಹೆಚ್ಚಾಸೆ ನನಗಿದೆ ರಾಮೂ. ಆದರೆ ಹಣಕ್ಕೇನ್ಮಾಡ್ಲಿ ಹೇಳು" ಎನ್ನುತ್ತಾನೆ. ಇಲ್ಲಿಂದ ಕಥೆಗೆ ಒಂದು ತಿರುವು ಉಂಟಾಗುತ್ತದೆ. ಮುಂದೆ ನಡೆಯುವ ಘಟನೆಗಳ ಮೇಲೆಯೇ ಕಥೆಯ ಏಳು-ಬೀಳು ನಿಲ್ಲುತ್ತದೆ. ಕಥಾಕಥನದ ವೈಶಿಷ್ಟ್ಯವನ್ನು ಕಥನದ ಒಡಲಲ್ಲಿಯೇ ತಿಳಿಯಲು ಸಾಧ್ಯವಾಗಿದೆ.

> "ಅಣ್ಣನ ಉತ್ತರ ಬಹಳ ವರ್ಷಗಳಿಂದಲೂ ಸಂಚಯಿಸಿಟ್ಟಿದ್ದ ನನ್ನ ಆಸೆಯನ್ನು ನಿರಾಶೆಯನ್ನಾಗಿ ಮಾಡಿಬಿಟ್ಟಿತು. ಆ ದಿನ ರಾತ್ರಿಯೆಲ್ಲಾ ನನಗೆ ನಿದ್ರೆಯೇ ಬರಲಿಲ್ಲ. ಬಹಳ ವರ್ಷಗಳಿಂದ ಬಯಸಿದ ಬಯಕೆಗೂ ಅದರ ಪೂರ್ತಿಗೂ ನಡುವೆ ಹಣ ಕಂಟಕ ಸ್ವರೂಪವಾಗಿ ಬಂದು ನಿಂತಿತ್ತು. ಹಣ! ಹಣ! ಇಡೀ ರಾತ್ರಿ ಕಣ್ಣು ಮುಚ್ಚದೆ ಹಣಕ್ಕೇನು ಮಾಡ್ಲಿ-ಹಣಕ್ಕೇನು ಮಾಡ್ಲಿ ಎಂದು ಜಪಿಸುತ್ತಿದ್ದೆ. ಬೆಳಗಿನ ಜಾವದ ಹೊತ್ತಿಗೆ ನಿದ್ದೆ ಬಂತು. ನಿದ್ರೆಯಲ್ಲೂ ಅದೇ ಪ್ರಶ್ನೆ. ಏನೇನೋ ಕನಸುಗಳು"[೭]

ಅರ್ಥವ್ಯವಸ್ಥೆ ಹೇಗೆ ಸಮಾಜವನ್ನು ಹಾಗೂ ಅದರ ಒಂದಂಗವಾದ ಕುಟುಂಬವನ್ನು, ಕುಟುಂಬದಲ್ಲಿರುವ ಸದಸ್ಯರುಗಳನ್ನು, ಅವರ ಆಸೆ-ಆಕಾಂಕ್ಷೆಗಳನ್ನು, ಬೇಕು-ಬೇಡಗಳನ್ನೆಲ್ಲಾ ನಿಯಂತ್ರಿಸುತ್ತದೆ ಎನ್ನುವುದನ್ನು ಇದರಿಂದ ನಾವು ಅರಿಯಬಹುದು.

ಗೌರಮ್ಮನವರ ಕಥೆಗಳಲ್ಲಿ ಪ್ರಗತಿಪರ ವಿಚಾರಗಳನ್ನು ಕಾಣುತ್ತೇವೆ. ಪರಂಪರಾಗತವಾಗಿ ಬಂದಿರುವ ಮೌಲ್ಯಗಳನ್ನು ಕಣ್ಣುಮುಚ್ಚಿಕೊಂಡು ಪಾಲಿಸಬೇಕು. ಅಜ್ಜ ನೆಟ್ಟ ಆಲದಮರಕ್ಕೆ ನೇಣು ಹಾಕಿಕೊಳ್ಳಬೇಕು ಎನ್ನುವ ಸಂಪ್ರದಾಯದ ಮನೋಭಾವದಿಂದ ಹೊರನಿಲ್ಲುವುದಾಗಲಿ, ತಾವು ಅತ್ಯಂತ ಕ್ರಾಂತಿಕಾರಿಗಳು ಎಂದು ಎಲ್ಲವನ್ನು ವಿರೋಧಿಸುವುದಾಗಲೀ, ಮಾಡದೆ ಸಾಮಾಜಿಕ ಸಮಸ್ಯೆಗಳಿಗೆ ಮಾನವೀಯವಾಗಿ ಪ್ರಾಮಾಣಿಕತೆಯಿಂದ ಸ್ಪಂದಿಸಿದ್ದಾರೆ. ಮಾನವೀಯತೆಯನ್ನು ಭಾವನಾತ್ಮಕ ನೆಲೆಯಲ್ಲಿ ನಿಂತು ವಸ್ತುವನ್ನು ನೋಡಿದ್ದರೂ, ವಾಸ್ತವತೆಯನ್ನು ಮರೆತು ಭ್ರಮಾಲೋಕದಲ್ಲಿ ತೇಲುವುದಿಲ್ಲ. ಸಾಮಾಜಿಕ ಕಾಳಜಿ ಗೌರಮ್ಮನವರ ಕಥಾ-ಕಥನದ ಮೂಲದ್ರವ್ಯವಾಗಿದೆ. ನಾವು ಈ ಸಂಗತಿಯನ್ನು ಹಲವು ಕಥೆಗಳಲ್ಲಿ ಕಂಡಂತೆ ಇಲ್ಲೂ ಕಾಣಬಹುದಾಗಿದೆ.

'ಹಣ' ಮನುಷ್ಯನ ಬದುಕನ್ನು ಹೇಗೆ ನಿಯಂತ್ರಿಸುತ್ತದೆ ಎನ್ನುವುದನ್ನು ಎತ್ತಿ ತೋರಿಸುತ್ತಾ, ಅದರ ಪ್ರಭಾವಕ್ಕೆ ಒಳಗಾದ ವ್ಯಕ್ತಿಯ ಬದುಕು, ಅವನ ಆಸೆಗಳು ಹೇಗೆ ನಿರಾಶೆಯಾಗುತ್ತದೆ ಎನ್ನುವುದನ್ನು ರಾಮುವಿನ ಜೀವನದ ಮೂಲಕ ಕಥೆಗಾರ್ತಿ ತೋರಿಸಿದ್ದಾರೆ. ರಾಮುವಿನ ಆಸೆ ನೆರವೇರಬೇಕಾದರೆ ಹಣದ ಆವಶ್ಯಕತೆಯಿದೆ. ಇದನ್ನು ಭರಿಸಲು ಅವನಿಗೆ ಉಳಿದಿರುವುದು ಒಂದೇ ಮಾರ್ಗ. ಅದು ಶ್ರೀಮಂತ ಮಾವನನ್ನು ಹುಡುಕಿ ತನ್ನನ್ನು ಮಾರಿಕೊಳ್ಳುವುದು. ಅದು ರಾಮುವಿನ ತಂದೆಗೂ ಸಹ ಚೆನ್ನಾಗಿ ತಿಳಿದಿತ್ತು. ಬೆಲ್ಲ ಇರುವಲ್ಲಿಯೆ ಇರುವೆಗಳು ಮುತ್ತಿಕೊಳ್ಳುವ ಹಾಗೆ ವರಗಳಿದ್ದಲ್ಲಿ ಕನ್ಯಾಪಿತೃಗಳು ಮುತ್ತುತ್ತಾರೆ, ಸುತ್ತುತ್ತಾರೆ. ಅದೇ ರೀತಿ ರಾಮುವಿನ ತಂದೆಗೆ ಹಲವಾರು ಕನ್ಯಾಪಿತೃಗಳ ಕಾಗದಗಳು ಬಂದಿವೆ. ಅದನ್ನು ರಾಮುವಿನ ಮುಂದೆ ಪ್ರಸ್ತಾಪಿಸುತ್ತಾರೆ. ಕಬ್ಬಿಣ ಕಾಯ್ದಾಗಲೇ ಪೆಟ್ಟು ಹಾಕಬೇಕು ಎಂಬ ವಾಡಿಕೆಯ ಮಾತೊಂದಿದೆ. ಅದನ್ನು ಇಲ್ಲಿ ಅನ್ವಯಿಸಬಹುದು. ಹಣದ ಆವಶ್ಯಕತೆ ಎನ್ನುವುದು ಮನುಷ್ಯನ ಆದರ್ಶಗಳನ್ನ, ಸಿದ್ಧಾಂತಗಳನ್ನು ಮರೆಮಾಚಿಸಿಬಿಡುತ್ತದೆ. ಹಿರಿಯರು ಇದಕ್ಕೆ ಬಾಯಿ ತೆರೆಯುತ್ತಾರೆ. ತಮ್ಮ ಮಕ್ಕಳ ಆಸೆಯ ಎಳೆಯನ್ನು ಹಿಡಿದು ಸ್ವಾರ್ಥಿಗಳಾಗುತ್ತಾರೆ. ಇದಕ್ಕೆ ರಾಮುವಿನ ತಂದೆಯಿಂದ ಬಂದಂತಹ ನುಡಿಗಳೇ ಅದಕ್ಕೆ ಸಾಕ್ಷಿ.

> "ರಾಮೂ ನಿನಗಿಷ್ಟು ಬೇಗ ಮದುವೆ ಮಾಡುವ ಯೋಚನೆ ನನಗೂ ಇರಲಿಲ್ಲ.
> ಆದ್ರೆ ನೋಡು, ನೀನೀಗ ಮದ್ವೆ ಆದ್ರೆ ನಿನ್ನ ಇಚ್ಛೆಯಂತೆ ಯುರೋಪಿಗೆ
> ಹೋಗಬಹುದು. ಮಾವನ್ಮನೆಯೋರು ನಿನ್ನ ಓದಿಸ್ತಾರಂತೆ, ಏನಂತಿ"[೮]

ಎಂದು ಹೇಳುವ ಮಾತು ಹಸಿದ ನಾಯಿಯ ಮುಂದೆ ಮೂಳೆಯನ್ನು ಎಸೆದಂತಿದೆ. ಒಂದು ಕಡೆ ತಾನು ತನ್ನ ಬಾಲ್ಯದಿಂದಲೇ ಇಟ್ಟುಕೊಂಡು, ಬೆಳೆಸಿಕೊಂಡಿರುವ ಆಸೆ, ಇನ್ನೊಂದು ಕಡೆ ಬೌದ್ಧಿಕ ಮಟ್ಟದಲ್ಲಿ

ಬೆಳೆಸಿಕೊಂಡು ಬಂದಿರುವಂತಹ ಆದರ್ಶ. ಇವೆರಡರ ನಡುವೆ ಘರ್ಷಣೆ ನಡೆಯುವುದು ಎನ್ನುವುದನ್ನು ಗೌರಮ್ಮನವರು ರಾಮುವಿನ ಆಂತರಿಕ ತುಮುಲದ ಮೂಲಕ ತೋರಿಸಿದ್ದಾರೆ.

> "ಕಾಲೇಜಿನಲ್ಲಿ ವಾಗ್ವಾದಗಳಾದಾಗ ನಾನೆಷ್ಟು ಸಾರಿ ವರದಕ್ಷಿಣೆಯನ್ನು ತೆಗೆದುಕೊಳ್ಳಬಾರದೆಂದು ವಾದಿಸಿದ್ದೆ. ನನ್ನ ಮದುವೆಯಲ್ಲಿ ಒಂದು ಕಾಸನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಎಷ್ಟು ಜನ ವರದಕ್ಷಿಣೆ ತೆಗೆದುಕೊಂಡ ಸ್ನೇಹಿತರಿದುರಿನಲ್ಲಿ ಹೇಳಿ ಪೌರುಷ ಕೊಚ್ಚಿದ್ದೆ! ಸಮಾಜದಲ್ಲಿ ನಡೆಯುವ ಈ ಕಠೋರ ವ್ಯವಹಾರವನ್ನು ನಾನೆಷ್ಟು ಸಾರಿ ಖಂಡಿಸಿದ್ದೆ"[೨೯]

ಇಂಗ್ಲೆಂಡಿಗೆ ಹೋಗಬೇಕೆಂಬ ಆಸೆ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯವಾದದ್ದು ಆದರ್ಶಗಳನ್ನು ಪಾಲಿಸುವುದು. ಇವುಗಳಲ್ಲಿ ಕೊನೆಗೆ ವೈಯಕ್ತಿಕವಾದ ಇಂಗ್ಲೆಂಡಿಗೆ ಹೋಗಬೇಕೆಂಬ ಆಸೆಯೇ ಗೆದ್ದು, ಆತ್ಮವಂಚನೆ ಮಾಡಿಕೊಂಡು ತನ್ನ ಆದರ್ಶಗಳನ್ನೆಲ್ಲಾ ಪಕ್ಕಕ್ಕೆ ಸರಿಸಿ ತಂದೆ ನೋಡಿದ ಶ್ರೀಮಂತ ಜಮೀನುದಾರನ ಏಕೈಕ ಪುತ್ರಿಯನ್ನು ಮದುವೆಯಾಗಲು ಒಪ್ಪಿದ. ರಾಮು ಮದುವೆಗೆ ಒಪ್ಪಿದ್ದರೂ ಅವನಿಗೆ ಮಾನಸಿಕವಾಗಿ ಸಮಾಧಾನವಿಲ್ಲ. ಕಾಲೇಜಿನಲ್ಲಿ ಅವನ ಸ್ನೇಹಿತರೆದುರಿಗೆ ಆಡಿದ ಆದರ್ಶದ ಮಾತುಗಳು ಅವನಲ್ಲಿ ಅಪರಾಧೀ ಮನೋಭಾವ ಕಾಡುತ್ತದೆ. ಮತ್ತೇ ಮತ್ತೇ ತನ್ನ ಆದರ್ಶದ ಪುನರಾವಲೋಕನವನ್ನು ಮಾಡಿಕೊಳ್ಳುತ್ತಾನೆ. ತಾನು ಒಪ್ಪಿದ ಮದುವೆಗೆ ತನ್ನಲ್ಲಿಯೇ ಪಶ್ಚಾತ್ತಾಪ ಪಡುತ್ತಾನೆ.

> "ಲವ್ ಮ್ಯಾರೇಜ್‌ಗಳಲ್ಲೇ ಸಂಪೂರ್ಣವಾಗಿ ವಿಶ್ವಾಸವನ್ನಿಟ್ಟುಕೊಂಡಿದ್ದ ನಾನು ಹಣಕ್ಕೋಸ್ಕರವಾಗಿ ನನ್ನನ್ನೇಕೆ ನಾನೇ ಮಾರಿಕೊಂಡೆ? ಮದುವೆಯೇ? ಮಾರಾಟವೇ...... ಇಲ್ಲ ಕೇವಲ ಹಣಕ್ಕಾಗಿ ಒಬ್ಬ ಹುಡುಗಿಯ ಜೀವನವನ್ನೇಕೆ ಹಾಳು ಮಾಡಲಿ...."[೩೦]

ಇಡೀ ಜೀವನದುದ್ದಕ್ಕೂ ಜೊತೆಯಲ್ಲಿರುವ ಬೌದ್ಧಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಸಮಭಾಗಿಯಾಗಿರಬೇಕಾದಂತಹ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿಲ್ಲದಂತಹ ಯುವಕರು ನಿರಾಸಕ್ತಿಯನ್ನು ಹೊಂದುವುದು ಸರ್ವೇಸಾಮಾನ್ಯ.

> ಹಾಗಾಗಿ ರಾಮುವಿನ ಬಾಯಿಯಿಂದ ನಿರಾಸಕ್ತಿಯ ಮಾತುಗಳು ಹೊರಡುತ್ತವೆ. "ಹಣವನ್ನು ಮದುವೆಯಾಗುವ ನನಗೆ ಹುಡುಗಿ ನೋಡಿ ಮಾಡಬೇಕಾದುದೇನು? ಬೇಡ ಅನಂತ ಹೇಗಿದ್ರೂ ಒಪ್ಪಿದೆ, ಇನ್ನೇನ್ನೋಡುದು"[೩೧]

ಎಂದು ಆಡುವ ಮಾತುಗಳಲ್ಲಿ ಆತನ ಮನಸ್ಸಿನ ಭಾವನೆ ಅರಿಯಬಹುದು. ಹೀಗೆ ಹುಡುಗಿಯನ್ನು ನೋಡಲು ಮೊದಲು ನಿರಾಕರಿಸಿದಂತಹ ರಾಮು ಮದುವೆಯಂಥ ಪ್ರಸಂಗದಲ್ಲಿ ತನ್ನ ಕೈಹಿಡಿದವಳು ಹೇಗಿರಬಹುದು ಎನ್ನುವ ಕುತೂಹಲಕ್ಕೆ ನಿಯಂತ್ರಣವನ್ನು ಹಾಕಲು ಸಾಧ್ಯವಾಗದೆ, ತನ್ನ ಜೀವನ

ಸಂಗಾತಿಯಾಗುವವಳ ಮುಖ ನೋಡುವ ಕುತೂಹಲ ಉಂಟಾಗುತ್ತದೆ. ಮದುವೆಯ ಹಿಂದಿನ ದಿನ ಅವಳನ್ನು ನೋಡಲು ಹಾತೊರೆಯುತ್ತಾನೆ. ಆದರೆ ಸಾಧ್ಯವಾಗುವುದಿಲ್ಲ. ಕಥೆಗಾರ್ತಿ ಇಲ್ಲಿ ಓದುಗರ ತಾಳ್ಮೆಯನ್ನು ಪರೀಕ್ಷಿಸುವ ಹಾಗೇ ಕಥೆಯ ಘಟನೆಯನ್ನು ಹೆಣೆದಿದ್ದಾರೆ. ಇಲ್ಲಿ ಕಥಾ-ಕಥನದ ಹೆಣಿಗೆಯು ಬಹುಜಾಣ್ಮೆಯಿಂದ ರೂಪುಗೊಂಡಿದೆ. ಕಥೆಯು ಆಶಯದ ಒಳತಂತ್ರವಾಗಿ ಇಲ್ಲಿ ರೂಪುಗೊಂಡಿದೆ. ಕೊನೆಗೆ ಮದುವೆಯ ಮಂಟಪದಲ್ಲಿ ಎದುರುಬದುರಾಗಿ ನಿಂತಾಗಲೂ ತುಂಬಾ ಕಾತುರತೆ. ಇನ್ನೇನೂ ಕೆಲನಿಮಿಷಗಳಲ್ಲಿ ತನ್ನ ಕನಸಿನ ಕಲ್ಪನಾ ಸಾಮ್ರಾಜ್ಯದ ರಾಣಿಯನ್ನು ನೋಡಬಹುದು ಎಂದು ಊಹಿಸಿ ಕೊಂಡವನಿಗೆ ನಿರಾಶೆ ಕಾದಿರುತ್ತದೆ. ಶಾರಿ ನೋಡಲು ಸುಂದರಿಯಲ್ಲ, ಎಣ್ಣೆಗಂಪು ಬಣ್ಣ, ತೆಳ್ಳಗೆ ಉದ್ದವಾಗಿದ್ದಳು. ಅವಳು ಅವನ ಕಲ್ಪನಾ ಸಾಮ್ರಾಜ್ಯದ ರಾಣಿಯಂತಿರಲಿಲ್ಲ.

ತನ್ನ ಯಾವುದೇ ವಿಚಾರಗಳಿಗೂ ಸ್ಪಂದಿಸುವ ಸಾಮರ್ಥ್ಯವಿಲ್ಲದಂತಹ ಒಂದು ಮುಗ್ಧ ಪ್ರಾಣಿ ಎಂದು ತಿಳಿದು ಸುಮ್ಮನೆ ನಿಂತವನಿಗೆ ಪುರೋಹಿತ ಎರಡು ಬಾರಿ 'ಮಾಲೆ ಹಾಕಮ್ಮ ಮಾಲೆ ಹಾಕಮ್ಮ' ಎಂದರೂ ಶಾರಿ ಮಾಲೆ ಹಾಕದೆ ಸುಮ್ಮನೆ ನಿಂತಿದ್ದಳು. ಅಷ್ಟರಲ್ಲಿ ಆಕೆಯ ತಾಯಿ ಮುಂದೇ ಬಂದು 'ಶಾರಿ, ನಿನ್ನಿದಿರೇ ನಿಂತಿರುವರು ಮಾಲೆ ಹಾಕು' ಎಂದಾಗ ಶಾರಿಯು ಮುಂದೇ ಬಂದು ತಡವರಿಸುತ್ತಾ ಮಾಲೆ ಹಾಕಿ ಕಣ್ಣೀರು ಸುರಿಸಿದಳು. ಅದನ್ನು ಕಂಡ ರಾಮುವಿಗೆ ಅಲ್ಲಿ ನೆರೆದವರಾರಿಗೂ ಗೊತ್ತಾಗದ ಸತ್ಯ ಅವನಿಗೆ ತಿಳಿಯುತ್ತದೆ. ಅದೇ ತನ್ನ ಹೆಂಡತಿ ಶಾರಿ ಕುರುಡಿ ಎಂದು. ಕೊನೆಯವರೆಗೂ ಕಥೆ ಗಂಭೀರವಾಗಿ ಸಾಗುತ್ತಾ ಮುಕ್ತಾಯದ ಪರಿಣಾಮವನ್ನು ಕುತೂಹಲಕರವಾಗಿ ಕೆರಳಿಸುತ್ತ, ವಸ್ತುಸ್ಥಿತಿಯನ್ನು ಪ್ರಕಟಿಸಿ ಅಯ್ಯೋ ಎನ್ನುವ ಹಾಗೇ ಮಾಡುತ್ತದೆ. ಕಥೆ ಓದುತ್ತಾ ಹೋದಂತೆ ಏನೇನೋ ಮುಕ್ತಾಯವನ್ನು ಕಲ್ಪಿಸಿಕೊಂಡವರಿಗೆ ಈ ಬಗೆಯ ಮುಕ್ತಾಯ ಪರಿಣಾಮವನ್ನುಂಟು ಮಾಡುತ್ತದೆ.

ಇಡೀ ಕಥೆಗೆ ಕೊನೆಯ ಈ ಘಟನೆ ಹೆಚ್ಚು ಮೆರಗು ತಂದು ಓದುಗರ ಮೇಲೆ ಗಾಢವಾದ ಪರಿಣಾಮ ಬೀರಲು ಸಾಧ್ಯವಾಗುತ್ತದೆ. ಇದು ಕಥಾ-ಕಥನದ ವೈಶಿಷ್ಟ್ಯದಿಂದಾಗಿ ಸಾಧ್ಯವಾಗಿದೆ. ಕಥೆಯ ಒಡಲಲ್ಲಿ ಬೇರು ಬಿಟ್ಟ ಆಶಯಕ್ಕೂ ಸಾಮಾಜಿಕ ಆಶಯಕ್ಕೂ ಸಂಬಂಧಗಳಿರುವುದನ್ನು ನಾವು ಇಲ್ಲಿ ಗಮನಿಸಬಹುದು. ಹೀಗಾಗಿ, ಕೇವಲ ಬಡತನಕ್ಕೆ ಹೆದರಿ, ತನ್ನ ಕಲಿಯುವ ಆಸೆಗೆ ವರದಕ್ಷಿಣೆಯೊಂದೇ ಪರಿಹಾರ ಸೂಚಿಸಬಲ್ಲದೆಂದು ಭಾವಿಸಿ ಕುರೂಪಿಯಾದ ಹುಡುಗಿಯನ್ನು ಮದುವೆಯಾಗಲು ತಯಾರಾದ ಎಂದು ನೇರವಾಗಿ ಹೇಳಿದ್ದರೆ ಕಥೆಗೆ ಅಷ್ಟೊಂದು ಕಳೆಕಟ್ಟುತ್ತಿರಲಿಲ್ಲ. ಕಥಾ-ಕಥನದ ಅಂಶ ಸೂಚಿತ ವಾಗುತ್ತಿರಲಿಲ್ಲ. ಆದರೇ ಇಲ್ಲಿ ಗೌರಮ್ಮನವರು ಕನ್ಯೆಯ ಕುರೂಪವನ್ನು ಹಾಗೂ ಕುರುಡುತನದ ರಹಸ್ಯವನ್ನು ಕೊನೆಯವರೆಗೂ ತೋರ್ಪಡಿಸದೆ ಕೊನೆಹಂತದಲ್ಲಿ ಮದುವೆಯ ಗಂಡಿನ ಮೂಲಕವೇ ಹೇಳಿಸಿದಂತಹ ರೀತಿ ಮಾತ್ರ ತುಂಬಾ ವಿಶಿಷ್ಟವಾಗಿದೆ. ಕಥಾ-ಕಥನದ ವೈಶಿಷ್ಟ್ಯಕ್ಕೆ ಪೂರಕವಾಗಿದೆ.

೪. ಒಂದು ಪುಟ್ಟ ಚಿತ್ರ

'ಒಂದು ಪುಟ್ಟ ಚಿತ್ರ' ಬಾಲವಿಧವೆಯ ಬವಣೆಯನ್ನು ತಿಳಿಸುವಂಥ ಕಥೆ. ಬಾಲ್ಯದಲ್ಲೇ ತನ್ನ ತಂದೆ-ತಾಯಿಗಳನ್ನು ಕಳೆದುಕೊಂಡು, ಅಣ್ಣ ಅತ್ತಿಗೆಯರ ಆಶ್ರಯದಲ್ಲಿ ಬೆಳೆದ 'ಶಾಂತಿ'ಯೆಂಬುವಳು

ಪ್ರೀತಿಯ ಕೊರತೆಯಿಂದ ತಪ್ಪಿಸುವ ಆಕೆಗೆ ಅವರ ಅಣ್ಣ-ಅತ್ತಿಗೆಯರಿಂದ ದೊರೆಯುವುದು ತಿರಸ್ಕಾರ, ನಿರ್ಲಕ್ಷ್ಯ, ಉದಾಸೀನತೆ ಮಾತ್ರ. ಈಕೆ ಮನೆಯೊಳಗೆ ಸಿಗದ ಪ್ರೀತಿಗಾಗಿ ಹೊರಗಡೆ ಅರಸುವ ಹಂತ ಬಂದಾಗ, ಅತ್ತಿಗೆಯ ಅಣ್ಣನಾದ ರಘು ಈಕೆಯ ಪರಿಸ್ಥಿತಿಯ ಲಾಭ ಪಡೆಯುತ್ತಾನೆ. ಶಾಂತಿ ಗರ್ಭಿಣಿಯಾದಾಗ ಅವಳ ಕೈಬಿಟ್ಟು ಓಡುತ್ತಾನೆ. ಅಣ್ಣ-ಅತ್ತಿಗೆ ತಿರಸ್ಕಾರದ ಭಯ ಒಂದು ಕಡೆ; ಸಮಾಜದ ಅಪವಾದ ತನ್ನ ಅಸಹಾಯಕತೆಯ ಅರಿವು ಇವೆಲ್ಲದರಿಂದ ಶಾಂತಿಗೆ ಸಮಾಜ ಹೇಗೆ ಗಂಡಿಗೊಂದು ನ್ಯಾಯ-ಹೆಣ್ಣಿಗೊಂದು ನ್ಯಾಯವನ್ನು ಹೇಳುತ್ತದೆಂಬ ವಾಸ್ತವದ ತಿಳುವಳಿಕೆ ಉಂಟಾಗುವುದು. ಈ ತಿಳುವಳಿಕೆಯನ್ನು ತನ್ನ ಬಂಡವಾಳವನ್ನಾಗಿಸಿಕೊಳ್ಳಬೇಕಾದಂತಹ ಶಾಂತಿ ಛಲದಿಂದ ಎದುರಿಸಲು ಬೇಕಾದ ಮಾನಸಿಕ ಸಿದ್ಧತೆ ಇಲ್ಲದ ಅವಳು ಆತ್ಮಹತ್ಯೆಗೆ ಶರಣಾಗುತ್ತಾಳೆ.

ಒಂದು ಪತ್ರ ಲೇಖನದಲ್ಲಿ ನಿರೂಪಿತವಾಗಿರುವಂತಹ ಕಥೆ. ಹೆಣ್ಣಿನ ದೌರ್ಬಲ್ಯದ ಸ್ಥಿತಿಯನ್ನು ದುರುಪಯೋಗಪಡಿಸಿಕೊಂಡ ಗಂಡಸರ ದೌರ್ಜನ್ಯದ ಒಂದು ಮುಖ ಈ ಕಥೆಯಲ್ಲಿ ಮೂಡಿಬಂದಿದೆ. ಎಳೆವಯಸ್ಸಿನಲ್ಲಿ ಅದುಮಿಟ್ಟುಕೊಳ್ಳುವ ಭಾವನೆಗಳಿಗೆ ಒತ್ತಾಸೆಯಾಗಿ ಗಂಡಿನ ಪ್ರೇರಣೆ ದೊರೆತಾಗ ಹೆಣ್ಣು ಸಹಜವಾಗಿಯೇ ಜಾರುವಳು. ಆದರೆ ಕೊನೆಗೆ ಅದರಿಂದುಂಟಾಗುವ ಪರಿಣಾಮಕ್ಕೆ ಹೆಣ್ಣೊಬ್ಬಳೇ ಕಾರಣವಾಗುವಳು. ಅದರಲ್ಲಿ ಗಂಡಸಿನ ಪಾಲೇನು ಇಲ್ಲವೆಂದು ಹೇಳುವ ಸಮಾಜದಲ್ಲಿ ಹೆಣ್ಣೊಬ್ಬಳೆ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದಂತಹ ಪರಿಸ್ಥಿತಿ ಉಂಟಾಗುತ್ತದೆ. ಇಡೀ ಕತೆಯ ಉದ್ದಕ್ಕೂ ಶಾಂತಳ ಮಾನಸಿಕ ಆಂತರ್ಯದ ತುಮುಲವನ್ನು ನೋಡಬಹುದು.

ರಘುವಿನ ಆಕರ್ಷಕ ಬಣ್ಣದ ಮಾತಿಗೆ ಮರುಳಾಗಿ ಮೋಸ ಹೋದ ಶಾಂತಿ ಸಮಾಜಕ್ಕೆ ಹೆದರಿ ತನ್ನ ಭಯವನ್ನು, ತನ್ನ ನೋವನ್ನು ಪತ್ರದ ಮುಖೇನ ರಘುವಿಗೆ ಹೇಳಿಕೊಳ್ಳುತ್ತಾಳೆ.

> "ರಘು ಯಾವ ದಿನ ನಿನ್ನೊಡನೆ ಅಡ್ಡಹಾದಿಯಲ್ಲಿ ಕಾಲಿಟ್ಟನೋ ಆ ದಿನದಿಂದ ನನ್ನ ಮನಸ್ಸಿಗೆ ಶಾಂತಿಯಿಲ್ಲ. ಭಗವಂತನಿದಿರಿನಲ್ಲಿ ನಾನು ನಿನ್ನವಳೆ ಆದರೂ ಜನರಿಗೆ ತಿಳಿದರೆ ಅವರು ನನ್ನನ್ನು ತಿರಸ್ಕರಿಸದಿರಲಾರರು. ಜನರ ಕಣ್ಣೆದಿರಿನಲ್ಲೇ ನನ್ನನ್ನು ನಿನ್ನವಳನ್ನಾಗಿ ಮಾಡಿಕೊಳ್ಳುವೆಯೆಂದು ಹಿಂದೆ ನೀನು ಹೇಳಿದ್ದೆ. ನೀನು ಹೋದಾಗಿನಿಂದ ಯಾವುದೇ ಸಮಾಚಾರವಿಲ್ಲ. ನೀನೇ ನನ್ನನ್ನು ಕೊಚ್ಚೆಗೆ ನೂಕಿದೆ. ನೀನು ಅಲ್ಲಿಂದ ನನ್ನನ್ನು ಎತ್ತದಿದ್ದರೆ ಇನ್ನಾರು ತಾನೆ ಎತ್ತುವರು? ನನ್ನ ಕೈಬಿಡಬೇಡ ರಘು"[೨]

ಎಂದು ಹೇಳುವಲ್ಲಿ ಶಾಂತಿಯ ಅಸಹಾಯಕತೆಯ ಸ್ಪಷ್ಟವಾದ ಚಿತ್ರಣವಿದೆ. ಶಾಂತಿಯ ದಯನೀಯ ಸ್ಥಿತಿ ಓದುಗರಲ್ಲಿ ಮರುಕವನ್ನು ಉಂಟುಮಾಡುತ್ತದೆ. ಇಷ್ಟಕ್ಕೆ ಇದು ನಿಲ್ಲದೆ ಮುಂದುವರೆಯುತ್ತದೆ. ಶಾಂತಿ ರಘುವಿನಲ್ಲಿ ಅಂಗಲಾಚಿ ಬೇಡಿಕೊಳ್ಳುತ್ತಾಳೆ. "ಅಂದಿನಂತೆ ನನ್ನನ್ನು ಪ್ರೀತಿಸಲು ಸಾಧ್ಯವಿಲ್ಲದಿದ್ದರೂ ನಿನ್ನ ಹೃದಯದ ಒಂದು ಮೂಲೆಯಲ್ಲಾದರೂ ಒಂದಿಷ್ಟು ಸ್ಥಳ ಕೊಡು, ನಿರಾಕರಿಸಬೇಡ" ಎಂದು ದಯನೀಯ ಭಾವನೆಯಿಂದ ಬೇಡಿಕೊಳ್ಳುತ್ತಾಳೆ. ಆದರೆ ಆ ನಯವಂಚಕ ರಘು ಆಕೆಯ ಮಾತನ್ನು

ಲೆಕ್ಕಿಸುವುದಿಲ್ಲ. "ಆಚಾರದ ಅಧಿಕಾರ ಅಬಲೆಯರ ಮೇಲೆಯೆ"[೧೩] ಎಂದು ಶಾಂತಿಯ ಹೇಳುವ ಮಾತುಗಳಲ್ಲಿ ಪುರುಷಪ್ರಧಾನ ವ್ಯವಸ್ಥೆಯ ಹಾಗೂ ಅದರ ಮುಖಂಡರುಗಳಾದ ಗಂಡಸರ ಮೂಗಿನ ನೇರಕ್ಕೆ ನಿರ್ಮಾಣವಾಗಿರುವಂಥ ರೂಢಿ ಸಂಪ್ರದಾಯಗಳನ್ನು ಕುರಿತು ಪ್ರಶ್ನಿಸುವಂತಹ ವೈಚಾರಿಕತೆಯನ್ನು ಕಥೆಗಾರ್ತಿ ಮೆರೆದಿದ್ದಾರೆ. ಗೌರಮ್ಮ ಮೂಡಿಸಿದ ವ್ಯಂಗ್ಯವನ್ನು ಗಮನಿಸಿ ಮಹಿಳೆಯರ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಪ್ರಾಮಾಣಿಕ ಪ್ರಯತ್ನದ ಅವಶ್ಯಕತೆ ಇದೆ. ಇಲ್ಲೆಲ್ಲ ಕಥೆಗಾರ್ತಿಯು 'ಕಥಾ-ಕಥನ'ದ ತಂತ್ರಗಾರಿಕೆ ಸಹಜವಾಗಿಯೂ ವೈಶಿಷ್ಟ್ಯಪೂರ್ಣವಾಗಿಯೂ ಬಂದಿರುವುದನ್ನು ಕಾಣಬಹುದು.

ಗೌರಮ್ಮನವರು ತಾವು ಹೇಳಬೇಕಾದುದನ್ನು ನೇರವಾಗಿ, ಸಂಕ್ಷಿಪ್ತವಾಗಿ, ಖಚಿತವಾಗಿ ಹೇಳುತ್ತಾರೆ ಎನ್ನುವುದಕ್ಕೆ ಈ ಮೇಲಿನ ಒಂದು ಮಾತುಗಳೇ ಸಾಕು. ಇಷ್ಟಕ್ಕೆ ಸುಮ್ಮನಿರದ ಗೌರಮ್ಮ ಮುಂದುವರೆದು ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಗಂಡಸಿನ ಭಂಡತನವನ್ನು ರಘುವಿನ ಮೂಲಕ ಬಯಲಿಗೆಳೆಯುತ್ತಾರೆ. ಶಾಂತಿ 'ನನ್ನನ್ನು ಕೊಚ್ಚೆಯಲ್ಲಿ ನೀನೇ ನೂಕಿದೆ' ಎಂದು ಸತ್ಯವನ್ನು ಹೇಳಿದಾಗ ರಘು ಅದನ್ನು ಅಲ್ಲಗಳೆದು ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಮಾತುಗಳನ್ನು ಆಡುತ್ತಾನೆ. ಇಲ್ಲಿ ರಘುವಿನ ಮಾತುಗಳಿಂದ ಗಂಡಸರ ನಡತೆಯ ರೀತಿಯನ್ನು ಅರಿಯಲು ಸಾಧ್ಯ.

> "ನಾನೇ ನಿನ್ನನ್ನು ಕೊಚ್ಚೆಗೆ ನೂಕಿದೆ ಎಂದು ಬರೆದಿರುವೆ. ನೀನು ಬೀಳಲು ಆತುರದಿಂದಿದ್ದುದರಿಂದಲ್ಲವೇ ನಾನು ನೂಕಿದ್ದು? ಅಂತಹ ಸಾಧ್ವಿಯಾಗಿದ್ದರೆ ಹಿಂದೆಯೇ ನಿನಗೆ ಬುದ್ಧಿಯಿರಬೇಕಿತ್ತು. ಈಗ ನನ್ನನ್ನು ದೂರಿ ಏನು ಪ್ರಯೋಜನ? ನಿನ್ನನ್ನು ಇನ್ನಾರಾದರೂ ಮದುವೆಯಾಗುವವರಿದ್ದರೆ ಮದುವೆ ಯಾಗು, ನನ್ನಡ್ಡಿಯೇನೂ ಇಲ್ಲ"[೧೪]

ಈ ಮೇಲಿನ ಮಾತುಗಳಿಂದ ಗಂಡಸಿನ ಬೇಜವಾಬ್ದಾರಿತನ, ತನ್ನ ತಪ್ಪನ್ನು ಒಪ್ಪಿಕೊಳ್ಳಲಾರದ ಅಮಾನವೀಯತೆಯನ್ನು, ಜಾರಿಕೆಯ ಮಾತುಗಳ ಸ್ವಭಾವದ ಚಿತ್ರಣವನ್ನು ನೀಡಿರುವುದನ್ನು ಗಮನಿಸಬಹುದು.

ಗಂಡಸಿನ ಬಣ್ಣದ ಮಾತಿಗೆ ಮರುಳಾಗಿ ಗರ್ಭಿಣಿಯಾಗಿ ಅವನಿಂದ ತಿರಸ್ಕೃತಳಾಗಿ ಶಾಂತಿಯಂಥ ಅನೇಕ ಹೆಣ್ಣುಗಳು ನೆಲೆತಪ್ಪಿದ ಹಕ್ಕಿಯಂತೆ ತಿರುಗುವುದನ್ನು ಕಂಡು ಸಮಾಜ ತಪ್ಪನ್ನೆಲ್ಲಾ ಅವಳ ಮೇಲೆ ಹಾಕಿ, ಅವಳ ಬಗ್ಗೆ ಉದಾಸೀನತೆ, ತಾತ್ಸರ ತೋರುತ್ತಾ, ತಮ್ಮ ಮಾತುಗಳಿಂದ ಚುಚ್ಚುತ್ತಾ, ಹದ್ದುಗಳ ಹಾಗೇ ಅವಳ ಮೇಲೆ ಹರಿಹಾಯ್ದಾಗ ಅನಿವಾರ್ಯವಾಗಿ, ಬೇರೆ ದಾರಿ ಕಾಣದೆ ತನ್ನ ಜೀವನಕ್ಕೆ ವಿದಾಯ ಹೇಳಬೇಕಾಗುತ್ತದೆ. ಮನೆಯ ಯಜಮಾನ ಹೆಣ್ಣೇ ಆಗಿರಲಿ, ಗಂಡೇ ಆಗಿರಲಿ, ಆತ ದುಡಿಯುವಂತಿದ್ದರೆ, ಆತನ ದುಡಿಮೆಯ ಮೇಲೆ ಬದುಕುವ ಕುಟುಂಬದ ಇತರೇ ಸದಸ್ಯರುಗಳಿಗೆ ಆ ವ್ಯಕ್ತಿಗಳ ಬಗ್ಗೆ ಆತ್ಮೀಯತೆಗಿಂತಲೂ ಭಯವೇ ಹೆಚ್ಚಾಗಿರುತ್ತದೆ. ಹಾಗಾಗಿ ಇತರ ಸದಸ್ಯರು ತಮ್ಮ ಸುಖ-ದುಃಖಗಳನ್ನು ಹಂಚಿಕೊಳ್ಳುವುದಿಲ್ಲ. ಅದೇ ರೀತಿ ಅವುಗಳನ್ನು ಸಮರ್ಥಿಸಿಕೊಳ್ಳುವ ಆರ್ಥಿಕ ಬಲವಾಗಲಿ, ಮನೋಸ್ಥೈರ್ಯವಾಗಲಿ ಅವರಿಗೆ ಇರುವುದಿಲ್ಲ. ಹೀಗಿರುವಾಗ ಅಂಥ ಸಂದರ್ಭದಲ್ಲಿ

ಅವರಿಗೆ ಉಳಿಯೋದು ಒಂದೇ ದಾರಿ ಆತ್ಮಹತ್ಯೆ. ಇದನ್ನು ಶಾಂತಿ ಆತ್ಮಹತ್ಯೆ ಮಾಡಿಕೊಳ್ಳಲು ಹೋಗುವ ಮುನ್ನ ಬರೆದಿಟ್ಟ ಪತ್ರಗಳ ಸಾಲಿನಿಂದ ಖಚಿತತೆಯನ್ನು ಮಾಡಿಕೊಳ್ಳಬಹುದು.

> "ಅಣ್ಣಾ, ಕೆಟ್ಟ ಹೆಸರನ್ನು ಪಡೆಯದ ನಮ್ಮ ಮನೆತನಕ್ಕೆ ನಾನು ಕಲಂಕ ತಂದಿದ್ದೇನೆ. ಆದರದು ಇತರರಿಗೆ ತಿಳಿಯುವ ಮೊದಲೇ ನಾನದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೇನೆ. ನಿನಗಾಗಲೀ ಅತ್ತಿಗೆಗಾಲೀ ನನ್ನ ಸ್ಥಿತಿಯನ್ನು ಹೇಳುವ ಧೈರ್ಯ ನನಗಿಲ್ಲ. ನಿನ್ನ ವ್ಯಸನವನ್ನೂ, ಅತ್ತಿಗೆಯ ತಿರಸ್ಕಾರವನ್ನೂ ಸಹಿಸುವ ಶಕ್ತಿ ನನಗಿಲ್ಲ. ಹೇಳದೆ ಹೊರಟು ಹೋಗುತ್ತಿರುವುದಕ್ಕೆ ಕ್ಷಮಿಸು"[೨೫]

ಈ ಮಾತಿನಲ್ಲಿ ಕಥೆಯ ಆಶಯವೂ ಆಶಯದ ಕಥನವೂ ಜೋಡು ಹೆಣಿಗೆಯಾಗಿ ರೂಪಿತಗೊಂಡಿದೆ.

ಶಾಂತಿ ತಾಯಿಯಿಲ್ಲದ ತಬ್ಬಲಿ. ಅಣ್ಣ-ಅತ್ತಿಗೆಯರ ಆಶ್ರಯದಲ್ಲಿ ಬೆಳೆದವಳು. ಅಣ್ಣ ಎನ್ನುವ ಸಂಬಂಧ ನಿಜವಾಗಿಯೂ ತಂಗಿಯ ಎಲ್ಲಾ ವಿಷಯಗಳಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಬೇಕಾಗಿತ್ತು. ಅಣ್ಣನಲ್ಲಿ ಭಯಕ್ಕಿಂತ ಆತ್ಮೀಯತೆ, ಸಲುಗೆ ತಂಗಿಯಲ್ಲಿ ಇದ್ದುದೇ ಆಗಿದ್ದರೆ ಶಾಂತಿ ನೇರವಾಗಿ ತನ್ನ ಅವಸ್ಥೆಯ ಕುರಿತು ಹೇಳಿಕೊಳ್ಳಬಹುದಾಗಿತ್ತು. ಹೋಗಲಿ ಗಂಡಸರು ಎನ್ನುವ ಸಂಕೋಚವಿದ್ದರೆ ಅತ್ತಿಗೆಯ ಮುಂದೆಯಾದರೂ ಹೇಳಬಹುದಾಗಿತ್ತು. ಇದ್ಯಾವುದೂ ಶಾಂತಿಯಿಂದ ಸಾಧ್ಯವಾಗದೆ, ಎಲ್ಲಕ್ಕಿಂತಲೂ ಕಟ್ಟುನಿಟ್ಟಾಗಿ ಹಿರಿಯರು ತಲೆ-ತಲಾಂತರದಿಂದ ಉಳಿಸಿಕೊಂಡು ಬಂದ ಮನೆತನದ ಮಾರ್ಯಾದೆಯನ್ನು ಮುಂದಿನ ಪೀಳಿಗೆಯು ಕೊಂಡೊಯ್ಯಬೇಕಾಗುತ್ತದೆ. ಹಾಗೇ ಮುಂದುವರೆಸಿಕೊಂಡು ಹೋಗದೆ ಮನೆತನದ ಘನತೆ-ಗೌರವಗಳಿಗೆ ಕುಂದುಂಟಾಗುವಂಥ ಕೆಲಸ ಮಾಡಿದರೆ ಅವರಿಗೆ ಮನೆಯಲ್ಲಿ ಸ್ಥಾನವಿಲ್ಲ. ಇಂಥ ಸಂದರ್ಭದಲ್ಲಿ ಶಾಂತಿ ಸಮಾಜ ಒಪ್ಪದ ಪಾರಂಪರ್ಯವಾಗಿ ನಡೆದುಕೊಂಡು ಬಂದ ಮನೆತನದ ರೀತಿ-ರಿವಾಜುಗಳನ್ನು ಮೀರಿ ನಡೆದಳು. ಅದು ಅಕ್ಷಮ್ಯ ಅಪರಾಧವಾಗಿದೆ. ನಿತ್ಯ ಜನರು ತಮ್ಮ ಮಾತಿನಿಂದ ಕೊಲ್ಲುವ ಹೊಸ ವಿಧಾನ. ಸಮಾಜದ ಜನರಿಗೆ ಅದು ಚೆನ್ನಾಗಿ ಗೊತ್ತು. ಅಂಥದ್ದನ್ನು ನೆನೆದು ಹೆದರಿದ ಶಾಂತಿ ತನ್ನ ತಪ್ಪನ್ನು ಕ್ಷಮಿಸಲು ಕೇಳಿಕೊಂಡು ಮನೆಯ ಬಾಗಿಲನ್ನು ದಾಟುತ್ತಾಳೆ. ಮನೆಯವರನ್ನು ಎದುರಿಸುವ ಸಾಮರ್ಥ್ಯವಿಲ್ಲದ ಶಾಂತಿಗೆ ಸಮಾಜವನ್ನು ಎದುರಿಸುವ ಸಾಮರ್ಥ್ಯ ಎಲ್ಲಿಂದ ಬರಬೇಕು. ಹಾಗಾಗಿ, ಅವಳಿಗೆ ಆತ್ಮಹತ್ಯೆಯ ಮಾರ್ಗವೇ ಸರಿಯಾಗಿ ಕಂಡಿರಬೇಕು. ಶಾಂತಿ ಅದೇ ಮಾರ್ಗವನ್ನು ಹಿಡಿಯುತ್ತಾಳೆ. ಶಾಂತಿಯ ಈ ಆಯ್ಕೆ ಆ ಸಮಸ್ಯೆಗೆ ಹತಾಶ ಮನಸ್ಸು ಕಂಡುಕೊಂಡ ಪರಿಹಾರ ಮಾತ್ರ. ಏಕೆಂದರೆ ಮನೆಬಿಟ್ಟು ಹೋಗುವ ಮೊದಲು ಶಾಂತಿ ಬರೆದಿಟ್ಟಿದ್ದ ಪತ್ರ ಸಿಕ್ಕಿದಾಗ ಅವಳ ಅಣ್ಣ ತನ್ನ ತಪ್ಪನ್ನು ಗ್ರಹಿಸಿ, ಪಶ್ಚಾತ್ತಾಪ ಪಡುವುದಷ್ಟೇ ಅಲ್ಲ. ಏನಾದರೂ ಮಾಡಿ ಅವಳನ್ನು ಹುಡುಕಿ ಹಿಂದಕ್ಕೆ ಕರೆತಂದು, ಅವಳ ಬಾಳನ್ನು ಸರಿಪಡಿಸಬೇಕೆಂದು ಪ್ರಯತ್ನಿಸುತ್ತಾನೆ. ಆದರೆ ಈ ನಿರ್ಧಾರ, ಈ ಕಾರ್ಯಶೀಲತೆಗಳಲ್ಲಿ ತಡವಾಗಿದ್ದರಿಂದ ಶಾಂತಿ ಸಾಯುವುದನ್ನು ತಪ್ಪಿಸಲಾಗುವುದಿಲ್ಲ. ಕಥೆಯ ಕೊನೆಯಲ್ಲಿ ನಾಲ್ಕು ಮೈಲು ದೂರದಲ್ಲಿರುವ ಕೆರೆಯಲ್ಲಿ ಒಂದು ಹೆಂಗಸಿನ ಶವವು ಸಿಕ್ಕಿತು. ಈ ಇಡೀ ಸಮಸ್ಯೆಯ ಭೀಕರತೆಯನ್ನು ಸೂಚಿಸುವಂತೆ, ದೊಡ್ಡ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಶಾಂತಿ, ರಘು, ನಾನ ಮತ್ತು ರಾಜ ಇವರುಗಳ ನಡುವಿನ ಪತ್ರ ವ್ಯವಾಹರದ ರೂಪದಲ್ಲಿ ಕತೆ ಬಿಚ್ಚಿಕೊಳ್ಳುವಂತೆ ಮಾಡಿ ಲೇಖಕಿ, ನೇರ ನಿರೂಪಣೆಯ ಭಾವುಕತೆಯ ಅಪಾಯದಿಂದ ಪಾರಾಗುತ್ತಾರೆ. ಅಷ್ಟೇ ಅಲ್ಲ, ಸಮಸ್ಯೆಯ ಹಲವು ಮಗ್ಗಲುಗಳನ್ನು ಪರಿಶೀಲಿಸುತ್ತಾ, ಸರಳ ಪರಿಹಾರಕ್ಕೆ ಯತ್ನಿಸದೆ, ಆ ಸಮಸ್ಯೆಯ ಸಂಕೀರ್ಣತೆಯನ್ನು ಓದುಗರಿಗೆ ಪರಿಚಯಿಸುತ್ತಾರೆ.

ನಾವು ನಮ್ಮದೇ ಆದ ಕೆಲವು ಮೌಲ್ಯಗಳ ಹಿಡಿತದಲ್ಲಿ ಸಿಕ್ಕು, ಸ್ವತಂತ್ರವಾಗಿ ಬದುಕುವ ಹಕ್ಕನ್ನು ಕಳೆದುಕೊಂಡಿದ್ದೇವೆ. ದುಡ್ಡಿನ ಮೌಲ್ಯಗಳು ನಮ್ಮನ್ನು ಆಳುತ್ತಿವೆ. ಜಾತಿ, ಕುಲ, ಅಂತಸ್ತು ಎನ್ನುವ ಹೆಸರಿನಲ್ಲಿ ಮುಗ್ಧ ಜನರು ಬಲಿಯಾಗಿರುವುದನ್ನು ನೋಡಿದರೆ ಬದುಕಿನ ಅರ್ಥವಾದರೂ ಏನು ಎನ್ನುವ ಪ್ರಶ್ನೆ ಕಾಡದೆ ಇರದು. ಇಂತಹ ಪ್ರಶ್ನೆಗಳು ಸಾಮಾಜಿಕವಾಗಿ ಉದ್ಭವವಾದಾಗ ಮಾತ್ರ ಅದಕ್ಕೊಂದು ಅರ್ಥವಿರುತ್ತದೆ. ಆದರೆ ಅವುಗಳು ವೈಯಕ್ತಿಕ ಸ್ತರದಲ್ಲಿಯೇ ಹುಟ್ಟಿ ಅಲ್ಲಿಯೇ ಚಿಂತನೆಗೆ ಆಸ್ಪದ ಕೊಟ್ಟು ಕಾಳಜಿಪರವಾದ ಮಾತುಗಳನ್ನು ಆಡಿಸಿ, ಬರೆಸಿಬಿಡುವುದರಿಂದ ವೈಯಕ್ತಿಕ ಸ್ತರದಲ್ಲಿಯೇ ನಿಲ್ಲುತ್ತವೆ. ಹಾಗಾಗಿ, ಅಂದಿನಿಂದ ಇಂದಿನವರೆಗೂ ಸಮಸ್ಯೆಗಳು ಜೀವಂತವಾಗುಳಿದುಕೊಂಡು ಬಂದಿವೆ. ಇಲ್ಲಿರುವ ಸಂಬಂಧಗಳು ಮೂಲ ಮಾನವೀಯ ಸ್ತರದಲ್ಲಿ ಹುಟ್ಟಿರುವಂತಹವಲ್ಲ, ಅವೇನಿದ್ದರೂ ಸಾಮಾಜಿಕವಾಗಿ ಹುಟ್ಟಿಕೊಂಡು ಬಂದಿರುವಂತಹವು. ಸಮಾಜದಲ್ಲಿಯ ದುಡ್ಡು, ಅಧಿಕಾರ, ಅಂತಸ್ತಿನ ಆಧಾರದ ಮೇಲೆಯೇ ಸಂಬಂಧಗಳ ಅರ್ಥಗಳನ್ನು ಹುಡುಕಲು ಹೊರಟಿರುವಂಥವುಗಳು. ಇಂತಹ ಸಂದರ್ಭಗಳಲ್ಲಿ ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿಯೆನ್ನುವಂಥವುಗಳೆಲ್ಲ ಬರೀ ಶಬ್ದಗಳಾಗಿ ಉಳಿದಿವಿಯೇ ಹೊರತು ಮನುಷ್ಯನ ಅಂತರಂಗವನ್ನು ಪ್ರವೇಶಿಸಿ ಸುಖ-ದುಃಖವನ್ನು ಆಲಿಸಿಲ್ಲ, ಅವನ್ನು ಹಂಚಿಕೊಂಡಿಲ್ಲ ಎಂಬುದನ್ನು ಇಲ್ಲಿರುವ ಕಥನತಂತ್ರವು ಆಶಯದ ಮಟ್ಟದಲ್ಲಿ ವ್ಯಾಖ್ಯಾನಿಸಿ ಬಿಡುತ್ತದೆ.

೫. ಮನುವಿನ ರಾಣಿ

ಗೌರಮ್ಮನವರ 'ಮನುವಿನ ರಾಣಿ' ಎಂಬ ಕಥೆಯು ಗೌರಮ್ಮನವರ ಕಥಾ-ಕಥನ ಕಲೆಯ ಪರಿಪಕ್ವತೆಗೇರಿದ್ದುದಕ್ಕೆ ಸಾಕ್ಷಿಯಾಗಿದೆ. ವೇಶ್ಯೆಯೊಬ್ಬಳು ಅತಿಶ್ರೇಷ್ಠ ಪ್ರೇಮಿಯಾಗಿದ್ದರೂ ಕೂಡ, ಸಮಾಜ ಆಕೆಯನ್ನು ನೋಡುವ ರೀತಿ, ಅವಳ ಸಮಸ್ಯೆ, ನೋವು-ನಲಿವುಗಳನ್ನು ಮಾರ್ಮಿಕವಾಗಿ ಈ ಕತೆಯಲ್ಲಿ ವಿವರಿಸಲಾಗಿದೆ. ವೇಶ್ಯೆಯೊಬ್ಬಳು ತನ್ನ ವೃತ್ತಿ ಧರ್ಮಕ್ಕೆ ವಿರುದ್ಧವಾಗಿ ಬಡವನೊಬ್ಬನನ್ನು ಅಪರಿಮಿತವಾಗಿ ಪ್ರೇಮಿಸಿ, ಅವನಿಗಾಗಿ ಪಟ್ಟಯಾತನೆ, ಮಾಡಿದ ಸೇವೆ-ತ್ಯಾಗಗಳ ಮನಮಿಡಿಯುವ ಕಥೆ ಇದು.

ವೇಶ್ಯೆಯಾದ ರಾಜಮ್ಮನ ಜೀವನವನ್ನು ಚಿತ್ರಿಸುವ "ಮನುವಿನ ರಾಣಿ" ಮೇಲುನೋಟಕ್ಕೆ ಸಾಮಾನ್ಯ ಕಥೆ ಅನ್ನಿಸಿದರೂ ಹೊಸ ಅಂಶ ಇದೆ. ವೇಶ್ಯೆಯರೆಲ್ಲಾ 'ಅನೈತಿಕ ಜೀವಿಗಳು' ಎಂಬ ನಂಬಿಕೆ ಹೊಂದಿದ್ದ ವೈದ್ಯರು ವೇಶ್ಯೆ ರಾಜಮ್ಮ ಮತ್ತು ಅವಳ ಪ್ರೇಮಿ ಮನುವಿನ ಬಗ್ಗೆ ತಿಳಿದ ಮೇಲೆ ಅನುಕಂಪ ಪ್ರೀತಿಯನ್ನು ಬೆಳೆಸಿಕೊಂಡರೆ, ಅವರ ಹೆಂಡತಿ ರಾಜಮ್ಮನ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ಹೊಂದಿದ್ದೇ ಕೊಳಕು ಮನಸ್ಸಿನ ಸೂಚಕ ಎಂಬ ತಿಳುವಳಿಕೆ ಪಡೆಯುತ್ತಾಳೆ. ವೈದ್ಯನಾದ ನಿರೂಪಕ ಮೊದಮೊದಲು ರಾಜಮ್ಮನ ಬಗ್ಗೆ ಸಾಂಪ್ರದಾಯಿಕ ದೃಷ್ಟಿಯನ್ನೇ ಇಟ್ಟುಕೊಂಡಿರುತ್ತಾನೆ. ಆದ್ದರಿಂದಲೇ

ಹುಡುಗ ಸುಬ್ಬು ಕರೆಯಲು ಬಂದಾಗ 'ರಾಜಮ್ಮನ ಮನೇಲಿ ಬಾಳ ಕಾಯ್ಲೆ ಅಂತೆ. ಈಗ್ಲೇ ಬರಬೇಕಂತೆ' ಎಂದ. ರಾಜಮ್ಮ ಅವಳ ಹೆಸರನ್ನು ಕೇಳಿದ ವೈದ್ಯನಿಗೆ ಕದ ತೆರೆಯುವಾಗ ಇದ್ದಂತಹ ಸಹಾನುಭೂತಿ, ಕರುಣೆ ಎಲ್ಲವೂ ಮಾಯವಾಗಿತ್ತು. ವೈದ್ಯನ ಹೆಂಡತಿ ಪಾರ್ವತಿಯೂ ಸಹ ಅದೇ ನಿಲುವನ್ನು ಹೊಂದಿರುವಂತಹ ಹೆಂಗಸು.

> "ಅವಳಿಗೇನೀಗ ಕೇಡು! ಬೆಳಿಗ್ಗೆ ಹೋದರೆ ಸಾಲದೇನೋ? ಇಷ್ಟಕ್ಕೂ ಸತ್ತು ಹೋದರೆ ಭೂಮಿಭಾರವೇ ಕಮ್ಮಿಯಾಯ್ತು"[೧೬]

ಎಂದು ನುಡಿಯುತ್ತಾಳೆ. ಒಬ್ಬ ಸೂಳೆಯ ಮನೆಗೆ ರೋಗಿಯನ್ನು ನೋಡಲು ಹೇಗೆ ಹೋಗುವುದು ಎಂಬ ಮಡಿವಂತಿಕೆ, ವರ್ಗ-ವರ್ಣ ವಿಕಾರಗಳನ್ನಿಟ್ಟುಕೊಂಡಿದ್ದಂತವನು. ಮತ್ತೊಮ್ಮೆ ಕದ ಬಡಿಯುವ ಸದ್ದಾದಾಗ ಕದ ತೆರೆದು ನೋಡಿದಾಗ ಮತ್ತದೇ ಸುಬ್ಬು. ಕಾಯಿಲೆ ಜೋರಂತೆ, ಈಗಲೇ ಬರಬೇಕಂತೆ ಎಂದು ಕರೆದಾಗ ತನ್ನ ವೈದ್ಯವೃತ್ತಿಯ ಕರ್ತವ್ಯ ನೆನಪಿಗೆ ಬಂದು ರಾಜಮ್ಮನ ಮನೆಗೆ ಹೋಗಿ ರೋಗಿಯನ್ನು ಪರೀಕ್ಷಿಸಿದ. ಅದೂವರೆಗೂ ರಾಜಮ್ಮನ ಬಗ್ಗೆ ಅವನಲ್ಲಿ ಇದ್ದಂತಹ ತಪ್ಪು ತಿಳುವಳಿಕೆಯನ್ನು, ಅಭಿಪ್ರಾಯವನ್ನೆಲ್ಲಾ ಬದಲಾಯಿಸಿಕೊಂಡ. ರಾಜಮ್ಮನ ವ್ಯಕ್ತಿತ್ವದ ಉದಾತ್ತತೆಯ ಅರಿವಿನೊಂದಿಗೆ ವೈದ್ಯನ ಮನೋಭಾವದಲ್ಲಿ ಪರಿವರ್ತನೆಯಾಗಿ ಅದು ವಿಕಾಸ ಹೊಂದುತ್ತದೆ. ಕೊನೆಗೆ ಅವನ ಮನ-ಮಂಥನದ ಮೂಲಕವೇ ವೈದ್ಯನ ಅಂತಃಕರಣದಲ್ಲಿ ಮಾನವೀಯತೆಯ ಮೌಲ್ಯ ಮೂಡುತ್ತದೆ. ಇಲ್ಲಿಯ ಸನ್ನಿವೇಶ, ಭಾವನೆ, ವಿಚಾರಗಳೆಲ್ಲವೂ ವಿಶೇಷ ರೀತಿಯಲ್ಲಿ ಸಂಯೋಗ ಹೊಂದಿ ಕಥೆಯನ್ನು ಒಳ್ಳೆಯ ಕಲಾಕೃತಿಯ ಮಟ್ಟಕ್ಕೇರಿಸುವಲ್ಲಿ ಸಹಾಯವಾಗುತ್ತವೆ.

> "ನಾನು ಎಷ್ಟೋ ಜನರು ಸಾಯುವುದನ್ನು ನೋಡಿದ್ದೇನೆ. ಅದೆಷ್ಟೋ ಜನರು ಎದೆ ಎದೆ ಬಡಿದುಕೊಂಡು ಅಳುವ ಕರುಣ ಆಕ್ರಂದನವನ್ನೂ ಕೇಳಿದ್ದೇನೆ. ಆದರೆ ಅದಾವ ದೃಶ್ಯಗಳೂ ರಾಜಮ್ಮನ ಮೂಕರೋದನದಷ್ಟು ವ್ಯಥೆಯನ್ನುಂಟು ಮಾಡಿರಲಿಲ್ಲ"[೧೭]

ಇಲ್ಲಿ ಗೌರಮ್ಮನವರು ವೈದ್ಯರಿಂದ ಒಬ್ಬ ವೇಶ್ಯೆಯ ಬಗ್ಗೆ ಕರುಣೆಯ ತುಂಬಿದ ಮಾತುಗಳನ್ನು ಆಡಿಸಿದ್ದಾರೆ. ಸಮಾಜದಲ್ಲಿ ಅವಳು ಒಂದು ಜೀವ, ಅವಳಿಗೂ ಕರುಣೆ, ಪ್ರೀತಿ, ಪ್ರೇಮದ ಆವಶ್ಯಕತೆ ಇದೆ ಎಂಬುದನ್ನು ಎತ್ತಿಹಿಡಿದ್ದಾರೆ. ವೈದ್ಯನು ಕ್ರಮೇಣ ತನ್ನ ಅಭಿಪ್ರಾಯಗಳನ್ನು ಬದಲಿಸಿಕೊಳ್ಳುತ್ತ ಮಾನವೀಯ ಮೌಲ್ಯಗಳನ್ನು ಪಡೆದುಕೊಳ್ಳುತ್ತ ಕೇವಲ ಪ್ರಜ್ಞೆಯ ಮಟ್ಟದಲ್ಲಷ್ಟೇ ಅಲ್ಲದೆ, ಇರುವಿಕೆಯ ಮಟ್ಟದಲ್ಲೂ ಸಹ ಮನುಷ್ಯನಾಗುತ್ತ ಬೆಳೆಯುವುದು ಸೂಕ್ಷ್ಮವಾಗಿ ದಾಖಲಾಗಿರುವುದನ್ನು ಗಮನಿಸಬಹುದು. ವೈದ್ಯ ರಾಜಮ್ಮನ ಮನೆಗೆ ಹೋದಾಗ ಅವಳ ಪರಿಸ್ಥಿತಿ ಕಂಡು ತುಂಬಾ ಕಳವಳಗೊಂಡ ಹೆಣದ ದಹನವಾಗಿತ್ತು. ರಾಜಮ್ಮಳನ್ನು ಕಂಡಾಕ್ಷಣ ಅವನಲ್ಲಿ ಹಿಂದಿದ್ದಂತಹ ಭಾವನೆಗಳೆಲ್ಲವೂ ಮಾಯವಾಗಿದ್ದವು. ಹಿಂದೆ ಆಕೆಯ ವಿಷಯವಾಗಿ ನೆನೆಸಿಕೊಂಡುದನ್ನೆಲ್ಲಾ ಯೋಚಿಸಿದಾಗ ಅವನಿಗೆ ಅವನ ಮೇಲೆಯೇ ಅಸಹ್ಯ ಭಾವನೆ ಉಂಟಾಗುತ್ತದೆ. ಕೊನೆಗೆ ಯಾರನ್ನಾದರೂ ಜೊತೆಗೆ

ಕಳುಹಿಸುತ್ತೇನೆಂದು ಹೇಳಿ ಅವಳ ಮನೆಯಿಂದ ಹಿಂತಿರುಗಿದ. ಅಂತೂ ಕೊನೆಗೆ ತಮ್ಮ ಮನೆಯ ಕೆಲಸದವಳನ್ನು ಅಂದಿನ ರಾತ್ರಿಯ ಮಟ್ಟಿಗೆ ಹೋಗಲು ಒಪ್ಪಿಸಿದ. ರಾಜಮ್ಮ ವೈದ್ಯನಿಗೆ ಬರೆದಂತಹ ಪತ್ರವನ್ನು ಅವನು ಆತುರದಿಂದ ಓದಲು ಮುಂದಾದ. ರಾಜಮ್ಮ ತನಗೇನು ಬರೆಯುವಂತಹ ವಿಷಯವೇನಿರ ಬಹುದೆಂಬ ಕಾತರ.

ಪತ್ರದಲ್ಲಿ ತನ್ನ ಮತ್ತು ಮನುವಿನ ಸಂಬಂಧ ಕುರಿತು ತನ್ನ ವಿಷಯವನ್ನೆಲ್ಲಾ ಬರೆದಳು. ವೇಶ್ಯೆಯರ ವ್ಯವಹಾರಿಕ ನೆಲೆಗಳನ್ನು ಮೀರಿ ಪ್ರೇಮ ಸಂಬಂಧವಾಗಿ ಬೆಳೆದ ರಾಜಮ್ಮ ಮತ್ತು ಮನು. ಇವರಿಬ್ಬರ ಪ್ರಣಯ ರಾಜಮ್ಮನ ಅಮ್ಮಳ ಕುಟಿಲತೆಯಿಂದಾಗಿ ವಿಲಕ್ಷಣ ರೀತಿಯಲ್ಲಿ ಭಗ್ನಗೊಂಡು ಮನುವಿಗೆ ಅರೇ ಹುಚ್ಚು ಹಿಡಿಯುವಂತಾಯಿತು. ರಾಜಮ್ಮ ತನ್ನ ಮಾನವೀಯ ಮೌಲ್ಯಗಳಿಂದಾಗಿ ಆಕೆ ತನ್ನ ತಾಯಿಯನ್ನು ವಿರೋಧಿಸಿ ಮನುವಿನ ಪ್ರೇಮಕ್ಕೆ ಒಳಗಾಗಿ ಆಕೆ ಅವನನ್ನು ಕರೆದು ತಂದು ಆತನ ಆರೈಕೆ ಮಾಡುತ್ತಾಳೆ. ಮನುವು ಸತ್ತ ನಂತರ ಆಕೆ ಆ ಮನೆಯನ್ನು ಬಿಟ್ಟು ಹೋಗುತ್ತಾಳೆ. ಡಾಕ್ಟ್ರೇ, ನಾನು ನಿಮಗಿದೆಲ್ಲಾ ಬರೆಯಲು ಕಾರಣ ಇಷ್ಟು ವರ್ಷಗಳಲ್ಲಿ ನಮ್ಮಿಬ್ಬರ ವಿಷಯದಲ್ಲಿ ಮನುಷ್ಯರ ರೀತಿಯಲ್ಲಿ ಕರುಣೆಯಿಂದ ವರ್ತಿಸಿದವರಲ್ಲಿ ನೀವೊಬ್ಬರೇ. ಕೊನೆಗಾಲದಲ್ಲಿ ಮಾಡಿದ ಸಹಾಯ ಎಂದೂ ಮರೆಯುವಂತಿಲ್ಲ ಎಂದು ಹೇಳಿ ಪತ್ರವನ್ನು ವೈದ್ಯನಿಗೆ ಬರೆದಳು. ಈ ಪತ್ರವನ್ನು ವೈದ್ಯನ ಹೆಂಡತಿ ಪಾರ್ವತಿಯೂ ಓದಿ ವ್ಯಥೆಪಟ್ಟು 'ತಾನೆಂಥ ಪಾಪಿ' ಎಂದು ತನ್ನನ್ನು ತಾನೇ ಜರಿದುಕೊಳ್ಳುತ್ತಾಳೆ.

ಒಬ್ಬ ವೇಶ್ಯೆಯಲ್ಲೂ ಪ್ರೀತಿ, ಪ್ರೇಮದ ಭಾವನೆ ಇರಲು ಸಾಧ್ಯವೆನ್ನುವುದನ್ನು ಕಥೆಗಾರ್ತಿ ಈ ಕಥೆಯ ಮೂಲಕ ತೋರಿಸಿದ್ದಾರೆ. ಮನುವಿಗೆ ಹುಚ್ಚು ಹಿಡಿದರೂ ಕೊನೆಗೆ ಅವನು ರಾಜಮ್ಮನ ಆಶ್ರಯದಲ್ಲೇ ಕೆಲಕಾಲ ಬಾಳಿ ಮರಣವನ್ನು ಅಪ್ಪುತ್ತಾನೆ. ಮನುವಿನ ಮರಣದ ನಂತರ ರಾಜಮ್ಮನೂ ಕಾಣೆಯಾಗುತ್ತಾಳೆ. ಗಂಡು-ಹೆಣ್ಣಿನ ಪ್ರೇಮದ ಸೆಳೆತಗಳನ್ನು ತೀವ್ರವಾಗಿ ಈ ಕಥೆಯು ಬಿಂಬಿಸುತ್ತದೆ. ಪ್ರಣಯದ ಸೆಳೆತ ಇದರ ಅರಿವಿನಿಂದಾಗಿ ನಿರೂಪಕನ ಮೌಲ್ಯ ಪ್ರಜ್ಞೆಯ ವಿಕಾಸ ಇವನ್ನೆಲ್ಲಾ ಕಲಾತ್ಮಕವಾಗಿ ಹೆಣೆದಿರುವ ಈ ಕಥಾನಕವು ಗೌರಮ್ಮನ ತಾಂತ್ರಿಕ ಪರಿಣತಿಯ ಪ್ರಬುದ್ಧತೆಯನ್ನು ಸೂಚಿಸುತ್ತದೆ.

ಈ ಎಲ್ಲ ಕಥೆಗಳ ಮೂಲಕ ಗೌರಮ್ಮನು ಕಥೆಯನ್ನು ಕಥಿಸುವುದರಲ್ಲಿ ಆಸಕ್ತಿ ಮಾತ್ರ ಇಟ್ಟುಕೊಂಡಿಲ್ಲ. ಈ ಕಥೆಗಳ ಮೂಲಕ 'ಕಥನ'ದ ನೇಯ್ಗೆಯನ್ನು ವಿಶಿಷ್ಟವಾಗಿ ಹೆಣೆದಿದ್ದಾರೆ. ಈ ಎಲ್ಲ ಕಥೆಗಳು, ಕಥನದ ಮೂಲಕವೇ ದಾರಿಯನ್ನು ಕಂಡುಕೊಳ್ಳುತ್ತವೆಂಬುದನ್ನು ಅವರು ನಿರೂಪಿಸಿ ತೋರಿಸಿದ್ದಾರೆ. ಪಾತ್ರ, ಸನ್ನಿವೇಶ, ಘಟನೆ ಮತ್ತು ನಿರೂಪಕತೆಯ ಮೂಲಕ 'ಕಥಾ-ಕಥನ'ದ ಪ್ರಬುದ್ಧತೆಯನ್ನು ವಿಸ್ತರಿಸಿದ್ದಾರೆಂದು ಹೇಳಬಹುದು.

ಟಿಪ್ಪಣಿಗಳು

೧. ಕಂಬನಿ ಮತ್ತು ಚಿಗುರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೧೫೦.

೨. ...ಅದೇ...

೩. ಕಂಬನಿ ಮತ್ತು ಚಿಗುರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೧೫೪.

೪. ಕಂಬನಿ ಮತ್ತು ಚಿಗುರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೧೭೨.

೫. ಕಂಬನಿ ಮತ್ತು ಚಿಗುರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೨೨೦.

೬. ...ಅದೇ...

೭. ಅದೇ ಪುಸ್ತಕ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಪು. ೨೨೧.

೮. ...ಅದೇ... ಪು. ೨೨೨.

೯. ...ಅದೇ... ಪು. ೨೨೨.

೧೦. ...ಅದೇ... ಪು. ೨೨೩.

೧೧. ...ಅದೇ... ಪು. ೨೨೪.

೧೨. ...ಅದೇ... ಪು. ೩೨.

೧೩. ...ಅದೇ... ಪು. ೩೩.

೧೪. ...ಅದೇ...

೧೫. ...ಅದೇ... ಪು. ೩೬

೧೬. ...ಅದೇ... ಪು. ೧೨೬.

೧೭. ...ಅದೇ... ಪು. ೧೨೮.

• • •

ಅಧ್ಯಾಯ ೭

ಉಪಸಂಹಾರ

ಅಧ್ಯಾಯ ೭

ಉಪಸಂಹಾರ

ಮಾತು ಕಲಿತಾಗಿನಿಂದಲೂ ಕಥೆಗಳು ಹುಟ್ಟಿವೆ. ಹುಟ್ಟುತ್ತಲೂ ಇವೆ. ಆದರೆ ಕಥೆಗಳ ಸ್ವರೂಪ ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಭಿನ್ನವಾಗುತ್ತಾ ಹೋಗಿದೆ. ಇದನ್ನು ಅವುಗಳ ಭಾಷೆಯಿಂದ, ಸಾಂಸ್ಕೃತಿಕ ಅಂಶಗಳಿಂದ, ಸ್ವರೂಪದಲ್ಲಿಯ ಭಿನ್ನತೆಯಿಂದ ಅದನ್ನು ಗುರುತಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಬಹುಹಿಂದಿನಿಂದಲೂ 'ಕಥನ' ಕ್ರಿಯೆಯು ಒಂದು ಬಹುಮುಖ್ಯ ತಂತ್ರವಾಗಿ, ವಿನ್ಯಾಸವಾಗಿ ಕೆಲಸ ನಿರ್ವಹಿಸಿದೆ. ಪಂಪನ ಹಾಗೂ ಆನಂತರ 'ಕಥನ' ಪರಂಪರೆಯಲ್ಲಿ ಇದು ಪಡೆಯುವ ಕ್ರಮವು ಕನ್ನಡ ಸಂಸ್ಕೃತಿಯ ಅಧ್ಯಯನದ ಸಂದರ್ಭದಲ್ಲಿ ವಿಸ್ಮಯವನ್ನು ಉಂಟುಮಾಡುತ್ತದೆ. ಹಾಗೆಯೇ ಬೇರೆ ಬೇರೆ ಕಾಲಮಾನದಲ್ಲಿ 'ಕಥನ'ವನ್ನು ಸೃಜನಶೀಲ ಲೇಖಕರು ಹಾಗೂ ಜನಪದ ಸಾಹಿತ್ಯವು ದುಡಿಸಿಕೊಂಡಿರುವಂತಹ ಕ್ರಮ ಭಿನ್ನವಾಗಿದೆ. ಗದ್ಯ-ಪದ್ಯ ಕಾವ್ಯಕೃತಿಗಳಲ್ಲಿ ಕಥನವು ನಿರಂತರವಾಗಿ ಒಂದು ಸಂಸ್ಕೃತಿಯ ಸಂಘರ್ಷವನ್ನು ಮತ್ತು ಅದರ ಆಗು-ಹೋಗುಗಳನ್ನು ಅಭಿವ್ಯಕ್ತಿಸಲು ಸೃಜನಶೀಲರಿಗೆ ಒಂದು ಬಹುಮುಖ್ಯ ಮಾಧ್ಯಮವಾಗಿದೆ. ಇದು ತನ್ನ ಕರ್ತವ್ಯವನ್ನು ಜೀವಂತವಾಗಿ ನಿರ್ವಹಿಸಿಕೊಂಡು ಬಂದಿದೆ. ಇಂತಹ ಕಥನ ಬೇರೆ ಬೇರೆ ಕಾಲಮಾನಗಳಲ್ಲಿ ಮತ್ತು ಬೇರೆಯದೆ ಆದ ವಿನ್ಯಾಸವನ್ನು ಕನ್ನಡ ಸಾಹಿತ್ಯ ಸಂದರ್ಭಗಳಲ್ಲಿ ಮೈಪಡೆದುಕೊಳ್ಳುವ ಕ್ರಮವು ವಿಶಿಷ್ಟ ಬಗೆಯದು. ಆದರೆ 'ಕಥನ' ಈ ಹಿಂದೆ ರೂಪ ತಾಳಿದ ಕ್ರಮಕ್ಕೂ ಪಾಶ್ಚಾತ್ಯ ಸಾಹಿತ್ಯ ಸಂಪರ್ಕದಿಂದ ಮೈಪಡೆಯುವ ರೀತಿಗೂ ಭಿನ್ನತೆಗಳಿವೆ. ಗದ್ಯ-ಪದ್ಯಗಳ ಸಂಘರ್ಷದಿಂದ ಕಥನ ಬಿಡುಗಡೆ ಹೊಂದಿ ಸಂಪೂರ್ಣವಾಗಿ ಗದ್ಯದ ಪ್ರಕಾರವಾಗಿ ಹೊರಹೊಮ್ಮಿರುವುದು ಈ ಶತಮಾನದ ಸಾಂಸ್ಕೃತಿಕ ಪರಿಸರ ಕಂಡುಕೊಂಡ ಕೊಡುಗೆ ಎಂದೆನ್ನಬಹುದು.

ಜನಪದ ಕಥೆಗಳನ್ನು ಹೇಳುವ ಪರಿಪಾಠವನ್ನು ನಮ್ಮ ಅನಕ್ಷರಸ್ಥ ಜನರು ಹೊಂದಿದ್ದರು. ಅವರ ಕಥೆಯ ಪ್ರಾರಂಭ, ಬೆಳವಣಿಗೆ ಮತ್ತು ಮುಕ್ತಾಯ ಈ ಬಗೆಯ ಕ್ರಮವನ್ನು ಅನುಸರಿಸುತ್ತಿದ್ದರು. ಈ ಬಗೆಯ ಕ್ರಮದಿಂದ ಸಣ್ಣಕತೆಗಳನ್ನು ಪರಿಗಣಿಸಿದ್ದೇ ಆದರೆ ಆರಂಭ ಘಟ್ಟದ ಅನೇಕ ಕಥೆಗಾರರ ಕಥೆಗಳಲ್ಲಿ ಜನಪದರ ಸೊಗಡನ್ನು ಕಾಣಬಹುದು. ಆದರೆ ಪಾಶ್ಚಾತ್ಯದ ಪ್ರಭಾವದಿಂದ ಕನ್ನಡ ಸಾಹಿತ್ಯದಲ್ಲಿ ಈ ಸಣ್ಣಕಥಾ ಪ್ರಕಾರವು ಹುಟ್ಟಿ ಬೆಳೆಯಿತು. ನವೋದಯ, ಪ್ರಗತಿಶೀಲ, ನವ್ಯ

ಮತ್ತು ದಲಿತ-ಬಂಡಾಯವೆಂಬ ಸಾಹಿತ್ಯ ಘಟ್ಟಗಳಲ್ಲಿ ಈ ಕಥಾ ಸಾಹಿತ್ಯ ಪ್ರಕಾರ ಸಮೃದ್ಧವಾಗಿ ಬೆಳೆದು ಬಂದಿದೆ.

ಜೈನ ಕಥಾ ಸಾಹಿತ್ಯದ ಸೊಗಡನ್ನು ಅಳವಡಿಸಿಕೊಂಡು ಬೆಳೆದು ಬಂದಿತು. ಬಹುತೇಕ ಜೈನ ಕಥೆಗಳು ಧಾರ್ಮಿಕ ನೆಲೆಯಲ್ಲಿಯೇ ಹುಟ್ಟಿರುವಂಥದ್ದು. ಪುನರ್ಜನ್ಮದಲ್ಲಿ ನಂಬಿಕೆಯಿರುವ ಈ ಧರ್ಮವು ಭವಾವಳಿಯ ಮೂಲಕ ಪಾಪಕರ್ಮವನ್ನು ಅನುಭವಿಸಿ ಕೊನೆಗೆ ಕೈವಲ್ಯ ಜ್ಞಾನದಿಂದ ಮೋಕ್ಷ ಸಾಧನೆಯನ್ನು ಮಾಡಿಕೊಳ್ಳುತ್ತಿದ್ದರು. ಜೈನ ಕಥನಕ್ರಮ ಅತ್ಯಂತ ಕ್ಲಿಷ್ಟಕರವಾದದ್ದು. ಪುನರಾವರ್ತನೆಯ ವಾಕ್ಯಗಳು, ಗೊಂದಲಮಯ ಉಪಕಥೆಗಳು, ಪಾತ್ರಗಳ ಆಧಿಕ್ಯ, ಕಥೆಗಳ ದೀರ್ಘವ್ಯಾಪ್ತಿ ಈ ಎಲ್ಲಾ ಅಂಶಗಳು ಅದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ನವೋದಯ ಕಾಲದಲ್ಲಿ ಬರೆಯಲು ಆರಂಭಿಸಿದ ಗೌರಮ್ಮ ಕನ್ನಡದ ಪ್ರಥಮ ಬಂಡಾಯ ಮತ್ತು ಸ್ತ್ರೀ ವಿಮೋಚನಾವಾದೀ ಮನೋಭಾವವನ್ನು ಹೊಂದಿರುವಂತಹ ಲೇಖಕಿ. ಶ್ರೀಮತಿ ಬಿ.ಟಿ.ಜಿ. ಕೃಷ್ಣ ಕಥೆಗಾರ್ತಿಯಾಗಿ 'ಕೊಡಗಿನ ಗೌರಮ್ಮ' ಎಂದೇ ಚಿರಪರಿಚಿತರಾದರು. ಸಾಹಿತ್ಯ ಕ್ಷೇತ್ರಕ್ಕೆ ಮಹಿಳೆಯರು ಪ್ರವೇಶ ಮಾಡುವುದೇ ದುಃಸ್ಥಿರವಾಗಿದ್ದ ಪರಿಸ್ಥಿತಿಯಲ್ಲಿ ಗೌರಮ್ಮ ಸಾಹಿತ್ಯ ರಚನೆಗೆ ತೊಡಗಿದರು. ಅವರ ಕಥಾ ಸಂಕಲನಗಳು 'ಕಂಬನಿ' (೧೯೩೯) ಮತ್ತು 'ಚಿಗುರು' (೧೯೪೨) ನೇರವಾದ ಸರಳ ನಿರೂಪಣೆ, ವಾಸ್ತವದ ನೈಜ ಚಿತ್ರಣ, ಮನಮಿಡಿವ ಸನ್ನಿವೇಶಗಳಿಂದ ಕೂಡಿದ ಇವರ ಕಥೆಗಳು ಗಮನಾರ್ಹವಾದವು. ಮಾಸ್ತಿ, ಕುವೆಂಪು, ಕಾರಂತರ ಸಮಕಾಲೀನರಾಗಿದ್ದುಕೊಂಡು ಇವರು ಕಥೆ ಬರೆಯಲು ಆರಂಭಿಸಿದ್ದು ಮಹತ್ವಪೂರ್ಣ ಚಾರಿತ್ರಿಕ ಸಂಗತಿ. ಅಂದಿನ ಸಾಮಾಜಿಕ ವ್ಯವಸ್ಥೆಯೊಳಗಿನ ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆ ಪಿಡುಗು, ವೈದಿಕ ಧರ್ಮದ ಆಚರಣೆಯಲ್ಲಿನ ಪೀಡನೆ ಮೊದಲಾದ ಸಮಸ್ಯೆಗಳನ್ನು ತಮ್ಮ ಕಥೆಗಳ ವಸ್ತುವನ್ನಾಗಿಸಿಕೊಂಡು ಕಲಾತ್ಮಕವಾದ ಅಭಿವ್ಯಕ್ತಿ ನೀಡಿದರು. ಸ್ವಾತಂತ್ರ್ಯಪೂರ್ವದಲ್ಲಿಯೇ ಇಂಥ ಕ್ರಾಂತಿಕಾರಿ, ಆದರ್ಶ ವಸ್ತುವನ್ನು ಗೌರಮ್ಮ ನಿರ್ವಹಿಸಿದ್ದು ಆಶ್ಚರ್ಯದ ಸಂಗತಿಯಾಗಿದೆ.

ಸಂಪ್ರದಾಯಸ್ಥ ಸಮಾಜವೊಂದರಲ್ಲಿ ವಿಧವಾ ಸಮಸ್ಯೆ, ಹದಿಹರೆಯದವರ ಪ್ರೇಮ, ಕೌಟುಂಬಿಕ ಪ್ರೀತಿ, ಅಲ್ಲಿನ ಮಾನವೀಯ ಸಂಬಂಧಗಳು, ಶಿಕ್ಷಣ, ವರದಕ್ಷಿಣೆ, ಸೌಂದರ್ಯ ಪ್ರಜ್ಞೆ, ಜೀವನ ಪ್ರೀತಿ, ಜಾತಿ ಸಂಘರ್ಷ ಮುಂತಾದ ಹಲವು ಹತ್ತು ಕಟುವಾಸ್ತವಗಳು ಗೌರಮ್ಮನವರ ಕಿರಿದಾದ ಕಥೆಗಳ ಆವರಣದಲ್ಲಿ ಅತ್ಯಂತ ನವುರಾಗಿ ಚಿತ್ರಣಗೊಂಡಿವೆ. ಸಹಜವಾಗಿ ಮಹಿಳೆಯೇ ಇವರ ಎಲ್ಲಾ ಕಥೆಗಳ ಕೇಂದ್ರ ಕಾಳಜಿಯಾಗಿ ರೂಪುಗೊಂಡಿದ್ದಾಳೆ. ಇದರಿಂದಾಗಿ ಆ ಕಾಲಘಟ್ಟದಲ್ಲಿ ಸುಶಿಕ್ಷಿತ ಸಂಪ್ರದಾಯಸ್ಥ ಮಹಿಳೆಯರು ಎದುರಿಸುತ್ತಿದ್ದ ಕೌಟುಂಬಿಕ ಹಾಗೂ ಸಾಮಾಜಿಕ ಸಮಸ್ಯೆಗಳೇ ಗೌರಮ್ಮನವರ ಕಥೆಗಳ ದ್ರವ್ಯಗಳಾಗಿವೆ. ಅಪಾರವಾದ ಜೀವನ ಪ್ರೀತಿಯನ್ನು ಒಳಗೊಂಡಿರುವ ಇವರ ಕಥೆಗಳು ಎಂಥದ್ದೇ ಸಂದರ್ಭದಲ್ಲೂ ನಿರಾಶವಾದದ ಕೂಪಕ್ಕೆ ಬೀಳುವುದಿಲ್ಲ. ಕೌಟುಂಬಿಕ ಸಮಸ್ಯೆಗಳು, ಒಂಟಿತನ, ಬಡತನದ ಸ್ಥಿತಿಯಲ್ಲಿದ್ದರೂ ಇಲ್ಲಿನ ಪಾತ್ರಗಳು ಯಾವುದೇ ಹಂತದಲ್ಲೂ

ದ್ವೇಷ, ಅಸೂಯೆಗಳನ್ನು ವ್ಯಕ್ತಪಡಿಸದೇ ಎಲ್ಲ ಬಗೆಯ ಮಿತಿಗಳನ್ನು ಮೀರಿ ಅಪರಿಮಿತ ಜೀವನೋತ್ಸಾಹದಿಂದ ತುಳುಕುತ್ತವೆ. ಸಣ್ಣತನಗಳಿಂದ ಹೊರತಾಗಿರುವ ಮತ್ತು ಅದೇ ಹೊತ್ತಲ್ಲಿ ಜಾತಿ-ಮತಗಳನ್ನು ಮೀರಿದ ಮಾನವೀಯ ಪರಿಸರಕ್ಕಾಗಿ ನಿರಂತರವಾಗಿ ಹಂಬಲಿಸುತ್ತವೆ.

ಗೌರಮ್ಮನವರ ಇಪ್ಪತ್ತೊಂದು ಕಥೆಗಳಲ್ಲಿ ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ ಹಾಗೂ ಮನದಾಳದ ಅನ್ನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜವೊಂದರ ಆಶಯಗಳನ್ನು ಪ್ರತಿಬಿಂಬಿಸುವ ತ್ರಾಣವಿರುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು. ಸಾಂಪ್ರದಾಯಿಕ ವಾತಾವರಣದಲ್ಲಿ ಹುಟ್ಟಿ ಕೂಡಾ ಗೌರಮ್ಮ ತೀರಾ ಆರೋಗ್ಯಕರ ನಿಲುವಿನ, ಜಾತ್ಯತೀತ ಮನೋಧರ್ಮದ, ಮಾನವೀಯ ವಿವರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿರುವ ಅಪಾರ ಜೀವನ ಪ್ರೀತಿಯ ಕಥೆಗಾರ್ತಿಯಾಗಿದ್ದಾರೆ. ನಮ್ಮ ಭಾರತೀಯ ಸಮಾಜದಲ್ಲಿ ಎಲ್ಲಾ ರೀತಿಯ ಹಿನ್ನೆಲೆಗಳಿಂದ ಬಂದ ಮಹಿಳೆಯರೂ ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಇವರು ಸ್ಪಷ್ಟವಾಗಿ ಗ್ರಹಿಸಿರುವುದು ಗಮನಾರ್ಹವಾಗಿದೆ. ಸಮಾಜದ ವಿಕೃತ ಹಾಗೂ ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವು ಹೆಚ್ಚಿನ ಕಥೆಗಳಲ್ಲಿ ಆಗಿರುವುದನ್ನು ಇಲ್ಲಿ ಕಾಣುತ್ತೇವೆ. ಹೊಸ ಬದುಕಿನ ಕನಸಿನ ಕಿರಣಗಳ ಬಾಲವಿಧವೆಯರು ಹಾಗೂ ಜೀವನ ಪ್ರೀತಿಯ ದ್ಯೋತಕವಾಗಿರುವ ವಿವಿಧ ಪಾತ್ರಗಳಲ್ಲಿ ಕಂಡುಬರುವ ಸ್ವಾಭಿಮಾನ ಮತ್ತು ಸ್ವಪ್ರಯತ್ನಗಳ ಮೂಲಕ ಹೊಸ ಸಾಧ್ಯತೆಗಳು ಅರಸುವ ಸ್ತ್ರೀ-ಚೇತನಗಳ ಆಶಾವಾದ ನಿಜಕ್ಕೂ ದೊಡ್ಡದು. ಇಲ್ಲಿಯ ಬೇರೆ ಬೇರೆ ಹಿನ್ನೆಲೆಗಳ ಪ್ರೇಮಿಗಳು ತಮ್ಮ ದಾರಿಗಳಲ್ಲಿ ಕಾಣುವ ಆತಂಕಗಳ, ಉಸಿರು ಕಟ್ಟಿಸುವ ಚಿತ್ರಣವು ದಿಗಿಲು ಹುಟ್ಟಿಸುತ್ತದೆ. ಗೌರಮ್ಮ ತಮ್ಮ ಸಾವಿನ ಮುನ್ನಾದಿನ ಬರೆದಿರುವ ಹಾಗೂ ಹೋಗಿಯೇ ಬಿಟ್ಟಿದ್ದ ಕಥೆಗಳಲ್ಲಿ ಕಾರ್ಮಿಕಲೋಕದ ಪ್ರಾಮಾಣಿಕ ಮನಸ್ಸುಗಳು ಜಾತಿ, ಮತ ಧರ್ಮದ ಒಣಚೌಕಟ್ಟುಗಳನ್ನು ದಾಟುತ್ತ ಹೇಗೆ ಕ್ರಿಯಾಶೀಲವಾಗುತ್ತವೆಂಬುದರ ವಿವರಗಳಿವೆ. ಇಷ್ಟೆಲ್ಲಾ ಹೊಸ ಬದುಕಿನ ಕಾಳಜಿಗಳನ್ನು ಹೊಂದಿದ್ದ ಗೌರಮ್ಮ, ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು.

ಗೌರಮ್ಮನವರ ಮೊದಲ ಕಥೆಯಾದ ಪುನರ್ವಿವಾಹದ ರಾಜಿಯಿಂದ ಹಿಡಿದು ಕೊನೆಯ ಕಥೆಯಾದ ಮುನ್ನಾದಿನದ ನಾಯಕಿ ಹುಸೇನ್‌ಬೀಯಂಥ ನಾಯಕಿಯರ ಪಾತ್ರಗಳು ಅವರ ಕಥೆಗಳಲ್ಲಿ ಸೊಗಸಾಗಿ ಅರಳಿ ನಿಂತಿವೆ. ಗೌರಮ್ಮನವರ ಕಥೆಗಳಲ್ಲಿನ ಪ್ರತಿಯೊಬ್ಬ ನಾಯಕಿಯರ ಜೀವನವು ಏರಿಳಿತಗಳಿಂದ ಕೂಡಿರುವಂಥದ್ದು. ಕೆಲವು ನಾಯಕಿಯರ ಜೀವನ ಗುರಿಯನ್ನು ಮುಟ್ಟಿದರೆ ಇನ್ನೂ ಕೆಲವು ನಾಯಕಿಯರ ಜೀವನ ದುರಂತ ಅಂತ್ಯ ಕಾಣುವುದು. ಒಟ್ಟಿನಲ್ಲಿ ಈ ನಾಯಕಿಯರುಗಳ ವರ್ಣಮಯ ಬದುಕನ್ನು ಗೌರಮ್ಮನವರು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಕಥೆಯನ್ನು ಓದುತ್ತಾ ಹೋದ ಹಾಗೇ ಕಣ್ಣ ಮುಂದೆಯೇ ಹೆಣ್ಣೊಬ್ಬಳು ರೋದಿಸುತ್ತಿರುವಳೇನೋ ಎನ್ನುವಂತೆ ಇವರ ಕಥೆಗಳ ನಾಯಕಿಯರುಗಳ ಪಾತ್ರಗಳು ಭಾವುಕತೆಯನ್ನುಂಟು ಮಾಡುತ್ತವೆ. ಪುನರ್ವಿವಾಹದ 'ರಾಜಿ'ಯ

ಪಾತ್ರ ತುಂಬಾ ಗಟ್ಟಿಯಾಗಿ ಮೂಡಿ ಬಂದರೆ, ವಾಣಿಯ ಸಮಸ್ಯೆಯ ಇಂದು, ಸುಳ್ಳು ಸ್ವಪ್ನದ 'ಸರಸಿ', ಒಂದು ಪುಟ್ಟ ಚಿತ್ರದ 'ಶಾಂತಿ', ಅದೃಷ್ಟದ ಆಟದ 'ಲತಾ' ನಾಯಕಿಯರ ಪಾತ್ರಗಳು ಮರೆಯಲಾಗದಂತಹ ಪಾತ್ರಗಳಾಗಿ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರುತ್ತವೆ. ಅದೇ ರೀತಿ ಕೌಸಲ್ಯನಂದನದ 'ಲಿನ್ನೀ', ಮರದ ಬೊಂಬೆಯ 'ಶೈಲಾ' ಅತ್ಯಂತ ಲವಲವಿಕೆಯ ಪಾತ್ರಗಳಾಗಿ ಮನಸ್ಸಿಗೆ ಹರ್ಷವನ್ನುಂಟುಮಾಡುತ್ತವೆ. ಗೌರಮ್ಮ ಮಹಿಳಾ ಸಮಸ್ಯೆಯನ್ನು ಮತ ಅಥವಾ ಜಾತಿಯಿಂದ ಪ್ರತ್ಯೇಕಿಸಿ ನೋಡಿದ್ದಾರೆ. ಜೊತೆಗೆ ಹೆಸರನ್ನು ಕೊಡುವಾಗಲೂ ಎಚ್ಚರಿಕೆಯಿಂದ, ರಾಜಿ, ಲಿನ್ನಿ, ವಾಣಿ, ಶಾಂತಿ, ರತ್ನ, ಇಂದು ಇತ್ಯಾದಿ ಜಾತಿ ಸೂಚಕವಲ್ಲದ ನಾಮಪದಗಳನ್ನೇ ಬಳಸಿದ್ದಾರೆ.

ಸಮಾಜದ ಮೇಲುಜಾತಿಯವರಲ್ಲಿ ಅಂದಿನ ತೀವ್ರತರ ಸಮಸ್ಯೆ, ವಿಧವೆಯರ ಕೇಶಮುಂಡನದ ಸಮಸ್ಯೆ, ವರದಕ್ಷಿಣೆ ಸಮಸ್ಯೆ, ಮಹಿಳೆಯರ ಮೇಲೆ ಶೋಷಣೆ, ಅತ್ಯಾಚಾರ, ಅವಮಾನಗಳನ್ನು ಅತ್ಯಂತ ನಿಕಟ ನೆಲೆಯಲ್ಲಿ ಗ್ರಹಿಸಿ ತಮ್ಮ ಕೃತಿಯಲ್ಲಿ ಅಂತಹ ಸಂದರ್ಭಗಳನ್ನು ಚರ್ಚೆಗೆ ಒಳಪಡಿಸಿ ಅಂತಹ ಆಚರಣೆಯನ್ನು ಬಲವಾಗಿ ವಿರೋಧಿಸಿದ್ದಾರೆ. ಸ್ತ್ರೀಯರ ಪರ-ವಿರುದ್ಧವಿರುವ ಜನರ ಮನೋವೃತ್ತಿಗಳನ್ನು ತಮ್ಮ ಕಥೆಗಳ ಪಾತ್ರಗಳಲ್ಲಿ ಕಲ್ಪಿಸಿ ನಾಯಕಿಯರ ಮೂಲಕ ಅಂತಹ ಜನರನ್ನೆಲ್ಲಾ ತಿದ್ದಿ ಸುಧಾರಿಸುವ ಬಗೆಯನ್ನು ಕುರಿತು ತಮ್ಮ ಕಥೆಗಳ ಮೂಲಕ ಅಂತಹ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಆ ಕಾಲದ ಕಥೆಗಾರರ ಸಾಲಿನಲ್ಲಿ ಪ್ರತಿಭೆ ಮತ್ತು ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಗೌರಮ್ಮನವರಿಗೆ ವಿಶಿಷ್ಟವಾದ ಸ್ಥಾನ ಲಭ್ಯವಾಗಿದೆ. ಅವರು ಬರೆಯಲಾರಂಭಿಸಿದಾಗ ಇನ್ನೂ ಕನ್ನಡ ಸಣ್ಣಕಥೆಗಳ ರಚನೆಯ ಆರಂಭಾವಸ್ಥೆ. ಆಗ ಗೌರಮ್ಮ ತಮ್ಮ ಅಭಿವ್ಯಕ್ತಿಗೆ ಆ ಪ್ರಕಾರವನ್ನು ಆಯ್ದುಕೊಂಡು ಗಮನಸೆಳೆದರು. ತರುಣ ಸಮುದಾಯದ ಮುಗ್ಧ ಪ್ರೇಮ, ವಿವಾಹದ ಕನಸು, ಕಾಮ ವಂಚನೆ, ಪ್ರೇಮದ ನಿರಾಸೆ, ಮಧ್ಯಮವರ್ಗದ ಮದುವೆಗಳು, ಪುನರ್‌ವಿವಾಹದಂತಹ ಆದರ್ಶದ ಕನಸುಗಾರಿಕೆ ಇವೆಲ್ಲವನ್ನೂ ಹಲವಾರು ಆಯಾಮಗಳೊಂದಿಗೆ, ಸ್ತ್ರೀಪರ ನಿಲುವಿನೊಂದಿಗೆ ಪ್ರಚುರಪಡಿಸಿದರು. ಅವರ ಕಥೆಗಳು ಎತ್ತುವ ಸಮಸ್ಯೆ ಹಾಗೂ ಪ್ರಶ್ನೆಗಳು ಅಂದಿನ ಕಾಲಕ್ಕೆ ತೀರಾ ಹೊಸದೆನಿಸಿದವು. ಅಲ್ಲಿ ಒಣಘೋಷಣೆಯಾಗಲಿ, ವಿಚಾರಗಳ ಹೊರೆಯಾಗಲಿ ಕಂಡು ಬರುವುದಿಲ್ಲ. ಸಮಸ್ಯೆಗಳ ಒಳನೋಟ, ನೇರ ಹಾಗೂ ಸರಳ ಅಭಿವ್ಯಕ್ತಿ ತಂತ್ರಗಳು ಕಥೆಯ ಕಲಾತ್ಮಕತೆಗೆ ಹೆಚ್ಚಿನ ಭಂಗ ತರುವಂತಿಲ್ಲ. ಹೆಣ್ಣಿನ ಬಾಳಿನ ಆಪ್ತ ನಿರೂಪಣೆ ಮೊದಲಿಗೆಂಬಂತೆ ಇವರ ಕಥೆಗಳಲ್ಲಿ ಒಡಮೂಡಿದೆ. ಗೌರಮ್ಮ ವೈಚಾರಿಕ ನಿಲುವಿನ ಪ್ರಯೋಗಶೀಲ ಕಥೆಗಾರ್ತಿಯಾಗಿ ಕಂಡು ಬರುತ್ತಾರೆ. ಇವರ ಕಥೆಗಳ ಪಾತ್ರಗಳು ತಮ್ಮ ದಿಟ್ಟ ನಿಲುವುಗಳಿಂದ ಗಮನಸೆಳೆಯತ್ತವೆ.

ಪ್ರೇಮ, ಮದುವೆ, ಗೆಳೆತನಗಳ ಸುತ್ತಾ ಹೆಣೆದಿರುವ ಕಥೆಗಳಲ್ಲಿ ವ್ಯಕ್ತವಾಗುವ ಲಿಂಗಭೇದ, ಲಿಂಗ ಅಸಮಾನತೆಗಳು ಮಾತ್ರ ತೋರಿಕೆಯ ತೆಳು ಸ್ವರೂಪದಲ್ಲೇ ತೀವ್ರವಾದ ಪರಿಣಾಮಗಳನ್ನುಂಟು ಮಾಡುತ್ತವೆ. ಈ 'ಲಿಂಗಪ್ರಜ್ಞೆ'ಯೇ ಗೌರಮ್ಮನವರ ಎಲ್ಲಾ ಕಥೆಗಳಲ್ಲೂ ಹೆಣ್ತನದ ಎರಕವನ್ನು ಅಚ್ಚು

ಮಾಡಿರುವುದು. ಗೌರಮ್ಮ ಖಚಿತವಾದ ನೆಲೆಯಲ್ಲಿ ನಿಂತೇ ಬರೆದಿದ್ದಾರೆ. ಹಾಗೆಂದೇ ಮಿತವಾದ ಹರಹಿನಲ್ಲೂ ಅವರು ಅರ್ಥಪೂರ್ಣವಾದದ್ದನ್ನು ಪರಿಣಾಮಕಾರಿಯಾಗಿ ಹೇಳಬಲ್ಲರು. ಒಬ್ಬ ಲೇಖಕಿಯ ಅನುಭವ ಪ್ರಪಂಚದಷ್ಟು ವಿಶಾಲವಲ್ಲವೆಂದೂ, ಅದರಿಂದ ಆಕೆಯ ಬರಹ ಸಾಮಾನ್ಯವಾಗಿ ಸೀಮಿತ ಆಶಯವುಳ್ಳದ್ದೆಂದೂ ಅದು ನೇತ್ಯಾತ್ಮಕವೋ, ಸಹಾನುಭೂತಿಯುಳ್ಳದ್ದೋ ಎಂಬ ಪರಿವೆಯೂ ಇಲ್ಲದಂತೆ ಆಗಾಗ ಹೇಳಿಕೆಗಳನ್ನು ಮಾಡಲಾಗುತ್ತಿರುತ್ತಾರೆ. ಗೌರಮ್ಮನವರ ಕಥೆಗಳನ್ನು ಓದಿದಾಗ ತಾನು ಕಂಡ ಸಮಾಜವನ್ನು ಸೂಕ್ಷ್ಮವಾಗಿ ಗ್ರಹಿಸುವ ಯಾವುದೇ ಲೇಖಕಿ ಪರಿಣಾಮಕಾರಿಯಾಗಿ ಬರೆಯಲು ಸಾಧ್ಯ ಎನ್ನುವುದು ಮನದಟ್ಟಾಗುತ್ತದೆ. ಹೀಗಾಗಿ, ಹೆಣ್ಣಿನ ವಿಶಿಷ್ಟ ಗ್ರಹಿಕೆಗಳನ್ನು ಗಮನಿಸಿಯೂ ಓರ್ವ ಲೇಖಕಿಯೆಂದೂ, ತುಂಬಾ ಹಿಂದೆಯೇ ಕಥೆಗಳನ್ನು ಬರೆದವರೆಂದೂ ಯಾವ ವಿಮರ್ಶಕರೂ ರಿಯಾಯಿತಿ ತೋರುವ ಭಂಗಿಯನ್ನು ಮರೆಯುವ ಅವಕಾಶ ಇಲ್ಲಿ ಇಲ್ಲ.

ಲಿಂಗ ಅಸಮಾನತೆಯನ್ನು ಶೋಧಿಸುವುದೇ ಗೌರಮ್ಮನವರ ಬರವಣಿಗೆಯ ಪ್ರಧಾನ ಕಾಳಜಿ. ಇವರ ಅನೇಕ ಕಥೆಗಳ ಮುಕ್ತಾಯ ಸಮಸ್ಯೆಗಳ ಸರಳೀಕೃತ ಪರಿಹಾರಗಳೆಂದು ಮೇಲ್‌ನೋಟಕ್ಕೆ ಕಂಡು ಬಂದರೂ ಕಥೆಗಳು ನಿಯೋಜಿಸುವ ಅರಿವಿನ ಸ್ಫೋಟಕ್ಕೇನೂ ಅಂತಹ ಭಂಗ ಬರುವುದಿಲ್ಲ. ಆತ್ಮಹತ್ಯೆಯಾಗಲಿ, ಮತಾಂತರವಾಗಲೀ, ಗೌರಮ್ಮನ ಕಥೆಗಳಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಗಳೆಂಬಂತೆ ಅತ್ಯಂತಿಕವಾದ ತಾತ್ವಿಕ ಧೋರಣೆಗಳಲ್ಲಿ ಸೂಚಿತವಾಗುವುದಿಲ್ಲವೆಂಬುದು ತುಂಬ ಮುಖ್ಯವಾದ ಅಂಶ. ಮತ್ತೊಂದು ದೃಷ್ಟಿಯಿಂದ ನೋಡುವುದಾದರೆ ಇವುಗಳ ಬಗ್ಗೆ ಗೌರಮ್ಮ ಭಾವುಕರಾಗಿಯೂ ಇಲ್ಲಿ ನಿರ್ದಿಷ್ಟ ಘಟನೆಗಳು ನಿರ್ದಿಷ್ಟ ಅಂತ್ಯವನ್ನು ಕಂಡುಕೊಂಡವು ಎಂದು, ಮೇಲುನೋಟಕ್ಕೆ ಭಾಸವಾಗುವಂಥ ತೀರ ನೇರವಾದ ನಿರೂಪಣಾ ತಂತ್ರವನ್ನು ಗೌರಮ್ಮ ಬಳಸಿದರೂ ಅವರ ಕಥೆಗಳನ್ನು ಒಟ್ಟಾಗಿ ನೋಡಿದಾಗ ಈ ಅಂತ್ಯವನ್ನು ಸಾಮಾಜಿಕ ಸಮಸ್ಯೆಗಳಿಗೆ ಅರ್ಥಪೂರ್ಣ ಪರಿಹಾರಗಳನ್ನು ಶೋಧಿಸುವಲ್ಲಿ ಗೌರಮ್ಮನವರ ವೈಯಕ್ತಿಕ ಕನಸುಗಳನ್ನು ತಲ್ಲಣಗಳನ್ನು ಕೆಲವೊಮ್ಮೆ ಕೇವಲ ಭಾವುಕ ಅಪೇಕ್ಷೆಗಳನ್ನು ಸೂಚಿಸುವುದರಿಂದ ಕುತೂಹಲಕಾರಿಯಾಗಿ ಕಾಣುತ್ತದೆ. ಒಟ್ಟಿನಲ್ಲಿ ಗೌರಮ್ಮನವರ ಕಲ್ಪನೆಯ ಕೂಸುಗಳಂತೆ ಮೂಡಿಬಂದಿರುವ ಈ ನಾಯಕಿಯರು ಅವರ ಕಥೆಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ಹೇಳಬಹುದು. ಸಾಮಾಜಿಕ ವ್ಯವಸ್ಥೆ ರೂಪಿಸುವ ಮೌಲ್ಯಗಳು ಆಚರಣೆಯ ಹಂತದಲ್ಲಿ ಸ್ತ್ರೀಯ ಮಾನವೀಯ ಸ್ಥಿತಿಯನ್ನು ಅವಮಾನಿಸುವ ಹತ್ತಿಕ್ಕುವ ರೀತಿಯಲ್ಲಿವೆ ಎಂಬ ಆಂತರಿಕ ತಳಮಳದ ಮೂಲವಾದದ ಅರಿವಾಗಿ ಇಲ್ಲಿ ಪ್ರತಿಪಾದಿತವಾಗುತ್ತದೆ. ಈ ಅರಿವು ಮೂಡಿದಾಗ ಇಲ್ಲಿನ ನಾಯಕಿಯರೂ ಪ್ರತಿಕ್ರಿಯೆ ತೋರುತ್ತಾರೆ. ಆದರೆ ಅದು ಆತ್ಮಹತ್ಯೆ ಇಲ್ಲವೆ, ಪಲಾಯನ, ಮತಾಂತರ ಅಥವಾ ತ್ಯಾಗದ ರೀತಿಯದು. ನಾಯಕಿಯರು ಸಮಸ್ಯೆಗೆ ಕಂಡುಕೊಂಡ ಪರಿಹಾರವಿದಾದರೂ ಲೇಖಕಿ ಕಥೆಯ ಮೂಲಕ ಅದನ್ನು ಬೆಂಬಲಿಸದೆ ಆ ಸ್ಥಿತಿಯ ಬಗ್ಗೆ ಜನರಲ್ಲಿ ವಿಚಾರ ಪ್ರಚೋದನೆಯಾಗುವ ರೀತಿಯಲ್ಲಿ ತಮ್ಮ ಕಥಾತಂತ್ರವನ್ನು ರೂಪಿಸಿಕೊಳ್ಳುತ್ತಾರೆ. ಸಮಸ್ಯೆ ಯನ್ನು ಚಿತ್ರಿಸಿದರೂ ಸುಲಭ ಪರಿಹಾರ ನೀಡಲಾಗದ ಕಲೆಯ ಬಿಕ್ಕಟ್ಟು ಮೊದಲ ಬಾರಿಗೆ ಇಲ್ಲಿ ಕಾಣಿಸಿಕೊಳ್ಳುತ್ತದೆ.

ಸಾಂಪ್ರದಾಯಿಕ ಮನೆತನದಲ್ಲಿ ಹುಟ್ಟಿ ಬೆಳೆದು ಬಂದವರಾಗಿದ್ದರೂ ಹೊರಗಿನ ಪರಿಸರದ ಪ್ರಭಾವ ಅಷ್ಟಾಗಿ ಆಗದೇ ಇದ್ದಾಗಲೂ ತಮ್ಮ ಇತಿಮಿತಿಯಲ್ಲಿಯೆ ಸಾಮಾಜಿಕ ಜೀವನದ ಬಗ್ಗೆ ಕಾಳಜಿಪೂರ್ವಕವಾಗಿ ಬೌದ್ಧಿಕವಾಗಿ ಚಿಂತನಗೈಯ್ಯುವ ಮಾನಸಿಕ ಗಟ್ಟಿತನವನ್ನು ಗೌರಮ್ಮನವರಲ್ಲಿ ಕಾಣುತ್ತೇವೆ. ಪ್ರೀತಿ ಪ್ರೇಮದಂಥ ಮಾನವ ಸಹಜ ಬಯಕೆಗಳು ಸಾಮಾಜಿಕವಾಗಿ ಹತ್ತಿಕ್ಕಲ್ಪಟ್ಟಾಗ ಮತ್ತು ಆರ್ಥಿಕ ವ್ಯವಸ್ಥೆ ಅವುಗಳನ್ನು ನಿಯಂತ್ರಿಸುತ್ತವೆ ಎಂಬುದು ತಿಳಿದುಕೊಂಡು ಅದರ ದುರಂತ ಗಳನ್ನು ಹೇಳುವ ಕಲೆಗಾರಿಕೆ, ಆರಿಸಿಕೊಂಡ ವಸ್ತುವಿನ ಗಂಭೀರತೆ, ಸರಳತೆಗಳನ್ನು ಅರ್ಥೈಸಿಕೊಂಡು ನಿರೂಪಿಸುವ ನೈಪುಣ್ಯ, ಯಾವುದೋ ಹಣೆಪಟ್ಟಿಗೆ ಅಂಟಿಕೊಳ್ಳದೆ ಕಲಾತ್ಮಕವಾಗಿ ಹೇಳುವ ಸ್ವಾತಂತ್ರ್ಯ, ಸಮಾಜದ ಅಂಕುಡೊಂಕುಗಳನ್ನು, ಪುರುಷರ ದೌರ್ಜನ್ಯ, ದಬ್ಬಾಳಿಕೆಗಳನ್ನು ಕಂಡು ಆವೇಶಕ್ಕೆ ಒಳಗಾಗಿ ಸಮಷ್ಟಿ ಪ್ರಜ್ಞೆಯನ್ನು ಮರೆತು ವ್ಯಕ್ತಿನಿಷ್ಠವಾಗಿ ದೂಷಿಸದೆ, ಹೊಸ ಆಲೋಚನೆಗಳನ್ನು ಸಾಧ್ಯವಿದ್ದಲ್ಲಿ, ಒತ್ತಾಯಪೂರ್ವಕವಾಗಿ ಹೇಳದೆ, ನವುರಾಗಿ ಹೇಳುವ ಜಾಣ್ಮೆ ಗೌರಮ್ಮನವರಲ್ಲಿ ಎದ್ದು ಕಾಣುವ ವೈಶಿಷ್ಟ್ಯಗಳಾಗಿವೆ. ಸಮಸ್ಯೆಗಳನ್ನು ಎಲ್ಲಾ ನಿಟ್ಟಿನಿಂದಲೂ ಸೂಕ್ಷ್ಮವಾಗಿ ಗ್ರಹಿಸುವುದು, ಗ್ರಹಿಸಿದ್ದಕ್ಕೆ ವಿವಿಧ ಪಾತ್ರಗಳ ದೃಷ್ಟಿಕೊನದ ಮೂಲಕ ಸಂಕೀರ್ಣ ವ್ಯಾಖ್ಯಾನ ನೀಡುವುದು. ಅದರ ನಿರೂಪಣೆಯಲ್ಲಿ ಏನೂ ಭಾವೋದ್ವೇಗವಿಲ್ಲದ ಧ್ವನಿಪೂರ್ಣ ಭಾಷೆಯನ್ನು ಬಳಸಿರುವ ಬಗೆ ಮುಂತಾದವುಗಳಲ್ಲಿ ಕೊಡಗಿನ ಗೌರಮ್ಮನವರ ಕಥೆಗಳು ವಿಶಿಷ್ಟವಾಗಿವೆ.

ಒಟ್ಟಾರೆಯಾಗಿ ವಸ್ತು, ತಂತ್ರ, ಭಾಷೆ, ಶೈಲಿ, ಧೋರಣೆ, ನಿರೂಪಣೆಯ ದೃಷ್ಟಿಯಿಂದ ಗೌರಮ್ಮ ನವರ ಕಥೆಗಳು ಸಾಧಿಸಿದ ಸಿದ್ಧಿ ಅಗಾಧವಾದುದು. ಕೆಲವು ಕಡೆ ಭಾಷೆ ಭಾವನಾರಹಿತವಾಗಿ ಭಾಷಣದ ರೂಪದಲ್ಲಿ ಬಂದು ಕೃತಕವೆನಿಸಿದರೂ ಒಟ್ಟು ಪರಿಣಾಮದ ದೃಷ್ಟಿಯಿಂದ ಕಥೆಗಳು ಓದುಗರ ಮೇಲೆ ಗಾಢವಾದ ಪರಿಣಾಮವನ್ನು ಬೀರುವಲ್ಲಿ ಯಶಸ್ವಿಯಾಗಿವೆ.

• • •

ಪರಾಮರ್ಶನ ಗ್ರಂಥಗಳು

೧. ಅಶೋಕ ಟಿ.ಪಿ., ಸಾಹಿತ್ಯ ಸಂದರ್ಭ (ಸಾಹಿತ್ಯ ವಿಮರ್ಶೆಯ ಲೇಖನಗಳು), ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೧.

೨. ಅಂಬಳಿಕೆ ಹಿರಿಯಣ್ಣ, ಸೈದ್ಧಾಂತಿಕ ಜಾನಪದ, ಪ್ರಜ್ವಲ್ ಪ್ರಕಾಶನ, ಮೈಸೂರು-೫೭೦೦೨೩, ೧೯೯೨.

೩. ಅನಂತರಂಗಾಚಾರ್ಯ.ಎನ್., ದುರ್ಗಸಿಂಹ ವಿರಚಿತ ಕರ್ನಾಟಕ ಪಂಚತಂತ್ರ, ಶಾರದ ಮಂದಿರ, ಮೈಸೂರು, ೧೯೭೩.

೪. ಅಂಬಳಿಕೆ ಹಿರಿಯಣ್ಣ, ಜಾನಪದ ವಿವಕ್ಷೆ, ಪ್ರಜ್ವಲ್ ಪ್ರಕಾಶನ, ಮೈಸೂರು, ೧೯೮೬.

೫. ಆಮೂರ.ಜಿ.ಎಸ್., ಕನ್ನಡ ಕಥನ ಸಾಹಿತ್ಯ : ಸಣ್ಣಕತೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೩.

೬. ಶ್ರೀಮತಿ ಆರ್ಯಾಂಬ ಪಟ್ಟಾಬಿ (ಸಂ), ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, ಮೈಸೂರು, ೨೦೦೪.

೭. ಆಮೂರ.ಜಿ.ಎಸ್., ಕಥನಶಾಸ್ತ್ರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು, ೨೦೦೧.

೮. ಆಮೂರ.ಜಿ.ಎಸ್., ಅರ್ಥಲೋಕ, ಸ್ನೇಹ ಪ್ರಕಾಶನ, ಬೆಂಗಳೂರು, ೧೯೯೮.

೯. ಆರ್ಕ್ಮೀಯಸ್ ಸುಂದರಂ, ಜನಪದ ಸಾಹಿತ್ಯದ ಮೂಲತತ್ವಗಳು, ಅರ್ಕಾವತಿ ಪ್ರಕಾಶನ, ಮೈಸೂರು. ೧೯೭೬.

೧೦. ಕರೀಗೌಡ ಬೀಚನಹಳ್ಳಿ, ವ್ಯಷ್ಟಿ-ಸಮಷ್ಟಿ, ಅಜಂತಾ ಪ್ರಕಾಶನ, ಬೆಂಗಳೂರು, ೧೯೯೧.

೧೧. ಕಾಳೇಗೌಡ ನಾಗವಾರ (ಸಂ), ಜೀವನ ಪ್ರೀತಿ (ಕೊಡಗಿನ ಗೌರಮ್ಮ ಬರೆದ ಎಲ್ಲಾ ಕಥೆಗಳು), ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೨.

೧೨. ಕೀರ್ತಿನಾಥ ಕುರ್ತಕೋಟಿ, ಬಯಲು-ಆಲಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೨.

೧೩. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫.

೧೪. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯದರ್ಶನ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೦೨.

೧೫. ಕೃಷ್ಣಶಾಸ್ತ್ರೀ.ಎ.ಆರ್., ಕಥಾಮೃತ, ಗೀತಾಬುಕ್‌ಹೌಸ್, ಬೆಂಗಳೂರು, ೧೯೮೯.

೧೬. ಕೇಶವಶರ್ಮ.ಕೆ., ಸಣ್ಣಕತೆಯ ಕೆಲವು ಲೇಖನಗಳು, ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ (ದಕ್ಷಿಣ ಕನ್ನಡ), ೧೯೮೭.

೧೭. ಕೊಡಗಿನ ಗೌರಮ್ಮ, ಕಂಬನಿ, ಜಿ. ಕಲ್ಲಯ್ಯ ಅಂಡ್ ಸನ್ಸ್, ನಂ. ೨, ಕೆ.ವಿ.ಲೇನ್, ಅರಳೇಪೇಟೆ, ಬೆಂಗಳೂರು-೫೩, ೧೯೩೯.

೧೮. ಕೊಡಗಿನ ಗೌರಮ್ಮ, ಕಂಬನಿ ಮತ್ತು ಚಿಗುರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು-೫೬೦೦೦೨, ೧೯೮೫.

೧೯. ಕೋದಂಡರಾಮ.ಎನ್.ಕೆ., ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರು. ೧೯೯೬.

೨೦. ಖಡಬಡಿ.ಬಿ.ಕೆ., ವಡ್ಡಾರಾಧನೆ : ಸಂಶೋಧನಾತ್ಮಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೬.

೨೧. ಗಿರಡ್ಡಿ ಗೋವಿಂದರಾಜು, ಸಣ್ಣಕತೆಯ ಹೊಸ ಒಲವುಗಳು, ಅನಂತಮೂರ್ತಿ ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೬೫.

೨೨. ಗಿರಡ್ಡಿ ಗೋವಿಂದರಾಜು, ಸಾತತ್ಯ, ಸ್ನೇಹ ಪ್ರಕಾಶನ, ವಿಜಯನಗರ, ಬೆಂಗಳೂರು, ೧೯೯೨.

೨೩. ಗಿರಿಜಾಶಾಸ್ತ್ರಿ, ಕಥಾಮಾನಸಿ, ಸಾಹಿತ್ಯ ಪ್ರಕಾಶನ, ಮುಂಬಯಿ, ೨೦೦೦.

೨೪. ಗಿರಿಜಾಶಾಸ್ತ್ರಿ, ಆಧುನಿಕ ಕನ್ನಡ ಸಣ್ಣಕಥೆಗಳು : ಒಂದು ಸ್ತ್ರೀವಾದಿ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೨೫. ಚನ್ನವೀರಪ್ಪ.ಎಸ್.ಆರ್. ಮುಕ್ತಿಯ ಪರಿಕಲ್ಪನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೬. ಜಯಚಂದ್ರ.ಎಂ.ಎ., ಪ್ರಾಚೀನ ಕನ್ನಡ ಜೈನ ಸಾಹಿತ್ಯ ಜಾನಪದ ಕಥೆಗಳು : ಒಂದು ಅಧ್ಯಯನ.

೨೭. ಜೋಶಿ.ಜಿ.ಬಿ., ಕುರ್ತಕೋಟಿ.ಕೆ.ಡಿ.(ಸಂ), ಪುಟಬಂಗಾರ (ಸಂಪುಟ-೪), ಮನೋಹರ ಗ್ರಂಥಮಾಲಾ, ಧಾರವಾಡ-೫೮೦೦೦೧, ೧೯೮೭.

೨೮. ನರಸಿಂಹಚಾರ್ಯ.ಡಿ.ಎಲ್. (ಸಂ), **ಶಿವಕೋಟ್ಯಾಚಾರ್ಯ ವಿರಚಿತ ವಡ್ಡಾರಾಧನೆ**, ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪, ೧೯೯೩.

೨೯. ನಾಯಕ.ಜಿ.ಎಚ್. (ಸಂ), **ಕನ್ನಡ ಸಣ್ಣಕಥೆಗಳು**, ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ, ೧೯೭೮.

೩೦. ಪ್ರಸಾದಸ್ವಾಮಿ.ಎಸ್., **ಕಥೆ-ಕಥನ**, ಧಾತ್ರಿ ಪುಸ್ತಕ ಪ್ರಕಾಶನ, ವಿನಾಯಕ ಬಡಾವಣೆ, ಬೆಂಗಳೂರು-೭೨, ೨೦೦೭.

೩೧. ಬರಗೂರು ರಾಮಚಂದ್ರಪ್ಪ ಮತ್ತಿತರು (ಸಂ), **ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೬.

೩೨. ಬಾಳಾಸಾಹೇಬ ಲೋಕಾಪುರ, **ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ಜೈನ ಸಂವೇದನೆ**, ಬ್ಯಾಲದಕೆರೆ ಪ್ರಕಾಶನ, ಮಂಡ್ಯ, ೨೦೦೫.

೩೩. ಬಿರಾದಾರ.ಎಂ.ಜಿ. ಮತ್ತು ಇತರರು (ಸಂ), **ಜನಪದ ನೂರೆಂಟು ಕಥೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ-೫೮೫೧೦೬, ೧೯೮೭.

೩೪. ಭೈರಪ್ಪ.ಎಸ್.ಎಲ್., **ಕಥೆ ಮತ್ತು ಕಥಾವಸ್ತು**, ಸಾಹಿತ್ಯ ಭಂಡಾರ, ಬೆಂಗಳೂರು, ೨೦೦೩.

೩೫. ಮಲ್ಲಿಕಾಘಂಟಿ, **ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ**, ಯುವಲೋಕ ಪ್ರಕಾಶನ, ಧಾರವಾಡ, ೧೯೯೪.

೩೬. ಮುಕ್ತಾಯಿ.ಎಂ.ಎನ್., **ಕೊಡಗಿನ ಗೌರಮ್ಮ**, ಸಪ್ನ ಬುಕ್ ಹೌಸ್, ಬೆಂಗಳೂರು, ೨೦೦೬.

೩೭. ರಹಮತ್ ತರೀಕೆರೆ (ಸಂ), **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೨.

೩೮. ಲಕ್ಕಪ್ಪಗೌಡ.ಎಚ್.ಜೆ. **ಕಥಾವಲೋಕನ**, ಶೈನಿ ಪಬ್ಲಿಕೇಷನ್, ವಿಜಯನಗರ ಬಡಾವಣೆ, ಬೆಂಗಳೂರು, ೧೯೭೮.

೩೯. ಲೀಲಾಭಟ್.ಬಿ. (ಸಂ), **ಎಮ್.ಎನ್. ಕಾಮತ್ ಕೃತಿಗಳು (ಸಂಪುಟ-೪)**, ಕರ್ನಾಟಕ ಸಂಘ, ಪುತ್ತೂರು-೫೭೪೨೦೧ (ದಕ್ಷಿಣ ಕನ್ನಡ), ೧೯೯೫.

೪೦. ವರದರಾಜ ಹುಯಿಲಗೋಳ, **ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ**, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೭೬.

೪೧. ವರದರಾಜ ಹುಯಿಲಗೋಳ, **ಪಂಚತಂತ್ರದ ಕಥೆಗಳು**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬.

೪೨. ವಿಜಯ.ಡಿ., **ಸಂಪ್ರತಿ** (ವಿಚಾರ ವಿಮರ್ಶೆ), ಗೀತಾಬುಕ್ ಹೌಸ್, ಮೈಸೂರು. ೧೯೭೭.

೪೩. ವೀರಣ್ಣ ದಂಡೆ, **ಜನಪದ ಕಥೆಯ ವಸ್ತು ಮತ್ತು ತಂತ್ರ ಹಾಗೂ ಇನ್ನಿತರ ಲೇಖನಗಳು**, ಬಸವ ಪ್ರಕಾಶನ, ಕಲಬುರ್ಗಿ, ೧೯೮೧.

೪೪. ವೆಂಕಟಲಕ್ಷ್ಮಿ.ಬಿ.ಎಸ್., **ಕನ್ನಡ ಲೇಖಕಿಯರ ನೆಲೆ-ಬೆಲೆ**, ಎನ್.ಟಿ. ಶ್ಯಾಂ ಪ್ರಕಾಶನ, ಬೆಂಗಳೂರು, ೧೯೯೧.

೪೫. ಶಂಕರ್.ಡಿ.ಎ. (ಅನು), **ಕಥಾಕೋಶ**, ಅಕ್ಷರ ಪ್ರಕಾಶನ, ಸಾಗರ ಹೆಗ್ಗೋಡು, ೧೯೯೩.

೪೬. ಸುಮಿತ್ರಾಬಾಯಿ.ಬಿ.ಎನ್., **ವಿಚಯ (ಕನ್ನಡ ಸಾಹಿತ್ಯದ ಒಂದು ಸ್ತ್ರೀವಾದಿ ಅಧ್ಯಯನ)**, ಇಳಾ ಪ್ರಕಾಶನ, ಬೆಂಗಳೂರು-೫೬೦೦೧೮, ೧೯೯೫.

೪೭. ಹೆಗಡೆ.ಎಂ.ಜಿ. (ಸಂ), **ಸಾಹಿತ್ಯ ವಿಮರ್ಶೆ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೪.

೪೮. ಹಂಪನಾಗರಾಜಯ್ಯ, **ವಡ್ಡಾರಾಧನೆ-ಸಮಗ್ರ ಅಧ್ಯಯನ**, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ೧೯೯೯.

• • •